ಶ್ರೀಃ

# ವಿಶಿಷ್ಟಾದ್ವೈತದ ಪರಮಾಧಾರಗಳು

ವೇದವಾರಿಧಿ ಶೋ.ಪ. ರಾಮಾನುಜನ್

(7.5.1989 ರಂದು ಬೆಂಗಳೂರಿನ ಮಲ್ಲೇಶ್ವರದಲ್ಲಿ 'ಆದರ್ಶ ಶೈಕ್ಷಣಿಕ ಹಾಗೂ ಸಾಮಾಜಿಕ ಸೇವಾ ಟ್ರಸ್ಟ್' ವತಿಯಿಂದ ನಡೆಸಲ್ಪಟ್ಟ "ವಿಶಿಷ್ಟಾದ್ವೈತ - ಇಂದು, ನಾಳೆ" ಎಂಬ ವಿಚಾರಸಂಕಿರಣದಲ್ಲಿ ಪ್ರತಿಪಾದಿಸಲ್ಪಟ್ಟ ಲೇಖನ.)

ಶ್ರೀ ವಿಶಿಷ್ಟಾದ್ವೈತ ದರ್ಶನದ ಪ್ರವರ್ತನವು ಪರಮಾತ್ಮನ ಅಂಶಾವತಾರರಾದ ಶ್ರೀಮದ್ವೇದವ್ಯಾಸ ಮಹರ್ಷಿಗಳಿಂದ ಅವರ ಬ್ರಹ್ಮಸೂತ್ರಗಳಲ್ಲಿ ಮಾಡಲ್ಪಟ್ಟಿದ್ದು ನಂತರ ಬೋಧಾಯನ, ಟಂಕ, ದ್ರಮಿಡ, ಗುಹದೇವ, ಭಾರುಚಿ, ಬ್ರಹ್ಮನಂದಿ ಮುಂತಾದ ಆರ್ಷ ಪರಂಪರೆ ಮತ್ತು ಶಠಕೋಪರೆಂಬ ನಮ್ಮಾಳ್ವಾರ್, ನಾಥಮುನಿ, ಯಾಮುನಮುನಿ ಮುಂತಾದ ಆಚಾರ್ಯ ಪರಂಪರೆ ಮುಖೇನ ಭಗವದ್ರಾಮಾನುಜರವರೆಗೂ ಅವಿಚ್ಛಿನ್ನವಾಗಿ ಬಂದು ಅವರ ಗ್ರಂಥಗಳಿಂದ ಪುಷ್ಟಿಯನ್ನು ಪಡೆದು ವಿಶ್ವತೋಮುಖವಾಗಿ ವ್ಯಾಪಿಸಿದೆ. ಈ ದರ್ಶನದ ಪ್ರಮುಖ ಅಂಶಗಳನ್ನೂ, ಅವಕ್ಕೆ ತಕ್ಕ ಆಧಾರಗಳನ್ನೂ ಇಲ್ಲಿ ಸಂಗ್ರಹಿಸಿದೆ.

ಅಚೇತನ (ಚೈತನ್ಯ[= ಜ್ಞಾನ]ವಿಲ್ಲದ) ವಸ್ತುವಿಗಿಂತ ಸ್ವರೂಪದಿಂದಲೂ, ಸ್ವಭಾವದಿಂದಲೂ ಬಹಳ ವಿಭಿನ್ನವಾಗಿದ್ದು ಆ ಅಚೇತನ ವಸ್ತುವಿಗೆ ಆತ್ಮನಾಗಿರುವವನು ಜೀವಾತ್ಮ (ಚೇತನ). ಈ ಜೀವಾತ್ಮರು ಅನೇಕರು ಮತ್ತು ಬದ್ಧ (ಸಂಸಾರಿ), ಮುಕ್ತ (ಸಾಧನಾನುಷ್ಠಾನಮಾಡಿ ಸಂಸಾರದಿಂದ ಬಿಡುಗಡೆ ಹೊಂದಿದವ) ಮತ್ತು ನಿತ್ಯ (ಎಂದೂ ಸಂಸಾರವಿಲ್ಲದೆ ಪ್ರಕೃತಿ ಮಂಡಲಕ್ಕೆ ಮೇಲಿರುವ ವೈಕುಂಠವೆಂಬ ಸ್ಥಾನದಲ್ಲಿ ಯಾವಾಗಲೂ ಭಗವಂತನ ಸೇವೆ ಮಾಡುವವ) ಎಂದು ಮೂರು ಬಗೆಯಾಗಿರುವರು. ಈ ಮೂರು ಬಗೆಯ ಚೇತನರಿಗಿಂತಲೂ ದೋಷಗಂಧವೇ ಅಂಟಲಾರದ ಮತ್ತು ಮಂಗಳ ಗುಣಗಳ ಆಕರವಾದ ಸ್ವಭಾವದಿಂದಲೂ, ಎಲ್ಲ ದಶೆಯಲ್ಲಿಯೂ ಚೇತನ ಮತ್ತು ಅಚೇತನ ವಸ್ತುಗಳನ್ನು ವ್ಯಾಪಿಸಿ, ಧರಿಸಿ, ನಿಯಮಿಸಿ, ಅವಕ್ಕೆ ಆತ್ಮನಾದ ಸ್ವಾಮಿಯಾಗಿ ಪರಮಾತ್ಮನು (ಈಶ್ವರ) ಅವೆರಡರಿಂದ ವಿಲಕ್ಷಣನಾಗಿರುವನು.

ಈ ಅಂಶಗಳನ್ನು, 'ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವ ಚ । ಕ್ಷರಸ್ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ ॥ ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ । ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ ॥ ಯಸ್ಮಾತ್ಕ್ಷರಮತೀತೋಽಹಮಕ್ಷರಾದಪಿ ಚೋತ್ತಮಃ । ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ ॥' (ಭ.ಗೀ. 15.16-18). [ಕೂಟಸ್ಥ - ಮುಕ್ತ ಸ್ವರೂಪ, 'ಯೇ ತ್ವಕ್ಷರಮನಿರ್ದೇಶ್ಯಮವ್ಯಕ್ತಂ ಪರ್ಯುಪಾಸತೇ । ಸರ್ವತ್ರಗಮಚಿನ್ತ್ಯಂ ಚ ಕೂಟಸ್ಥಮಚಲಂ ಧ್ರುವಂ ॥' (ಭ.ಗೀ. 12.3) ಎಂದಿರುವುದರಿಂದ], ಎಂದು ಗೀತೆಯಲ್ಲೂ,

ಶ್ರುತಿಯಲ್ಲಿ, 'ಪತಿಂ ವಿಶ್ವಸ್ಯಾತ್ಮೇಶ್ವರಂ', 'ಅನ್ತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ' (ತೈ.ಆ. 6.25), ಶ್ವೇತಾಶ್ವತರೋಪನಿಷತ್ತಲ್ಲಿ 'ಪ್ರಧಾನಕ್ಷೇತ್ರಜ್ಞಪತಿಃ ಗುಣೇಶಃ' (ಶ್ವೇ.ಉ. 6.33), 'ಕ್ಷರಂ ಪ್ರಧಾನಮಮೃತಾಕ್ಷರಂ ಹರಃ ಕ್ಷರಾತ್ಮಾನಾವೀಶತೇ ದೇವ ಏಕಃ' (1.10), 'ಸಂಯುಕ್ತಮೇತತ್ಕ್ಷರಮಕ್ಷರಂ ಚ ವ್ಯಕ್ತಾವ್ಯಕ್ತಂ ಭರತೇ ವಿಶ್ವಮೀಶಃ' (1.8), 'ಜ್ಞಾಜ್ಞೌ ದ್ವಾವಜಾವೀಶನೀಶೌ ಅಜಾ ಹ್ಯೇಕಾ ಭೋಕ್ತೃಭೋಗಾರ್ಥಯುಕ್ತಾ' (1.9), 'ಅನೀಶಶ್ಚಾತ್ಮಾ ಬಧ್ಯತೇ ಭೋಕ್ತೃಭಾವಾತ್' (1.8), 'ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ ಸರ್ವಂ ಪ್ರೋಕ್ತಂ ತ್ರಿವಿಧಂ ಬ್ರಹ್ಮಮೇತತ್' (1.12), 'ಅಸ್ಮಾತ್ ಮಾಯೀ ಸೃಜತೇ ವಿಶ್ವಮೇತತ್ ತಸ್ಮಿಂಶ್ಚಾನ್ಯಃ ಮಾಯಯಾ ಸನ್ನಿರುದ್ಧಃ' (4.9), 'ಮಾಯಾಂ ತು ಪ್ರಕೃತಿಂ ವಿದ್ಯಾತ್ ಮಾಯಿನಂ ತು ಮಹೇಶ್ವರಂ' (4.10), 'ಸ ಕಾರಣಂ ಕರಣಾಧಿಪಾಧಿಪಃ' (6.9), 'ಸಂಸಾರಮೋಕ್ಷ-ಸ್ಥಿತಿಬಂಧಹೇತುಃ' (6.16), 'ಗುಣಾನ್ವಯೋ ಯಃ ಫಲಕರ್ಮಕರ್ತಾ ಕೃತಸ್ಯ ತಸ್ಯೈವ ಸ ಚೋಪಭೋಕ್ತಾ । ಸ ವಿಶ್ವರೂಪಃ ತ್ರಿಗುಣಃ ತ್ರಿವರ್ತ್ಮಾ ಪ್ರಾಣಾಧಿಪಃ ಸಂಚರತಿ ಸ್ವಕರ್ಮಭಿಃ' (5.7), 'ಏಕೋ ದೇವಃ ಸರ್ವಭೂತೇಷು ಗೂಢಃ ಸರ್ವವ್ಯಾಪೀ ಸರ್ವಭೂತಾನ್ತರಾತ್ಮಾ । ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ' (6.11), 'ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ । ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತಿ ಅನಶ್ನನ್ನನ್ಯಃ ಅಭಿಚಾಕಶೀತಿ' (4.6), 'ಪರಾಸ್ಯ ಶಕ್ತಿಃ ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ' (6.8), 'ಯ ಈಶೇಽಸ್ಯ ಜಗತೋ ನಿತ್ಯಮೇವ ನಾನ್ಯೋ ಹೇತುಃ ವಿದ್ಯತ ಈಶನಾಯ' (6.17), 'ಸರ್ವಸ್ಯ ಶರಣಂ ಸುಹೃತ್' (3.17), 'ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಂ ಏಕೋ ಬಹೂನಾಂ ಯೋ ವಿದಧಾತಿ ಕಾಮಾನ್' (6.13), 'ಅಜಾಮೇಕಾಂ ಲೋಹಿತಶುಕ್ಲಕೃಷ್ಣಾಂ ಬಹ್ವೀಃ ಪ್ರಜಾಃ ಸೃಜಮಾನಾಂ ಸರೂಪಾಃ । ಅಜೋ ಹ್ಯೇಕೋ ಜುಷಮಾಣೋಽನುಶೇತೇ

ಜಹಾತ್ಯೇನಾಂ ಭುಕ್ತಭೋಗಾಂ ಅಜೋಽನ್ಯಃ' (4.5), 'ವೇದಾಹಂ ಏತಂ ಪುರುಷಂ ಮಹಾನ್ತಂ ಆದಿತ್ಯವರ್ಣಂ ತಮಸಃ ಪರಸ್ತಾತ್' (3.8) ಮುಂತಾಗಿಯೂ,

ಬ್ರಹ್ಮಸೂತ್ರಗಳಲ್ಲೂ, 'ನೇತರೋಽನುಪಪತ್ತೇಃ' (1.1.17), 'ಭೇದವ್ಯಪದೇಶಾತ್' (1.3.4), 'ಅನುಪಪತ್ತೇಸ್ತು ನ ಶಾರೀರಃ', 'ಕರ್ಮಕರ್ತೃವ್ಯಪದೇಶಾಚ್ಚ', 'ಶಬ್ದವಿಶೇಷಾತ್' (1.2.3-5), 'ಸಂಭೋಗಪ್ರಾಪ್ತಿರಿತಿ ಚೇನ್ನ ವೈಶೇಷ್ಯಾತ್' (1.2.8), 'ನ ಚ ಸ್ಮಾರ್ತಮತದ್ಧರ್ಮಾಭಿಲಾಪಾಚ್ಛಾರೀರಶ್ಚ', 'ಉಭಯೇಽಪಿ ಹಿ ಭೇದೇನೈನಮಧೀಯತೇ' (1.2.20,21), 'ವಿಶೇಷಣಭೇದವ್ಯಪದೇಶಾಭ್ಯಾಂ ಚ ನೇತರೌ' (1.2.23), 'ಮುಕ್ತೋಪಸೃಪ್ಯವ್ಯಪದೇಶಾಚ್ಚ' (1.3.2), 'ಸ್ಥಿತ್ಯದನಾಭ್ಯಾಂ ಚ' (1.3.6), 'ಇತರಪರಾಮರ್ಶಾತ್ಸ ಇತಿ ಚೇನ್ನಾಸಂಭವಾತ್', 'ಉತ್ತರಾಚ್ಚೇದಾವಿರ್ಭೂತ-ಸ್ವರೂಪಸ್ತು' (1.3.17,18), 'ಸುಷುಪ್ತ್ಯುತ್ಕ್ರಾನ್ತ್ಯೋಃ ಭೇದೇನ', 'ಪತ್ಯಾದಿಶಬ್ದೇಭ್ಯಃ' (1.3.43,44), 'ಅಧಿಕಂ ತು ಭೇದನಿರ್ದೇಶಾತ್' (2.1.22), 'ಅಧಿಕೋಪದೇಶಾತ್ತು ಬಾದರಾಯಣಸ್ಯೈವಂ ತದ್ದರ್ಶನಾತ್' (3.4.8), 'ಜಗದ್ವ್ಯಾಪಾರವರ್ಜಂ ಪ್ರಕರಣಾದಸನ್ನಿಹಿತತ್ವಾಚ್ಚ' (4.4.17), 'ಭೋಗಮಾತ್ರಸಾಮ್ಯಲಿಂಗಾಚ್ಚ' (4.4.21) ಮುಂತಾದೆಡೆಗಳಲ್ಲಿಯೂ ಹೇಳಿದೆ.

ಈ ಭೇದನಿರ್ದೇಶಗಳು ಅವಿದ್ಯೆ ಅಥವಾ ಉಪಾಧಿಯಿಂದುಂಟಾದ ಭೇದವನ್ನು ಕುರಿತದ್ದಲ್ಲವೆಂದು 'ಇದಂ ಜ್ಞಾನಮ್ ಉಪಾಶ್ರಿತ್ಯ ಮಮ ಸಾಧರ್ಮ್ಯಮಾಗತಾಃ । ಸರ್ಗೇಽಪಿ ನೋಪಜಾಯನ್ತೇ ಪ್ರಲಯೇ ನ ವ್ಯಥನ್ತಿ ಚ ॥' (ಭ.ಗೀ. 14.2), 'ತದಾ ವಿದ್ವಾನ್ ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಮುಪೈತಿ' (ಮುಂ.ಉ. 3.1.3), 'ಸಂಪದ್ಯಾವಿರ್ಭಾವಃ ಸ್ವೇನಶಬ್ದಾತ್' (ಬ್ರ.ಸೂ. 4.4.1) ಇತ್ಯಾದಿಗಳಲ್ಲಿ ಎಲ್ಲ ಅವಿದ್ಯೆ ಅಥವಾ ಉಪಾಧಿ ಬಿಡುಗಡೆಯಾದವನ ಬಗ್ಗೆ ಉಪಪಾದಿಸಲಾಗಿದೆ.

ಶ್ರುತಿ-ಸ್ಮೃತಿ-ಸೂತ್ರಗಳಲ್ಲಿ ಎಲ್ಲಕಡೆಯೂ ಭೇದವೇ ಹೇಳಲಾಗಿರುವುದರಿಂದ ಚೇತನ, ಅಚೇತನ, ಈಶ್ವರರ ಸ್ವರೂಪ ಭೇದವು ಸ್ವಾಭಾವಿಕವೆಂದು ನಿರ್ಣಯಿಸಬಹುದು. ಇನ್ನು ಛಾನ್ದೋಗ್ಯೋಪನಿಷತ್ತಲ್ಲಿ 'ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನಿತಿ ಶಾನ್ತ ಉಪಾಸೀತ' (3.14.1), 'ವಾಚಾರಂಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಂ' (6.1.5), 'ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಂ' (6.2.1), 'ತದೈಕ್ಷತ ಬಹು ಸ್ಯಾಂ ಪ್ರಜಾಯೇಯೇತಿ ತತ್ತೇಜೋಽಸೃಜತ' (6.2.3), 'ಸನ್ಮೂಲಾಃ ಸೋಮ್ಯೇಮಾಃ ಸರ್ವಾಃ ಪ್ರಜಾಃ ಸದಾಯತನಾಃ ಸತ್ಪ್ರತಿಷ್ಠಾಃ' (6.8.5), 'ಐತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ' (6.8.6), 'ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ' (ಭ.ಗೀ. 13.2), 'ತದನನ್ಯತ್ವಂ ಆರಂಭಣಶಬ್ದಾದಿಭ್ಯಃ' (ಬ್ರ.ಸೂ. 2.1.15) ಇತ್ಯಾದಿಗಳು ಪರಬ್ರಹ್ಮವೇ ಕಾರಣ, ಸಮಗ್ರ ಚೇತನಾಚೇತನ ರೂಪವಾದ ಜಗತ್ತು ಕಾರ್ಯ, ಮತ್ತು ಕಾರ್ಯ ಮತ್ತು ಕಾರಣವು ಬೇರೆಯಲ್ಲ ಎಂದು ಸಾರುತ್ತವೆ.

ಎಲ್ಲ ಅವಸ್ಥೆಗಳಲ್ಲೂ ಚೇತನಾಚೇತನ ವಸ್ತುಗಳು ಪರಮಾತ್ಮನಿಗೆ ಶರೀರ ಮತ್ತು ಪರಮಾತ್ಮ ಅವುಗಳಿಗೆ ಆತ್ಮನೆಂಬುದು 'ಯಃ ಪೃಥಿವ್ಯಾಂ ತಿಷ್ಠನ್ .... ಯಸ್ಯ ಪೃಥಿವೀ ಶರೀರಂ ....' (ಬೃ.ಉ. 5.7.3), 'ಯ ಆತ್ಮನಿ ತಿಷ್ಠನ್ .... ಯಸ್ಯಾತ್ಮಾ ಶರೀರಂ ಯ ಆತ್ಮಾನಮನ್ತರೋ ಯಮಯತಿ ....' (ಬೃ.ಉ. 5.7.22), 'ಯಸ್ಯಾವ್ಯಕ್ತಂ ಶರೀರಂ .... ಯಸ್ಯಾಕ್ಷರಂ ಶರೀರಂ .... ಯಸ್ಯ ಮೃತ್ಯುಃ ಶರೀರಂ .... ಏಷ ಸರ್ವಭೂತಾನ್ತರಾತ್ಮಾ ಅಪಹತಪಾಪ್ಮಾ ದಿವ್ಯೋ ದೇವ ಏಕೋ ನಾರಾಯಣಃ' (ಸು.ಉ. 7), 'ಅಂತಃ ಪ್ರವಿಷ್ಟಃ ಶಾಸ್ತಾ ಜನಾನಾಂ ಸರ್ವಾತ್ಮಾ' (ತೈ.ಆ. 3.21) ಮುಂತಾದ ಶ್ರುತಿ ಸಿದ್ಧ. ಆದ್ದರಿಂದ ಸೂಕ್ಷ್ಮ ಚಿದಚಿದ್ವಸ್ತು ಶರೀರ ದಶೆಯಲ್ಲಿ ಪರಮಾತ್ಮಾ ಕಾರಣನು ಮತ್ತು ಅದೇ ಪರಮಾತ್ಮನು ಸ್ಥೂಲ ಚಿದಚಿದ್ವಸ್ತು ಶರೀರ ದಶೆಯಲ್ಲಿ ಕಾರ್ಯನು. ಕಾರಣ ಮತ್ತು ಕಾರ್ಯಾವಸ್ಥೆಗಳಲ್ಲಿ ಚೇತನಾಚೇತನ ವಸ್ತು ವಿಶಿಷ್ಟ ಪರಮಾತ್ಮನೇ ಎಲ್ಲ ಪದಗಳಿಂದಲೂ ಹೇಳಲ್ಪಟ್ಟು ಸರ್ವಶಬ್ದ ಸಾಮಾನಾಧಿಕರಣ್ಯವು ('ತತ್ತ್ವಮಸಿ' (ಛಾ.ಉ. 6.11.3) ಮುಂತಾದ) ಮುಖ್ಯವಾಗಿಯೇ ಒಪ್ಪುತ್ತದೆ.

'ಅನೇನ ಜೀವೇನಾತ್ಮನಾನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ' (ಛಾ.ಉ. 6.3.2), 'ತತ್ಸೃಷ್ಟ್ವಾ । ತದೇವಾನು ಪ್ರಾವಿಶತ್ । ತದನುಪ್ರವಿಶ್ಯ । ಸಚ್ಚ ತ್ಯಚ್ಚಾಭವತ್ ।' (ತೈ.ಆ. 5.29) ಮುಂತಾದ ಶ್ರುತಿಗಳು ಈ ಅರ್ಥವನ್ನೇ ತಿಳಿಸುತ್ತವೆ, 'ಬಹು ಸ್ಯಾಂ' (ತೈ.ಆ. 5.29) ಎಂಬ ಸಂಕಲ್ಪವೂ ನಾಮ, ರೂಪ ವಿಭಾಗ ಮಾಡಲಾರದ ಸೂಕ್ಷ್ಮಾವಸ್ಥವಾದ ಚಿದಚಿದ್ವಸ್ತುಗಳನ್ನು ಶರೀರವಾಗಿ ಹೊಂದಿ ಒಬ್ಬಗೆಯಾಗಿದ್ದ ಬ್ರಹ್ಮವು ನಾಮ, ರೂಪ ಭೇದಗಳನ್ನು ಪಡೆದ ಸ್ಥೂಲಾ-ವಸ್ಥವಾದ ಚಿದಚಿದ್ವಸ್ತುಗಳನ್ನು ಶರೀರವಾಗಿ ಹೊಂದಿ ಅನೇಕ ಪ್ರಕಾರವೆನ್ನಲಾಗುವುದೇ ಆಗಿದೆ. ಹೀಗೆ ಸಂಗ್ರಹವಾಗಿ ವಿಶಿಷ್ಟಾದ್ವೈತ ದರ್ಶನದ ತತ್ತ್ವಗಳಿಗೆ ಆಧಾರಗಳನ್ನು ಭಗವದ್ರಾಮಾನುಜರ ವೇದಾನ್ತದೀಪ ಮುಂತಾದ ಗ್ರಂಥಗಳಿಂದ ಆಯ್ದು ತೋರಿಸಿರುವೆವು. ವಿಸ್ತಾರ ಮುಂಬರುವುದು.

------

## ವಿಷಯಸಂಗ್ರಹ

ವೇದೋಪನಿಷತ್ತುಗಳಲ್ಲಿ ಪ್ರತಿಪಾದಿತವಾಗಿರುವ ತತ್ತ್ವ ಹಿತ ಪುರುಷಾರ್ಥಗಳ ಸ್ವರೂಪವು ಸಾಮಾನ್ಯ ಮನುಷ್ಯರಿಂದ ಅರಿಯಲು ಮತ್ತು ಅನುಷ್ಠಿಸಲು ಅಶಕ್ಯವೆಂದೆಣಿಸಿ ಕೃಪಾಮೂರ್ತಿಯಾದ ಶ್ರೀವೇದವ್ಯಾಸಮಹರ್ಷಿಗಳು ವೇದಾಂತಾರ್ಥ-ಗಳನ್ನು ಬ್ರಹ್ಮಸೂತ್ರಗಳೆಂದು ಕರೆಯಲ್ಪಡುವ ವೇದಾಂತಸೂತ್ರಗಳಿಂದ ಸಂಗ್ರಹಿಸಿದರು. ಕಾಲಕ್ರಮದಲ್ಲಿ ಈ ವೇದಾಂತ-ಸೂತ್ರಗಳ ಭಾವವೂ ಸಹ ವ್ಯಾಖ್ಯಾನಾದಿ ಸಹಾಯವಿಲ್ಲದೆ ಅರಿಯಲು ಕಷ್ಟವಾದಾಗ, ಶ್ರೀ ಶಂಕರಾಚಾರ್ಯರು, ಭಗವದ್ರಾಮಾನುಜರು, ಮಧ್ವಾಚಾರ್ಯರು ಮುಂತಾದ ಆಚಾರ್ಯವರ್ಯರು ಈ ಸೂತ್ರಗಳ ತಾತ್ಪರ್ಯವನ್ನು ತಂತಮ್ಮ ಭಾಷ್ಯಗಳಿಂದ ವಿಶದೀಕರಿಸಿದರು. ಆಯಾ ಸಿದ್ಧಾಂತಗಳಲ್ಲಿ ಪ್ರತಿಪಾದಿತವಾಗಿರುವ ಅಂಶವೇ ವ್ಯಾಸರ ಅಭಿಪ್ರಾಯವೆಂದು ಈ ಭಾಷ್ಯಗಳಲ್ಲಿ ಪ್ರಮಾಣ ಮತ್ತು ಯುಕ್ತಿಗಳಿಂದ ಸಾಧಿಸಲಾಗಿದೆ. ಇದರಂತೆ ಭಗವದ್ರಾಮಾನುಜರು ತಮ್ಮ 'ಶ್ರೀಭಾಷ್ಯ'ವೆಂದು ಪ್ರಸಿದ್ಧವಾದ 'ಶಾರೀರಕ ಮೀಮಾಂಸಾ ಭಾಷ್ಯದಲ್ಲಿ' ಉಪನಿಷತ್ಸಿದ್ಧಾಂತವನ್ನು ಸ್ಥಾಪಿಸಿದ್ದಾರೆ. ಇದನ್ನು 'ವಿಶಿಷ್ಟಾದ್ವೈತ'ವೆಂದು ವ್ಯವಹರಿಸುತ್ತಿದ್ದೇವೆ. ಈ ಲೇಖನದಲ್ಲಿ ಅವಿಚ್ಛಿನ್ನವಾದ ಪರಂಪರೆಯಿಂದ ಈ ತತ್ತ್ವಾರ್ಥಗಳು ಉಪದಿಷ್ಟವಾಗಿದ್ದು, ವೇದಾಂತಸಿದ್ಧಾಂತವನ್ನು ಭಾಷ್ಯಕಾರರು (ಭಗವದ್ರಾಮಾನುಜರು) ಹೇಗೆ ಸರ್ವತೋಮುಖವಾದ ದರ್ಶನವಾಗಿ ಬೆಳೆಸಿ ರಕ್ಷಿಸಿದರೋ, ಹಾಗೆ ಮಾಡಲು ಕಾರಣವಾದ ಪ್ರಧಾನಾಂಶಗಳ ಮೂಲಾಧಾರಗಳನ್ನು ಉದಾಹರಣೆ, ಉಲ್ಲೇಖಗಳೊಡನೆ ವಿವರಿಸಲಾಗುವುದು.

### (ಅ) ತತ್ತ್ವಸಂಗ್ರಹ

### ಪ್ರಮಾಣವಿಭಾಗ

ಶಾಸ್ತ್ರ ವಿಚಾರ ಸರಣಿಯಲ್ಲಿ ವಸ್ತುಗಳನ್ನೆಲ್ಲ ಪ್ರಮಾಣ (ಜ್ಞಾನಕ್ಕೆ ಕಾರಣ) ಮತ್ತು ಪ್ರಮೇಯ (ಜ್ಞಾನಕ್ಕೆ ವಿಷಯ) ಎಂದು ಎರಡಾಗಿ ವಿಭಾಗ ಮಾಡಿದೆ. ಇದರಲ್ಲಿ ಪ್ರಮಾಣಗಳು ಮೂರು – ಪ್ರತ್ಯಕ್ಷ = ಇಂದ್ರಿಯಗಳಿಂದುಂಟಾಗುವ ಜ್ಞಾನ; ಅನುಮಾನ = ಪ್ರತ್ಯಕ್ಷದಿಂದರಿತ ವ್ಯಾಪ್ತಿ (ಒಟ್ಟಿಗಿರುವಿಕೆ) ಮುಂತಾದ್ದರಿಂದ ಊಹಿಸಿ ಬರುವ ಜ್ಞಾನ, ಹಾಗೂ ಶಬ್ದ = ಅಪೌರುಷೇಯವಾಗಿಯೂ, ಪೌರುಷೇಯವಾಗಿಯೂ ಇರುವ ಆಪ್ತವಾದ/ ಆಪ್ತರ (ವಿಶ್ವಾಸಕ್ಕೆ - ನಂಬಿಕೆಗೆ ಅರ್ಹರಾದವರ) ಮಾತು. (ಪುರುಷರಿಗೆ ಅಧೀನವಾದ ರಚನೆಯನ್ನುಳ್ಳ ವಾಙ್ಮಯ ಪೌರುಷೇಯವೂ ಅದಲ್ಲದ್ದು ಅಪೌರುಷೇಯವೂ ಆಗಿದೆ.) ಅಂದರೆ ಶ್ರುತಿಗಳೆಂಬ ವೇದಗಳು ಕರ್ತೃವಿಲ್ಲದ್ದರಿಂದ ಅಪೌರುಷೇಯವಾಗುತ್ತವೆ. ಸ್ಮೃತಿ ಮುಂತಾದವು ಪೌರುಷೇಯಗಳಾಗುವುವು. ಅತೀಂದ್ರಿಯವಾದ ತತ್ತ್ವಗಳ ವಿಷಯದಲ್ಲಿ ಪ್ರತ್ಯಕ್ಷ, ಅನುಮಾನಗಳಿಂದ ಜ್ಞಾನ ಸಿದ್ಧಿಸಲಾರದ ಕಾರಣ, ಈ ವಿಷಯಗಳಲ್ಲಿ ಶಬ್ದವೇ ಪ್ರಮಾಣವಾಗುತ್ತದೆ. ಇದರಂತೆ ವಿಶಿಷ್ಟಾದ್ವೈತದ ಮೂಲಭೂತಾಂಶಗಳ ಆಧಾರವಾಗಿರುವ ಶಬ್ದಪ್ರಮಾಣವಿಧಗಳಲ್ಲಿ ಶ್ರುತಿಗಳು, ಆಗಮಗಳು, ವಿಷ್ಣುಪುರಾಣ, ರಾಮಾಯಣ, ಮಹಾಭಾರತ, ಬ್ರಹ್ಮಸೂತ್ರಗಳು, ಭಗವದ್ಗೀತೆ, ಧರ್ಮಶಾಸ್ತ್ರಗಳು ಮತ್ತು ದ್ರಾವಿಡಪ್ರಬಂಧಗಳು (ಆಳ್ವಾರ್ಗಳಿಂದ ತಮಿಳಿನಲ್ಲಿ ರಚಿತವಾಗಿರುವ ೪೦೦೦ ಪದ್ಯಗಳು) ಗಣನೀಯವಾಗಿವೆ. ಈ ಲೇಖನದಲ್ಲಿ ಆಧಾರಗಳನ್ನು ಮೇಲ್ಕಂಡ ಪ್ರಮಾಣಗಳಿಂದ ಉದಾಹರಿಸಲಾಗುವುದು.

### ಪ್ರಮೇಯವಿಭಾಗ

ಪ್ರಮೇಯಗಳನ್ನು ದ್ರವ್ಯ ಮತ್ತು ಅದ್ರವ್ಯ ಎಂದು ಎರಡು ವಿಭಾಗ ಮಾಡಿದೆ. ದ್ರವ್ಯವೆಂದರೆ ಅನೇಕ ಅವಸ್ಥೆ(ದಶೆ)ಗಳನ್ನು ಪಡೆಯುವ ವಸ್ತು, ಅಥವಾ ಉಪಾದಾನಕಾರಣ ವಾಗತಕ್ಕದ್ದು. ಅಂದರೆ ಒಂದು ಮಡಿಕೆಯನ್ನು ಮಾಡಲು ಮಣ್ಣು ಉಪಾದಾನ (material cause) ಆಗುತ್ತದೆ. ಅದನ್ನೇ ಮಣ್ಣು ಉಂಡೆ ಅಥವಾ ಮುದ್ದೆಯಾಗಿರುವ ದಶೆ(ಅವಸ್ಥೆ)ಯಿಂದ ಮಡಿಕೆಯಾಗುವ ದಶೆಗೆ ಮಾರ್ಪಡುತ್ತಿದೆ ಎನ್ನುತ್ತೇವೆ. ಹೀಗಲ್ಲದ್ದು ಅದ್ರವ್ಯ, ಅಂದರೆ, ಗುಣ, ಕರ್ಮ, ಜಾತಿ, ಮುಂತಾದವು. ಇಲ್ಲಿ ದ್ರವ್ಯವು ಆಗಂತುಕವಾದ ಗುಣ(ಧರ್ಮ)ಕ್ಕೆ ಆಶ್ರಯವಾಗಿರುತ್ತದೆ. ದ್ರವ್ಯವು ಎರಡು ವಿಧ - ಜಡವೆಂದೂ, ಅಜಡ (ಸ್ವಯಂಪ್ರಕಾಶ) ವೆಂದೂ. ಜಡವೆಂದರೆ ಸ್ವಯಂಪ್ರಕಾಶವಲ್ಲದ್ದು. ಉದಾಹರಣೆಗೆ - ವಸ್ತುಗಳನ್ನು ತೋರಿಸಲು (ಕತ್ತಲೆಯಲ್ಲಿ) ದೀಪ ಬೇಕಾಗುವುದು. ಆ ದೀಪವನ್ನು ತೋರಿಸಲು ಬೇರೊಂದರ ಅಪೇಕ್ಷೆಯಿಲ್ಲ. ಜಡದ್ರವ್ಯಗಳು ಎರಡು - ಪ್ರಕೃತಿ (ಸತ್ತ್ವ, ರಜಸ್, ತಮಸ್ ಎಂಬ ಮೂರು ಗುಣಗಳುಳ್ಳ ದ್ರವ್ಯ) ಮತ್ತು ಕಾಲತತ್ತ್ವ. ಅಜಡದ್ರವ್ಯವು ಎರಡು ವಿಧ - ಪ್ರತ್ಯಕ್ ಮತ್ತು ಪರಾಕ್ ಎಂದು. ಪ್ರತ್ಯಕ್ ಎಂದರೆ ತನಗೇ ತನ್ನನ್ನು ತೋರಿಸುವುದು. ಪರಾಕ್ ಎಂದರೆ ಇತರರಿಗೇ ತನ್ನನ್ನು ತೋರಿಸುವುದು. ಉದಾ. - ದೀಪವು ತನ್ನನ್ನು ಇತರರಿಗೇ ತೋರಿಸುವುದರಿಂದ (ದೀಪಕ್ಕೇ ತಾನು ದೀಪ ಎಂದು ತಿಳಿಯದರಿಂದ) ಅದು ಪರಾಕ್ ಸ್ವಯಂ ಪ್ರಕಾಶ (ತಾನೇ ತೋರುವುದು). ಪ್ರತ್ಯಕ್ ತತ್ತ್ವ

ಎರಡು ವಿಧ, ಜೀವಾತ್ಮ ಮತ್ತು ಪರಮಾತ್ಮನೆಂದು. ಪರಾಕ್ ದ್ರವ್ಯವೂ ಎರಡು ವಿಧ - (ಜೀವಾತ್ಮ, ಪರಮಾತ್ಮರ) ಧರ್ಮಭೂತಜ್ಞಾನ ಮತ್ತು ನಿತ್ಯವಿಭೂತಿ (ಅಥವಾ ಶುದ್ಧಸತ್ತ್ವ) ಎಂದು.

ಈ ಪ್ರಮಾಣ, ಪ್ರಮೇಯ ವಿಭಾಗವನ್ನು ಅನುಬಂಧದಲ್ಲಿ ಕೊಟ್ಟಿದೆ.

ಇದನ್ನೇ ಇನ್ನೊಂದು ರೀತಿಯಲ್ಲಿ ಚೇತನ (ಭೋಕ್ತಾ), ಅಚೇತನ (ಭೊಗ್ಯ) ಮತ್ತು ಈಶ್ವರ (ಪ್ರೇರಿತಾ) ಎಂದೂ ವಿಂಗಡಿಸಬಹುದು. ಆಗ ಪ್ರಕೃತಿ, ಕಾಲ, ಶುದ್ಧಸತ್ತ್ವ ಹಾಗೂ ಧರ್ಮಭೂತಜ್ಞಾನ ಅಚೇತನ (ಜ್ಞಾನವಿಲ್ಲದವು)ಗಳು. ಜೀವಾತ್ಮರು ಚೇತನರು ಹಾಗು ಪರಮಾತ್ಮನು ಈಶ್ವರ ಎಂದು ವಿಭಾಗ.

### ಆ) ಹಿತ (ಉಪಾಯ) ಸಂಗ್ರಹ

ತತ್ತ್ವ ಸ್ವರೂಪ ಜ್ಞಾನದಿಂದ ಜೀವಾತ್ಮನು ತನಗೆ ಶ್ರೇಯಸ್ಸನ್ನು ಪಡೆಯಲು ಸಾಧನವನ್ನು ಅರಿತು ಅದರ ಅನುಷ್ಠಾನ-ದಿಂದ ಆ ಶ್ರೇಯಸ್ಸನ್ನು (ಪುರುಷಾರ್ಥವನ್ನು) ಪಡೆಯುತ್ತಾನೆ. ಈ ಸಾಧನ(ಹಿತ) - ಸ್ವರೂಪದ ತಿಳುವಳಿಕೆಯೊಂದಿಗೆ, ಈಶ್ವರನಿಂದ ಅವರವರ ವರ್ಣಾಶ್ರಮಕ್ಕೆ ವಿಹಿತವಾದ ನಿತ್ಯನೈಮಿತ್ತಿಕ ಕರ್ಮಗಳೊಡನೆ ಭಗವಂತನ ಪದಕಮಲಗಳನ್ನು ಭಕ್ತಿ (ಪ್ರೀತಿ)ಯಿಂದ ಧ್ಯಾನಿಸುವುದು, ಅರ್ಚಿಸುವುದು, ನಮಸ್ಕರಿಸುವುದು ಮುಂತಾದದು. ಈ ಸಾಧನಾನುಷ್ಠಾನವು ಪುರುಷಾರ್ಥವಾದ ಪರಮಾತ್ಮ ಪ್ರಾಪ್ತಿ ಮತ್ತು ಅನುಭವಗಳಿಗೆ ತಡೆಯಾಗಿರುವ ವಿರೋಧಿಗಳನ್ನು ಹೋಗಲಾಡಿಸುತ್ತದೆ. ಇದು ಭಕ್ತಿ ಮತ್ತು ಪ್ರಪತ್ತಿ (ಅಥವಾ ಉಪಾಸನೆ ಮತ್ತು ಶರಣಾಗತಿ) ಎಂಬುದಾಗಿ ಎರಡು ಬಗೆ.

### ಇ) ಪುರುಷಾರ್ಥ ಸ್ವರೂಪ

ಪುರುಷಾರ್ಥವೆಂದರೆ ಅಭಿಲಷಿತವಾದ ಪರಮಶ್ರೇಯಸ್ಸು (ಫಲ). ಜೀವಾತ್ಮನು ಅವಿದ್ಯೆಯಿಂದ ಸಂಪಾದಿಸಲ್ಪಟ್ಟ ಪುಣ್ಯಪಾಪವೆಂಬ ಕರ್ಮಪ್ರವಾಹದಿಂದ ದೇವ, ಮನುಷ್ಯ, ಮೃಗ, ಪಕ್ಷಿ, ಮರ, ಗಿಡ, ಮುಂತಾದ ಶರೀರಗಳಲ್ಲಿ ಪ್ರವೇಶಿಸಿ, ಆಯಾ ದೇಹಗಳೇ ಆತ್ಮವೆಂಬ ಭ್ರಮದಿಂದ ಮಾಡಿದ ಕ್ರಿಯೆಗಳ ಫಲವನ್ನು ಅನುಭವಿಸುವುದಾದ ಸಂಸಾರವೆಂಬ ಸರವಳಿ-ಯಿಂದ ಬಿಡಿಸಿಕೊಳ್ಳುವುದಕ್ಕಾಗಿ ಶರೀರಕ್ಕಿಂತ ಬೇರಾದ ಆತ್ಮಸ್ವರೂಪ, ಸ್ವಭಾವ, ಹಾಗೂ ಅದಕ್ಕೆ ಅಂತರ್ಯಾಮಿ-ಯಾದ (ಒಳಗಿದ್ದು ನಿಯಮಿಸುವ) ಪರಮಾತ್ಮಸ್ವರೂಪ, ಸ್ವಭಾವಗಳನ್ನು, ಆ ಪರಮಾತ್ಮನ ಉಪಾಸನ ಮತ್ತು ಅದರ ಫಲವಾಗಿ ಬರುವ ಆತ್ಮಸ್ವರೂಪ ಆವಿರ್ಭಾವ (ನೈಜವಾದ ಸ್ವರೂಪವೇರ್ಪಡುವುದು) ಪೂರ್ವಕ ಅತ್ಯುತ್ತಮವೂ, ಎಲ್ಲೆಯಿಲ್ಲದ್ದೂ ಆದ ಪರಮಾತ್ಮಾನುಭವದ ಆನಂದವನ್ನು ಪಡಿಯುವುದೇ ಪರಮಪುರುಷಾರ್ಥವಾಗಿದೆ. ಈ ಪುರುಷಾರ್ಥಪ್ರಾಪ್ತಿಯು ಅಪ್ರಾಕೃತ (ಪ್ರಕೃತಿ ಮಂಡಲಕ್ಕೆ ಮೇಲಿರುವ) ದೇಶವಿಶೇಷದಲ್ಲಿ ವೈಕುಂಠಲೋಕದಲ್ಲಿ ದೊರೆಯುವುದೆಂದು ಪ್ರಮಾಣಗಳಿಂದ ತಿಳಿಯುತ್ತದೆ. ಈ ಪರಮಪುರುಷಾರ್ಥವಾದ ಮೋಕ್ಷಾನಂದವು ಎಲ್ಲ ಜೀವರಿಗೊ ಈಶ್ವರನಿಗೊ ಸಮಾನವಾಗಿರುವುದು.

ಈ ಮೇಲ್ಕಂಡ ತತ್ತ್ವ, ಹಿತ, ಪುರುಷಾರ್ಥಗಳ ವಿವರಣವನ್ನು ಆಧಾರಗಳೊಡನೆ ಈ ಲೇಖನದಲ್ಲಿ ವಿಸ್ತರಿಸಲಾಗುತ್ತಿದೆ.

ಈ ಅಂಶಗಳ ಸಂಗ್ರಹವನ್ನು ಸಂಕ್ಷೇಪವಾಗಿ ಅಭಿಯುಕ್ತರ ಮಾತಿನಿಂದ ತಿಳಿಸುವುದಾದರೆ -

ಪ್ರಮಾಣಗಳ ಸಂಗ್ರಹ -

ಆದೌ ವೇದಾಃ ಪ್ರಮಾಣಂ ಸ್ಮೃತಿರುಪಕುರುತೇ ಸೇತಿಹಾಸೈಃ ಪುರಾಣೈಃ
ನ್ಯಾಯೈಃ ಸಾರ್ಧಂ ತದರ್ಚಾವಿಧಿಮುಪರಿ ಪರಿಕ್ಷೀಯತೇ ಪೂರ್ವಭಾಗಃ ।
ಊರ್ಧ್ವೋ ಭಾಗಃ ತ್ವದೀಹಾ-ಗುಣ-ವಿಭವ-ಪರಿಜ್ಞಾಪನೈಃ ತ್ವತ್ಪದಾಪ್ತೌ
ವೇದ್ಯೋ ವೇದೈಶ್ಚ ಸರ್ವೈರಹಮಿತಿ ಭಗವನ್ ಸ್ವೇನ ಚ ವ್ಯಾಚಕರ್ಥ ॥ - (ಶ್ರೀರಂಗರಾಜಸ್ತವ ಉತ್ತರಶತಕ 19)

ಪ್ರಮೇಯದ ವಿಷಯವಾಗಿ -

ಶ್ರೀಮಲ್ಲಕ್ಷ್ಮಣಯೋಗಿನಸ್ತು ಭುವನಂ ಸತ್ಯಂ, ತದೀಶಃ ಶ್ರಿಯಃ
ಕಾನ್ತೋ, ಬ್ರಹ್ಮ ಸ ಏವ, ಸೋಽಖಿಲತನುಃ ಭಿನ್ನಾಃ ತತಃ ಚೇತನಾಃ ।
ಸತ್ಯಾ ಸಂಸೃತಿರೀಶನಿಗ್ರಹಕೃತಾ ಮುಕ್ತಿಸ್ತು ಭಕ್ತ್ಯಾದಿನಾ
ತತ್ಪ್ರಾಪ್ತಿಃ ಪರಮೇ ಪದೇ ತದನುಭೂತ್ಯಾಖ್ಯೇತಿ ಸಂಚಕ್ಷತೇ ॥ - (ಸಿದ್ಧಾಂತ ತ್ರಯ ಸಂಗ್ರಹ)

ಅಥವಾ ಸಂಕ್ಷೇಪವಾಗಿ -

"ತ್ರಯ್ಯಂತೈಃ ಏಕಕಂಠೈಃ ತದನುಗುಣ ಮನುವ್ಯಾಸಮುಖ್ಯೋಕ್ತಿಭಿಶ್ಚ
ಶ್ರೀಮಾನ್ನಾರಾಯಣೋ ನಃ ಪತಿರಖಿಲತನುಃ ಮುಕ್ತಿದೋ ಮುಕ್ತಭೋಗ್ಯಃ" - (ಶ್ರೀಮದ್ರಹಸ್ಯತ್ರಯಸಾರ, ಪರದೇವತಾಪಾರಮಾರ್ಥ್ಯಾಧಿಕಾರ) ಎನ್ನಬಹುದು.

## ಉಪೋದ್ಘಾತ

ಯಾವುದೇ ದರ್ಶನ ಅಥವಾ ಸಿದ್ಧಾಂತವು ಪ್ರಪಂಚದ/ಬಾಳಿನ ಎಲ್ಲ ಅಂಶಗಳ ಮತ್ತು ಸಮಸ್ಯೆಗಳ ವಿಶ್ಲೇಷಣವನ್ನು ಮಾಡಿ, ಅವಕ್ಕೆ ಸಮರ್ಪಕವಾದ ನಿರೂಪಣೆಯನ್ನೂ, ಉತ್ತರಗಳನ್ನೂ ಒದಗಿಸುವ ವಿಚಾರಪೂರ್ವಕವಾಗಿ ವಿಷಯ ನಿರ್ಧಾರಕ್ಕೆ ಹೇತುವಾಗುತ್ತದೆ. ಈ ರೀತಿ ವಿಮರ್ಶಿಸ ಬೇಕಾದ ಅಂಶಗಳನ್ನು ಮೂರೆಂದೊ, ಐದೆಂದೊ ಶಾಸ್ತ್ರಗಳಲ್ಲಿ ಹೇಳಿದೆ. ಮೂರೆಂದಾಗ, ವಸ್ತುಗಳ ಸ್ವಾಭಾವಿಕವಾದ ಸ್ವರೂಪ (ತತ್ತ್ವ), ಜೀವನದ ಧ್ಯೇಯ, ಅಥವಾ ಗುರಿ - ಅಂದರೆ ಪ್ರಯತ್ನಿಸಿ ಪಡೆಯಬೇಕಾದ/ಅರ್ಹವಾದ ಫಲ ವಿಶೇಷ (ಪುರುಷಾರ್ಥ) ಹಾಗೂ ಈ ಫಲವನ್ನು ದೊರಕಿಸಿ ಕೊಡುವ ಉಪಾಯ ಅಥವಾ ಸಾಧನ (ಹಿತ)ಗಳು ಹೇಳಲ್ಪಡುತ್ತವೆ. ಈ ವೇದ್ಯಾಂಶಗಳು ಐದೆಂದಾಗ (ಅರ್ಥ ಪಂಚಕ) ವೇದಾಂತಿಗಳಿಗನುಸಾರವಾಗಿ -

೧) ಪ್ರಾಪ್ಯಸ್ವರೂಪ - ಪರಮಾತ್ಮ ಸ್ವರೂಪ, ಸ್ವಭಾವಗಳು

೨) ಪ್ರಾಪ್ತೃಸ್ವರೂಪ - ಜೀವಾತ್ಮ ಸ್ವರೂಪ, ಸ್ವಭಾವಗಳು

೩) ಪ್ರಾಪ್ತ್ಯುಪಾಯ ಅಥವಾ ಸಾಧನ

೪) ಪ್ರಾಪ್ತಿ ಫಲ (ಪ್ರಯೋಜನ/ಪುರುಷಾರ್ಥ) ಮತ್ತು

೫) ಪ್ರಾಪ್ತಿ ವಿರೋಧಿ ಎಂಬಿವು ವೇದ್ಯವಿಷಯಗಳು.

ಈ ಪ್ರಕಾರ ವಿಶಿಷ್ಟಾದ್ವೈತ ಸಿದ್ಧಾಂತದಲ್ಲಿ ವಿಷಯ ವಿವರಣೆಯನ್ನು ಮಾಡಲಾಗುತ್ತದೆ.

## ಚಿದಚಿದೀಶ್ವರ (ಜ್ಞಾನವುಳ್ಳ, ಜ್ಞಾನವಿಲ್ಲದ ಮತ್ತು ಅವೆರಡರ ಒಡೆಯ) ತತ್ತ್ವತ್ರಯ ವಿವರಣೆ

ಅಚಿತ್ತಿಗಿಂತ ಸ್ವರೂಪದಲ್ಲೂ, ಸ್ವಭಾವದಲ್ಲೂ ಅತ್ಯಂತ ವಿಲಕ್ಷಣ (ಬೇರ್ಪಟ್ಟ)ವಾದದ್ದು ಅದಕ್ಕೆ ಆತ್ಮಭೂತವಾದ ಚಿತ್ ತತ್ತ್ವ(ಜೀವಾತ್ಮ). ಬದ್ಧ (ಸಂಸಾರ ಬಂಧದಲ್ಲಿರುವವರು), ಮುಕ್ತ(ಸಂಸಾರದಿಂದ ಬಿಡುಗಡೆ ಹೊಂದಿದವರು) ಮತ್ತು ನಿತ್ಯರೆಂದು (ಎಂದೂ ಸಂಸಾರಗಂಧವಿಲ್ಲದೆ ಪರಮಪದದಲ್ಲಿ ಪರಮಾತ್ಮಾನುಭವ/ಕೈಂಕರ್ಯ ಮಾಡುತ್ತಿರುವವರು) ಮೂರು ಬಗೆಯ ಜೀವನಿಗಿಂತ ಎಲ್ಲ ದೋಷಕ್ಕೂ ಎದುರುತಟ್ಟಾಗಿ, ಎಲ್ಲ ಮಂಗಳಗುಣಗಳಿಗೂ ಗಣಿಯಾಗಿ, ಎಲ್ಲ ದಶೆಗಳಲ್ಲಿಯೂ ಚಿದಚಿತ್ತುಗಳನ್ನು ವ್ಯಾಪಿಸಿ, ಧರಿಸಿ, ನಿಯಮಿಸಿ ಅವುಗಳಿಗೆ ಒಡೆಯನಾಗಿರುವದರಿಂದ ಅತ್ಯಂತ ವಿಲಕ್ಷಣನಾದವನು ಪರಮಾತ್ಮ (ಈಶ್ವರ ತತ್ತ್ವ). ಈ ಭೇದಗಳು ಸ್ವಾಭಾವಿಕವೆಂಬುದು ಬಹುಶ್ರುತಿಸಿದ್ಧವಾಗಿದೆ. ಎಲ್ಲ ದಶೆಗಳಲ್ಲೂ, ಚಿದಚಿತ್ತುಗಳು ಪರಮಾತ್ಮನ ಶರೀರವೆಂಬುದೂ, ಪರಮಾತ್ಮ ಆತ್ಮನೆಂಬುದೂ ಅಂತರ್ಯಾಮಿ ಬ್ರಾಹ್ಮಣ (ಬೃಹದಾರಣ್ಯಕ ಉಪನಿಷತ್ 5.7.3-23) ಮುಂತಾದೆಡೆ ಸಿದ್ಧವಾಗಿದೆ. ಪರಬ್ರಹ್ಮ ಕಾರಣ, ಚಿದಚಿತ್ತುಗಳು ಕಾರ್ಯಗಳು, ಕಾರಣ ಕಾರ್ಯಗಳಿಗೆ ಅಭೇದ ಮುಂತಾದ ಅಂಶಗಳು ಸಮಂಜಸವಾಗುವುದು ಈ ಶರೀರಾತ್ಮಭಾವದಿಂದಲೇ.

ಇಲ್ಲಿ ಸೂಕ್ಷ್ಮವಾದ (ಹೆಸರು, ಆಕಾರವಿಲ್ಲದ ದಶೆಯ) ಚಿದಚಿತ್ತೊಡಗೂಡಿದ ಪರಮಾತ್ಮ ಕಾರಣ, ಅದೇ ಪರಮಾತ್ಮ ಪ್ರಪಂಚವಾದ ಸ್ಥೂಲ ಚಿದಚಿತ್ತೊಡಗೂಡಿದಾಗ (ಹೆಸರು, ರೂಪಗಳೊಡನೆ) ಕಾರ್ಯ ಎಂಬುದರಿಂದ ಕಾರಣಾವಸ್ಥೆಯಲ್ಲೂ, ಕಾರ್ಯಾವಸ್ಥೆಯಲ್ಲೂ ಚಿದಚಿತ್ತುಗಳನ್ನು ಶರೀರವಾಗಿ ಪಡೆದಿರುವ ಪರಮಾತ್ಮನೇ ಎಲ್ಲ ಶಬ್ದಗಳಿಗೂ ವಾಚ್ಯನಾಗಿದ್ದಾನೆ. ಅವನ ಲೀಲಾ ರಸಾನುಭವಕ್ಕಾಗಿ ಅನೇಕ ವಿಧ ಸೃಷ್ಟ್ಯಾದಿಗಳನ್ನೂ, ಅವತಾರಗಳನ್ನೂ ಮಾಡುತ್ತಾನೆ. ಇದರಿಂದ ಅವನಲ್ಲಿ ದೋಷವಾವೂ ಸೇರದೆ ಅವನ ಮಹಿಮೆ ಹೆಚ್ಚುತ್ತದೆ, ಲಕ್ಷ್ಮೀಸಮೇತವಾದ ಈ ಈಶ್ವರತತ್ತ್ವದಲ್ಲಿ ಸಂಸಾರನಿವೃತ್ತಿಗಾಗಿ ಉಪಾಯಾನುಷ್ಠಾನ ಮಾಡಿದರೆ, ಅವನೇ ಅಭೀಷ್ಟ ಫಲಸಿದ್ಧಿಯನ್ನು ಅನುಗ್ರಹಿಸುತ್ತಾನೆ. ಈ ಉಪಾಯವೂ ಸಹ ಶಾಸ್ತ್ರಗಳಿಂದರಿತ ತತ್ತ್ವಜ್ಞಾನದ ಮೂಲಕ ತಂತಮ್ಮ ವರ್ಣಾಶ್ರಮಧರ್ಮಾನುಷ್ಠಾನದೊಡನೆ ಮಾಡುವ, ಭಕ್ತನಿಷ್ಠೆಯಿಂದ ಉಂಟಾಗುವ, ಎಲ್ಲೆಯಿಲ್ಲದೆ ಪ್ರಿಯ ಹಾಗೂ ಅತಿವಿಶದ ಪ್ರತ್ಯಕ್ಷಸಮಾನವಾದ ದಶೆಯನ್ನು ಪಡೆದಿರುವ ಅನುಧ್ಯಾನವೆನ್ನಲ್ಪಡುವ ಪರಭಕ್ತಿಯೇ ಆಗಿದೆ. ಇದನ್ನೇ ಭಕ್ತಿಯೋಗವೆಂದೂ ವ್ಯವಹರಿಸುತ್ತೇವೆ, ಉಪಾಸನೆ,

ವೇದನ, ಧ್ಯಾನ, ನಿದಿಧ್ಯಾಸನ, ಮುಂತಾದ ಶಬ್ದಗಳೂ ಇದನ್ನೇ ಬೋಧಿಸುತ್ತವೆ. ಈ ಉಪಾಯದಲ್ಲಿ ಅಶಕ್ತರಿಗೆ ಇದರ ಸ್ಥಾನದಲ್ಲಿ ಪರಮಾತ್ಮನನ್ನೇ ನಿವೇಶಿಸುವ ಒಂದು ಸುಕರೋಪಾಯವಾದ 'ಭರನ್ಯಾಸ' ಅಥವಾ 'ಪ್ರಪತ್ತಿ' ಎಂಬ ಉಪಾಯವೂ ಶ್ರುತಿನಿರ್ದಿಷ್ಟವಾಗಿದೆ. ಪುರುಷಾರ್ಥದಲ್ಲೂ ಅತ್ಯುತ್ತಮವಾದದ್ದು, ಮೋಕ್ಷವೆಂಬ ಅಪ್ರಾಕೃತ ದೇಶ-ವಿಶೇಷ(ವೈಕುಂಠ)ದಲ್ಲಿ ಪರಮಾತ್ಮನ ಸ್ವರೂಪ, ಗುಣಾದಿಗಳನ್ನು ಯಥಾವತ್ತಾಗಿ ಸಾಕ್ಷಾತ್ಕರಿಸಿ ಅವನ ಅನುಭವವನ್ನೂ, ಅದರ ಪರೀವಾಹವಾಗಿ ಬರುವ ಪ್ರೀತಿಪೂರ್ವಕವಾದ ಸರ್ವದೇಶ, ಸರ್ವಕಾಲ, ಸರ್ವ ಅವಸ್ಥೆಗಳಲ್ಲೂ ಉಚಿತವಾದ ಸರ್ವವಿಧ ಕೈಂಕರ್ಯವನ್ನು ಸ್ವರೂಪ ಅನುಸಂಧಾನ ಪುರಸ್ಸರವಾಗಿ ಶಾಶ್ವತವಾಗಿ ಮಾಡುತ್ತಿರುವುದೇ ಆಗಿದೆ.

ಹೀಗೆ ಅರ್ಥಪಂಚಕ ಸಂಗ್ರಹಿಸಲಾಯಿತು.

ಶ್ರುತಿಗಳಲ್ಲಿ, ವಿಶೇಷವಾಗಿ ಉಪನಿಷತ್ತುಗಳಲ್ಲಿ, ಆಪಾತತಃ ಪರಸ್ಪರ ವಿರೋಧವಿರುವಂತೆ ಕೆಲವು ಭಾಗಗಳು ಕಂಡು ಬಂದರೂ, ಅದರಲ್ಲಿ ಎಲ್ಲ ವಾಕ್ಯಗಳಿಗೂ ಪ್ರಾಮಾಣ್ಯವನ್ನು ಬಿಡದೆ ಸಮಂಜಸವಾಗಿ ತಾತ್ಪರ್ಯ ನಿರ್ಣಯವನ್ನು ಮಾಡುವ ವಿಧಾನವನ್ನು ಭಗವದ್ರಾಮಾನುಜರು 'ಶ್ರೀ ವೇದಾರ್ಥಸಂಗ್ರಹ' ವೆಂಬ ಗ್ರಂಥರತ್ನದಲ್ಲಿ ತೋರಿಸಿಕೊಟ್ಟಿದ್ದಾರೆ. ಅದರಂತೆ ಬ್ರಹ್ಮ ಒಂದೇ ಇದೆ, ಅಥವಾ ಜೀವನೂ ಬ್ರಹ್ಮವೂ ಒಂದೇ ಎಂದು ಕೆಲವೆಡೆಯೂ, ಜೀವ, ಬ್ರಹ್ಮ, ಅಚೇತನ-ಗಳು ಬೇರೆ ಬೇರೆ ಎಂದು ಕೆಲವೆಡೆಯೂ, ಹೀಗೆ ಬ್ರಹ್ಮ ಸಕಲಗುಣಪರಿಪೂರ್ಣವೆಂದೂ, ಬ್ರಹ್ಮ ನಿರ್ಗುಣವೆಂದೂ, ಈ ರೀತಿ ಪರಸ್ಪರ ವಿರುದ್ಧವಂತೆ ಕಾಣುವ ವಾಕ್ಯಗಳಲ್ಲಿ ಎಲ್ಲಕ್ಕೂ ಸಮಪ್ರಾಮಾಣ್ಯವನ್ನು ಒಪ್ಪುವ ವಿಶಿಷ್ಟಾದ್ವೈತದಲ್ಲಿ ಪರಮಾತ್ಮನು ಚೇತನಾಚೇತನಗಳೊಳಗೆ ಆತ್ಮನಾಗಿದ್ದು, ಅವನ ಶರೀರವಾದ ಚಿದಚಿತ್ತುಗಳನ್ನೂ, ಆತ್ಮನಾದ ಅವನನ್ನೂ ಸೇರಿಸಿ ಒಂದೇ ವಸ್ತುವೆನ್ನಲಾಗಿದೆ ಎಂದು ಪ್ರತಿಪಾದಿಸಿದೆ.

ಈ ಅಂಶದಲ್ಲಿ ಶ್ವೇತಾಶ್ವತರೋಪನಿಷತ್ತಿನ ಮಂತ್ರಗಳ ಮೂಲಕ ಇಲ್ಲಿ ಮೊದಲು ಸಿದ್ಧಾಂತವನ್ನು ಪ್ರತಿಪಾದಿಸಿ ನಂತರ ಬೇರೆ ಉಪನಿಷತ್ತುಗಳಲ್ಲಿಯೂ ಇದೇ ತತ್ತ್ವಗಳು ಪ್ರತಿಪಾದಿತವಾಗಿರುವ ರೀತಿ ಇಲ್ಲಿ ವಿವರಿಸಲ್ಪಡುತ್ತದೆ. (ಇಲ್ಲಿ ಶ್ವೇತಾಶ್ವತರೋಪನಿಷತ್ತನ್ನು ಆಯ್ದುಕೊಂಡದ್ದಕ್ಕೆ ಎರಡು ಕಾರಣಗಳಿವೆ: 1) ಈ ಉಪನಿಷತ್ತಿನ ಪ್ರಕರಣವನ್ನು ಗಮನಿಸಿದಾಗ ಅನೇಕ ಬ್ರಹ್ಮಜ್ಞಾನಿಗಳಾದ ಮಹರ್ಷಿಗಳು ಒಂದುಗೂಡಿ ತತ್ತ್ವವಿಚಾರವನ್ನು ಮಾಡುತ್ತ 'ಯಾವುದು ಕಾರಣವಾದ ಬ್ರಹ್ಮ', 'ನಾವೆಲ್ಲ ಎಲ್ಲಿಂದ ಉಂಟಾಗಿದ್ದೇವೆ', 'ಯಾರಿಂದ ಬದುಕುತ್ತಿದ್ದೇವೆ?', 'ಎಲ್ಲಿ ಕೊನೆಗೊಳ್ಳು-ತ್ತೇವೆ', 'ಯಾರಿಂದ ಒಳಗಿದ್ದು ಪ್ರೇರಿತರಾಗಿ ಸುಖದುಃಖಗಳಲ್ಲಿ ಪ್ರವರ್ತಿಸುತ್ತೇವೆ?' ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡಿರುವುದರಿಂದ ಈ ಪ್ರಕರಣ ಗ್ರಾಹ್ಯತಮವಾಗಿದೆ. 2) ಬೇರೆ ಉಪನಿಷತ್ತುಗಳಲ್ಲಿ ಹೇಳಿದ ಅಭೇದ (ಜೀವ, ಬ್ರಹ್ಮ ಒಂದೇ ಎಂಬ) ವಾಕ್ಯಗಳಿಗೆ ಘಟಕ ಶ್ರುತಿಗಳಿಗೆ ಅನುಸಾರವಾಗಿ (ಅಂತರ್ಯಾಮಿ ಬ್ರಾಹ್ಮಣದಂತೆ) ಅರ್ಥ ಮಾಡಲಾದರೂ, ಇಲ್ಲಿನ ಬೇರೆಬೇರೆಯಾಗಿ ತಿಳಿಸಿರುವ ತತ್ತ್ವಗಳ ವಿಶದ ಜ್ಞಾನ ಅವಶ್ಯ ಅಪೇಕ್ಷಿತ ಮತ್ತು ಈ ವಿಷಯಗಳು ಅನನ್ಯಥಾಸಿದ್ಧವಾಗಿದೆ (ಬೇರೆ ವಿಧವಾಗಿ ನಿರ್ವಹಿಸಲಾಗುವುದಿಲ್ಲ).

ಶ್ವೇತಾಶ್ವತರೋಪನಿಷತ್ತಿನಲ್ಲಿ 'ಸಂಯುಕ್ತಮೇತತ್ ಕ್ಷರಂ ಅಕ್ಷರಂ ಚ ವ್ಯಕ್ತಾವ್ಯಕ್ತಂ ಭರತೇ ವಿಶ್ವಮೀಶಃ' (1.8) ಎಂಬ ಮಂತ್ರದಲ್ಲಿ ಕ್ಷರಂ, ಅಕ್ಷರಂ ಮತ್ತು ಈಶನೆಂಬ 'ತತ್ವತ್ರಯ'ದ ವಿವರಣೆ ಪ್ರಾರಂಭವಾಗಿದೆ. ಮುಂದೆ 'ಜ್ಞಾಜ್ಞೌ ದ್ವಾವಜಾವೀಶನೀಶೌ ಅಜಾ ಹ್ಯೇಕಾ ಭೋಕ್ತೃಭೋಗಾರ್ಥಯುಕ್ತಾ' (1.9) ಎಂಬಲ್ಲಿಯೂ ಚೇತನ, ಅಚೇತನ ಮತ್ತು ಈಶ್ವರ ಎಂಬ ಮೂರು ತತ್ತ್ವಗಳು ಹೇಳಲ್ಪಟ್ಟಿದೆ. ಇಲ್ಲಿ 'ಜ್ಞಃ' ಎಂದು ಸರ್ವಜ್ಞನಾದ ಈಶ್ವರನೂ, 'ಅಜ್ಞಃ' ಎಂದು ಸರ್ವಜ್ಞನಲ್ಲದ ಜೀವಾತ್ಮನೂ, 'ಅಜಾ ಹ್ಯೇಕಾ' ಎಂದು ಅವರಿಬ್ಬರಿಗಿಂತ ಭಿನ್ನವಾದ ಜ್ಞಾನವಿಲ್ಲದ ಪ್ರಕೃತಿಯೂ ಹೇಳಲ್ಪಟ್ಟಿದೆ. 'ಭೋಕ್ತಾ' ಎಂಬ ಜೀವಾತ್ಮನ ಭೋಗಕ್ಕಾಗಿ ಇರುವ ಶಬ್ದಾದಿ ಗುಣಗಳಿಂದ ಕೂಡಿದೆ ಪ್ರಕೃತಿ ಎಂದೂ ತಿಳಿಸಿದೆ. ಹೀಗೆ ಸರ್ವಜ್ಞತ್ವ (ಎಲ್ಲ ತಿಳಿದಿರುವಿಕೆ), ಅಸರ್ವಜ್ಞತ್ವ (ಎಲ್ಲ ತಿಳಿದಿಲ್ಲದಿರುವಿಕೆ) ಗಳಿಂದ ಜೀವಾತ್ಮ, ಪರಮಾತ್ಮರಿಗೆ ಭೇದವೂ, ಭೋಗ್ಯತ್ವ (ಅನುಭವಿಸಲ್ಪಡುವಿಕೆ) ಮತ್ತು ಭೋಕ್ತೃತ್ವ (ಅನುಭವಿಸುವಿಕೆ)ಗಳಿಂದ ಜೀವಾತ್ಮ, ಪ್ರಕೃತಿಗಳಿಗೆ ಭೇದವೂ ವಿಶದವಾಯಿತು. ಹೀಗೇ 'ಕ್ಷರಂ ಪ್ರಧಾನಮಮೃತಾಕ್ಷರಂ ಹರಃ ಕ್ಷರಾತ್ಮಾನೌ ಈಶತೇ ದೇವ ಏಕಃ' (1.10) ಎಂಬಲ್ಲಿ ಕೆಳಗೆ ಹೇಳಿದ ಕ್ಷರ, ಅಕ್ಷರ, ಈಶರನ್ನು ಮತ್ತೆ ವಿವರಿಸಿದೆ. 'ಪ್ರಧಾನ'ವೆಂಬ ಪ್ರಕೃತಿ ಪ್ರತಿ-ಕ್ಷಣವೂ (ಸತತವಾಗಿ) ಪರಿಣಾಮ(ವಿಕಾರ)ವನ್ನು ಹೊಂದುತ್ತಿರುವುದರಿಂದ 'ಕ್ಷರ'ವೆನಿಸಿದೆ. ಭೋಕ್ತೃವಾದ ಜೀವ ಅಮೃತ(ಶಾಶ್ವತ)ನಾದ್ದರಿಂದಲೂ, ವಿಕಾರವಿಲ್ಲದವನಾದ್ದರಿಂದಲೂ 'ಅಕ್ಷರ'ವೆನ್ನಲ್ಪಟ್ಟಿದ್ದಾನೆ. ಇಲ್ಲಿ, ಅಚೇತ-ನಕ್ಕೂ, ಜೀವಾತ್ಮನಿಗೂ ಸ್ವರೂಪದಲ್ಲಿ ವಿಕಾರ ಮತ್ತು ಅದಿಲ್ಲದಿರುವಿಕೆಯಿಂದ ಭೇದ ಹೇಳಲಾಯಿತು. ಹೀಗೆಯೇ 'ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ ಸರ್ವಂ ಪ್ರೋಕ್ತಂ ತ್ರಿವಿಧಂ ಬ್ರಹ್ಮಮೇತತ್' (1.12) ಎಂಬಲ್ಲಿ 'ಭೋಕ್ತಾ' ಎಂದು ಚಿತ್ತತ್ತ್ವವಾದ ಜೀವಾತ್ಮ, 'ಭೋಗ್ಯಂ' ಎಂದು ಅಚಿತ್ತತ್ತ್ವವಾದ ಪ್ರಕೃತಿ (ಪ್ರಧಾನ) ಹಾಗೂ 'ಪ್ರೇರಿತಾ' ಎಂದು

ನಿಯಾಮಕನಾದ ಈಶ್ವರ ನಿರ್ದೇಶಿಸಲ್ಪಟ್ಟಿದ್ದು, ತತ್ತ್ವತ್ರಯ ವಿವೃತವಾಗಿದೆ.

ಮುಂದೆ 'ಅಸ್ಮಾನ್ಮಾಯೀ ಸೃಜತೇ ವಿಶ್ವಮೇತತ್ ತಸ್ಮಿಂಶ್ಚಾನ್ಯಃ ಮಾಯಯಾ ಸನ್ನಿರುದ್ಧಃ' (4.9), 'ಮಾಯಾಂ ತು ಪ್ರಕೃತಿಂ ವಿದ್ಯಾತ್ ಮಾಯಿನಂ ತು ಮಹೇಶ್ವರಂ' (4.10) ಎಂಬಲ್ಲಿ 'ಮಾಯೀ' ಎಂದು ಈಶ್ವರನೂ, 'ಮಾಯಯಾ' ಎಂದು ಅಚಿತ್ತಾದ ಪ್ರಕೃತಿಯೂ, 'ಅನ್ಯಃ' ಎಂದು ಚಿತ್ ಜೀವನೂ ಆದ ತತ್ತ್ವತ್ರಯ ಹೇಳಲಾಗಿದೆ. ಇಲ್ಲಿ 'ಮಾಯಿಯಾ-ದವನು ಮಾಯೆಯನ್ನು ಉಪಕರಣವಾಗಿಟ್ಟುಕೊಂಡು ಜಗತ್ತನ್ನು ಸೃಷ್ಟಿಸುವವನು. ಆತನಿಂದ ಸೃಷ್ಟವಾದ ಜಗತ್ತಿನಲ್ಲಿ (ಮಾಯಿಗಿಂತ) ಭಿನ್ನನಾದ(ಬೇರೆಯಾದ)ವನು ಮಾಯೆಯೆಂಬ ಕರಣ(ಸಾಧನ)ದಿಂದ ಕಟ್ಟಲ್ಪಟ್ಟಿದ್ದಾನೆ. ಮಾಯೆ-ಯೆಂಬುದು ಪ್ರಕೃತಿ; ಮಾಯಿಯೆಂಬುದು ಈಶ್ವರನೆಂದರ್ಥ. ಆದ್ದರಿಂದ, ಈಶ್ವರನು ಪ್ರಕೃತಿಯೆಂಬ ಉಪಕರಣದಿಂದ ಪ್ರಪಂಚವನ್ನು ಉಂಟುಮಾಡುತ್ತಾನೆ. ಅದರಲ್ಲಿ ಈಶ್ವರನಿಗಿಂತ ಬೇರೆಯಾದ ಜೀವನು ಪ್ರಕೃತಿಯಾದ ಸಾಧನದಿಂದ ಬಂಧನಕ್ಕೊಳಗಾಗುತ್ತಾನೆ ಎಂದು ಈ ಶ್ರುತಿಯ ಅರ್ಥ. ಇಲ್ಲಿ, ಈಶ್ವರನ ಬಂಧಕತ್ವ, ಜೀವನ ಬಂಧ್ಯತ್ವ (ಬಂಧನಕ್ಕೊಳಗಾಗುವಿಕೆ) ಮತ್ತು ಪ್ರಕೃತಿಯ ಬಂಧನ-ಸಾಧನತ್ವ ಹೇಳಿರುವುದರಿಂದ ತತ್ವತ್ರಯಗಳ ಪರಸ್ಪರ ಭೇದ ಸಿದ್ಧಿಸುವುದು.

ಹೀಗೆಯೇ 'ಸ ಕಾರಣಂ ಕರಣಾಧಿಪಾಧಿಪಃ' (6.9) ಎಂಬಲ್ಲಿ 'ಕರಣಂ' ಎಂದು ಅಚಿತ್ ಪರಿಣಾಮಗಳಾದ ಇಂದ್ರಿಯಗಳು ಹೇಳಲ್ಪಟ್ಟಿವೆ. 'ಅಧಿಪಃ' ಎಂದು ಜೀವನೂ, 'ಅಧಿಪಾಧಿಪಃ' ಎಂದು ಈಶ್ವರನೂ ವಿವಕ್ಷಿತರು. ಇಲ್ಲೂ ಚಿದಚಿದೀಶ್ವರ-ರೆಂಬ ತತ್ತ್ವತ್ರಯ ಪ್ರತಿಪಾದಿತವಾಯಿತು. ಹೀಗೆ 'ಪ್ರಧಾನಕ್ಷೇತ್ರಜ್ಞಪತಿಃ ಗುಣೇಶಃ ಸಂಸಾರಮೋಕ್ಷಸ್ಥಿತಿಬಂಧಹೇತುಃ' (6.16) ಎಂಬಲ್ಲಿಯೂ ಈ ತತ್ತ್ವತ್ರಯ ಉಕ್ತವಾಗಿದೆ. 'ಗುಣೇಶಃ' ಎಂದರೆ ಸತ್ವ, ರಜಸ್, ತಮಸ್ ಎಂಬ ಗುಣಗಳಿಗೆ ಈಶ - ನಿಯಾಮಕ. ಪ್ರಧಾನ ಕ್ಷೇತ್ರಜ್ಞರಿಗೆ, ಅಂದರೆ, ಪ್ರಕೃತಿಜೀವರಿಗೆ, ಪತಿ - ಸ್ವಾಮಿ, ಈಶ್ವರ, ಸಂಸಾರದಿಂದ ಮೋಕ್ಷಕ್ಕೆ (ಬಿಡುಗಡೆಗೆ), ಮತ್ತು ಸಂಸಾರದಲ್ಲಿ ಇರುವಿಕೆ (ಸ್ಥಿತಿ) ಎಂಬ ಬಂಧನಕ್ಕೆ ಹೇತುಃ - ಕಾರಣನಾದವನೆಂದರ್ಥ. ಈ ಪ್ರಕರಣದಲ್ಲಿ 'ಜ್ಞಾಜ್ಞೌ ದ್ವಾವಜಾವೀಶನೀಶಾವಜಾ ಹ್ಯೇಕಾ ಭೋಕ್ತೃಭೋಗಾರ್ಥಯುಕ್ತಾ' (1.9) 'ಅನೀಶಶ್ಚಾತ್ಮಾ ಬಧ್ಯತೇ ಭೋಕ್ತೃಭಾವಾತ್' (1.8) ಎಂದು 'ಅಜಾ' ಎನ್ನಲ್ಪಟ್ಟ ಪ್ರಕೃತಿಯ ಭೋಗ್ಯತ್ವವೂ 'ಅನೀಶ' ಶಬ್ದದಿಂದ ಹೇಳಲ್ಪಟ್ಟ ಜೀವಾತ್ಮನ ಭೋಗ್ಯವಾದ ಪ್ರಕೃತಿಯ ಭೋಕ್ತೃತ್ವದ ಪ್ರಯುಕ್ತ ಬಂಧನಕ್ಕೊಳಗಾಗುವಿಕೆಯೂ ಹೇಳಿದ್ದು 'ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ' (1.12) ಎಂದು ಭೋಕ್ತೃ, ಭೋಗ್ಯ, ಪ್ರೇರಯಿತೃಗಳಾದ ಚಿದಚಿದೀಶ್ವರರ ಪ್ರತಿಪಾದನದಿಂದ, ಭೋಕ್ತೃವಾದ ಜೀವನು ಭೋಗ್ಯವಾದ ಪ್ರಕೃತಿಯನ್ನು ಅನುಭವಿಸುವವನು; ಈಶ್ವರನು ಅವನನ್ನು ಆ ಅನುಭವದಲ್ಲಿ ತೊಡಗಿಸುತ್ತಾನೆ ಎಂದು 'ಪ್ರೇರಿತಾರಂ' ಎಂಬ ಪದದ ಸ್ವಾರಸ್ಯದಿಂದ ತಿಳಿಯುತ್ತೆ.

ಹೀಗೆಯೇ 'ಜ್ಞಾಜ್ಞೌ ದ್ವಾವಜಾವೀಶನೀಶೌ' ಮತ್ತು 'ಭೋಕ್ತಾ ಭೋಗ್ಯಂ' ಎಂಬ ಮಂತ್ರಗಳನ್ನು ಪರಾಮರ್ಶಿಸಿದಾಗ, ಜೀವಾತ್ಮನು ಈಶ್ವರನಿಂದ ಪ್ರೇರಿತನಾಗಿ ಭೋಗ್ಯರೂಪವಾದ ಪ್ರಕೃತಿಯನ್ನು ಅನುಭವಿಸುತ್ತಾನೆ; ಮತ್ತು ಆ ಅನುಭವ-ದಿಂದ ಬಂಧನಕ್ಕೊಳಗಾಗುತ್ತಾನೆಂದು ತಿಳಿಯುತ್ತದೆ. ಹೀಗೆ ಈ ಎರಡು ಮಂತ್ರಗಳಿಂದ ಭೋಗ್ಯವಾದ ಪ್ರಾಕೃತ ವಸ್ತುವಿನ ಅನುಭವದಲ್ಲಿ ತೊಡಗಿಸುವುದರಿಂದ ಈಶ್ವರನು ಜೀವಾತ್ಮನ ಬಂಧಕ್ಕೆ ಕಾರಣನಾಗುವನೆಂದೇರ್ಪಡುತ್ತೆ. 'ಪ್ರಧಾನಕ್ಷೇತ್ರಜ್ಞ' ಮಂತ್ರದಲ್ಲಿ 'ಸಂಸಾರಮೋಕ್ಷಸ್ಥಿತಿಬಂಧಹೇತುಃ' (6.16) ಎಂಬಲ್ಲಿ ಈ ಜೀವಾತ್ಮನ ಬಂಧನಕ್ಕೆ ಕಾರಣವಾಗುವಿಕೆ ಮುಗಿಸಲಾಗಿದೆ ಎಂದು ಸಿಗುವುದು. 'ಗುಣೇಶಃ' ಎಂದು ಈಶ್ವರನಿಗೆ ವಿಶೇಷಣವಿರುವುದರಿಂದ 'ಕ್ಷೇತ್ರಜ್ಞ'ನೆನಿಸಿದ ಪ್ರಕೃತಿಸಹಿತನಾದ ಜೀವನನ್ನು ರಜಸ್ತಮಸ್ಸಿನಲ್ಲಿ ಪ್ರವರ್ತಿಸಿದಾಗ ಈಶ್ವರ ಸಂಸಾರದಲ್ಲಿ ಬಂಧಕ್ಕೆ ಕಾರಣನೂ, ಸತ್ವ ಗುಣದಲ್ಲಿ ಪ್ರವರ್ತಿಸಿದಾಗ ಮೋಕ್ಷಕ್ಕೆ ಕಾರಣನೂ ಆಗುವನು.

ಇಲ್ಲಿ ಹೇಳಿದ ಈಶ್ವರನ ಕ್ಷೇತ್ರಜ್ಞನನ್ನು ಸಂಸಾರದಲ್ಲಿ ಬಂಧಿಸುವಿಕೆ ಆ ಕ್ಷೇತ್ರಜ್ಞ(ಜೀವ)ನಿಂದ ಮಾಡಲಾದ ಕರ್ಮ (ಪುಣ್ಯ, ಪಾಪ ಜನಕವಾದ ಕ್ರಿಯೆ)ಕ್ಕೆ ಫಲ ಕೊಡುವುದೇ ಆಗಿದೆ ಎಂಬಂಶ 'ಗುಣಾನ್ವಯೋ ಯಃ ಫಲಕರ್ಮಕರ್ತಾ ಕೃತಸ್ಯ ತಸ್ಯೈವ ಸ ಚೋಪಭೋಕ್ತಾ । ಸ ವಿಶ್ವರೂಪಃ ತ್ರಿಗುಣಃ ತ್ರಿವರ್ತ್ಮಾ ಪ್ರಾಣಾಧಿಪಃ ಸಂಚರತಿ ಸ್ವಕರ್ಮಭಿಃ ॥ (5.7) ಮತ್ತು 'ಏಕೋ ದೇವಃ ಸರ್ವಭೂತೇಷು ಗೂಢಃ ಸರ್ವವ್ಯಾಪೀ ಸರ್ವಭೂತಾನ್ತರಾತ್ಮಾ । ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ' (6.11) ಎಂಬ ಮಂತ್ರಗಳಲ್ಲಿ ವಿವರಿಸಲಾಗಿದೆ.

ಇಲ್ಲಿ ಗುಣಾನ್ವಯಃ - ಸತ್ತ್ವ, ರಜಸ್, ತಮಸ್ ಎಂಬ ಗುಣಗಳಿಂದ ಕೂಡಿದ ಯಾವ ಕ್ಷೇತ್ರಜ್ಞನು, ಫಲಕರ್ಮಕರ್ತಾ - ಫಲಕ್ಕೆ ಸಾಧನವಾದ ಕರ್ಮ(ಕ್ರಿಯೆ)ವನ್ನು ಮಾಡುತ್ತಾನೆ, ಸ ಚ - ಆ ಕ್ಷೇತ್ರಜ್ಞನೇ, ಕೃತಸ್ಯ - ತಾನು ಮಾಡಿದ ಕರ್ಮಗಳ, ತಸ್ಯ ಫಲೋಪಭೋಕ್ತಾ - ಫಲವನ್ನು ಅನುಭವಿಸುತ್ತಾನೆ. ಸಃ - ಇಂಥ ಕರ್ಮಫಲವನ್ನನುಭವಿಸುವ, ಪ್ರಾಣಾಧಿಪಃ - ಇಂದ್ರಿಯಗಳಿಗೆ ಅಧಿಪತಿಯಾದ ಜೀವನು, ಆಯಾ ಕರ್ಮಫಲಕ್ಕೆ ತಕ್ಕಂತೆ ದೇವ, ಮನುಷ್ಯ ಮುಂತಾದ ಅನೇಕ ರೂಪಗಳನ್ನು

ಹೊಂದಿ, ತ್ರಿಗುಣಃ - ಕಾಮ, ಕ್ರೋಧ, ಲೋಭ ಎಂಬ ಮೂರು ಗುಣಗಳಿಂದ ಕೂಡಿ, ತ್ರಿವರ್ತ್ಮಾ - ತನ್ನ ಕರ್ಮಾನುಸಾರ-ವಾಗಿ ಸ್ವರ್ಗ, ನರಕ ಅಥವಾ ಭೂಲೋಕವನ್ನು ತಲುಪಿಸುವ ಮೂರು ಮಾರ್ಗಗಳನ್ನುಳ್ಳವನಾಗಿ, ಸ್ವಕರ್ಮಭಿಃ - ತಾನು ಮಾಡಿದ ಕರ್ಮಗಳಿಂದ, ಸಂಚರತಿ - ಸಂಸಾರದಲ್ಲಿ ಸುತ್ತುತ್ತಿರುವನೆಂದು ಮೊದಲ ಮಂತ್ರದ ಅರ್ಥ.

ಎರಡನೇಯ ಮಂತ್ರದಲ್ಲಿ 'ಕರ್ಮಾಧ್ಯಕ್ಷಃ' ಎಂದು ಈಶ್ವರನಿಗೆ ವಿಶೇಷಣ ಇರುವುದರಿಂದ ಈಶ್ವರನು ಕರ್ಮದ ಫಲವನ್ನು ಕೊಡುವನೆಂದು ಏರ್ಪಡುತ್ತದೆ. ಇಲ್ಲಿ ಮೊದಲನೇ ಮಂತ್ರದಲ್ಲಿ ಕ್ಷೇತ್ರಜ್ಞನು ತನ್ನ ಕರ್ಮದಿಂದ ಸಂಸಾರದಲ್ಲಿ ಬದ್ಧನಾಗುವನೆಂದೂ, ಎರಡನೇ ಮಂತ್ರದಲ್ಲಿ ಈಶ್ವರ ಕ್ಷೇತ್ರಜ್ಞನಿಗೆ ಕರ್ಮ ಫಲವನ್ನು ಕೊಡುತ್ತಾನೆಂದೂ ಹೇಳಿರುವುದ-ರಿಂದ ಈಶ್ವರನು ಕ್ಷೇತ್ರಜ್ಞನ ಸಂಸಾರಕ್ಕೆ ಕಾರಣನಾಗುವಿಕೆ ಕ್ಷೇತ್ರಜ್ಞನ ಕರ್ಮಫಲವನ್ನು ಕೊಡುವುದಕ್ಕಾಗಿ ಎಂದು ಸಿದ್ಧಿಸುತ್ತದೆ. ಆದ್ದರಿಂದ, ಕ್ಷೇತ್ರಜ್ಞನಾದ ಜೀವನು ಈಶ್ವರನಿಂದ ಸಂಸಾರಸೆರೆಯಲ್ಲಿ ಬಂಧಿಸಲ್ಪಡುವುದರಿಂದ ಬಂಧಿಸುವ ಈಶ್ವರನಿಗೂ, ಬದ್ಧನಾಗುವ ಜೀವನಿಗೂ ಪರಸ್ಪರ ಬಹಳ ವ್ಯತ್ಯಾಸವಿದೆಯೆಂದು ವ್ಯಕ್ತವಾಗುವುದು.

'ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ । ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತಿ ಅನಶ್ನನ್ನನ್ಯಃ ಅಭಿಚಾಕಶೀತಿ' (4.6) ಎಂಬ ಮಂತ್ರದಲ್ಲಿ 'ಸಮಾನಂ ವೃಕ್ಷಂ' ಎಂದು ಶರೀರ ರೂಪದಲ್ಲಿ ಪರಿಣಾಮ-ಗೊಂಡಿರುವ ಅಚಿತ್ತತ್ತ್ವವೂ, 'ದ್ವಾ ಸುಪರ್ಣಾ' ಎಂದು ಜೀವ ಮತ್ತು ಈಶ್ವರರು ಹೇಳಲ್ಪಟ್ಟಿದ್ದು, ತತ್ತ್ವತ್ರಯ ಪ್ರತಿಪಾದಿತವಾಗಿದೆ. ಜೀವನು ಕರ್ಮಫಲವನ್ನು ಅನುಭವಿಸುವುದರಿಂದ ಕರ್ಮವಶ್ಯ(ಕರ್ಮಕ್ಕೆ ಒಳಪಟ್ಟವ)ನೆಂದೂ ಜೀವ ಮತ್ತು ಈಶ್ವರರಲ್ಲಿ ಭೇದ ತಿಳಿಸಲಾಗಿದೆ. ತಯೋಃ - ಜೀವ ಮತ್ತು ಈಶ್ವರರಲ್ಲಿ, ಅನ್ಯಃ - ಒಬ್ಬನಾದ ಜೀವಾತ್ಮನು, ಪಿಪ್ಪಲಂ - ಸುಖದುಃಖರೂಪವಾದ ಕರ್ಮ ಫಲವನ್ನು, ಸ್ವಾದು - ಭೋಗ್ಯವಾಗಿ, ಅತ್ತಿ - ತಿನ್ನುತ್ತಾನೆ (ಅನುಭವಿಸುವನು). ಅನ್ಯಃ - ಇತರನಾದ ಪರಮಾತ್ಮನು, ಅನಶ್ನನ್ = ಕರ್ಮಫಲವನ್ನನುಭವಿಸದಿದ್ದು, ಅಭಿಚಾಕಶೀತಿ = ಎಲ್ಲೆಡೆಯಲ್ಲಿಯೂ ಬೆಳಗುವನು, ಸರ್ವಜ್ಞತ್ವ ಮುಂತಾದ ಎಲ್ಲ ಗುಣಗಳಿಗೂ ತಡೆಯಿಲ್ಲದಿರುತ್ತಾನೆಂದರ್ಥ. ಹೀಗೆ ಚಿತ್, ಅಚಿತ್ ಹಾಗೂ ಈಶ್ವರರಿಗೆ ಇರುವ ವೈಲಕ್ಷಣ್ಯವನ್ನು ಅನೇಕ ಪ್ರಕಾರದಿಂದ ಹೇಳಿರುವುದರಿಂದ ಇದೇ ಶ್ರುತಿಸಿದ್ಧಾಂತವೆಂದು ಏರ್ಪಡುತ್ತದೆ.

ಹೀಗೇ ಈಶ್ವರನಿಗೆ 'ಪರಾಸ್ಯ ಶಕ್ತಿಃ ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ' (6.8) ಮುಂತಾದೆಡೆಗಳಲ್ಲಿ ಸಹಜವಾಗಿಯೇ ಸರ್ವಜ್ಞತ್ವ, ಸರ್ವಶಕ್ತಿತ್ವ ಮುಂತಾದ ಗುಣಗಳೂ, 'ಯ ಈಶೇಽಸ್ಯ ಜಗತಃ ನಿತ್ಯಮೇವ ನಾನ್ಯಃ ಹೇತುಃ ವಿದ್ಯತ ಈಶನಾಯ' (6.17) ಎಂದು ಸದಾ ನಿರುಪಾಧಿಕವಾದ (ಬೇರೆ ಕಾರಣವಿಲ್ಲದ) ಈಶ್ವರತ್ವವೂ, 'ಸರ್ವಸ್ಯ ಶರಣಂ ಸುಹೃತ್' (3.17) ಮುಂತಾದ ಕಡೆ ಸ್ವಾಭಾವಿಕವಾಗಿ ಎಲ್ಲರಿಗೂ ಹಿತೈಷಿತ್ವ ಮುಂತಾದ ಅನೇಕ ಗುಣಗಳೂ ಸಿದ್ಧಿಸುತ್ತವೆ. ಇದರಿಂದಲೂ ಜೀವನಿಗೂ, ಈಶ್ವರನಿಗೂ ಪರಸ್ಪರ ಭೇದ ತಿಳಿಯುತ್ತದೆ.

'ನಿತ್ಯೋ ನಿತ್ಯಾನಾಂ ಚೇತನಃ ಚೇತನಾನಾಂ ಏಕೋ ಬಹೂನಾಂ ಯೋ ವಿದಧಾತಿ ಕಾಮಾನ್' (6.13) ಎಂಬಲ್ಲಿ ಚೇತನರು ಅನೇಕರೆಂದಿರುವುದರಿಂದ ಜೀವಾತ್ಮರಲ್ಲೂ ಪರಸ್ಪರ ಭೇದ ಶ್ರುತಿಸಿದ್ಧವಾಗಿದೆ. ನಿತ್ಯ(ಶಾಶ್ವತ)ರಾದ ಅನೇಕ ಚೇತನರಿಗೆ ಯಾವ ಒಬ್ಬ ನಿತ್ಯ(ಶಾಶ್ವತ)ನಾದ ಚೇತನನು ಇಷ್ಟ ಫಲಗಳನ್ನು ಕೊಡುತ್ತಾನೆಂದು ಇದರ ಅರ್ಥ. ಹೀಗೇ 'ಅಜಾಮೇಕಾಂ ಲೋಹಿತಶುಕ್ಲಕೃಷ್ಣಾಂ ಬಹ್ವೀಃ ಪ್ರಜಾಃ ಸೃಜಮಾನಾಂ ಸರೂಪಾಃ । ಅಜೋ ಹ್ಯೇಕೋ ಜುಷಮಾಣಃ ಅನುಶೇತೇ ಜಹಾತ್ಯೇನಾಂ ಭುಕ್ತಭೋಗಾಂ ಅಜೋಽನ್ಯಃ' (4.5) ಎಂಬ ಮಂತ್ರದಲ್ಲಿ ಬದ್ಧ, ಮತ್ತು ಮುಕ್ತರೆಂಬ ಎರಡು ಬಗೆಯ ಜೀವರು ಹೇಳಲ್ಪಟ್ಟಿರುವರು. ಏಕಃ - ಒಬ್ಬ, ಅಜಃ - ನಿತ್ಯನಾದ ಚೇತನನು, ಅಜಾಂ - ಪ್ರಕೃತಿಯನ್ನು, ಜುಷಮಾಣಃ - ಸೇವಿಸುವವನಾಗಿ (ಭುಜಿಸುವವನಾಗಿ), ಅನುಶೇತೇ - ಅನುಸರಿಸಿ ಇರುವನು, ಅನ್ಯಃ ಅಜಃ - ಇನ್ನೊಬ್ಬ ನಿತ್ಯನಾದ ಚೇತನನು, ಭುಕ್ತಭೋಗಾಂ - ಅನುಭವಿಸಿದ ಶಬ್ದಾದಿ ವಿಷಯಗಳನ್ನುಳ್ಳ, ಏನಾಂ - ಈ ಅಜೆಯಾದ ಪ್ರಕೃತಿಯನ್ನು, ಜಹಾತಿ - ಬಿಡುತ್ತಾನೆಂದರ್ಥ. ಇಲ್ಲಿ 'ಅಜೋ ಹ್ಯೇಕೋ ಜುಷಮಾಣೋಽನುಶೇತೇ' ಎಂದು ಬದ್ಧನೂ, 'ಜಹಾತ್ಯೇನಾಂ' ಎಂಬುದರಿಂದ ಮುಕ್ತನೂ ಹೇಳಲ್ಪಡುತ್ತಾರೆ.

ಹೀಗೇ 'ವೇದಾಹಮೇತಂ ಪುರುಷಂ ಮಹಾಂತಂ ಆದಿತ್ಯವರ್ಣಂ ತಮಸಃ ಪರಸ್ತಾತ್' (3.8) ಎಂಬ ಮಂತ್ರದಲ್ಲಿ 'ತಮಸಃ ಪರಸ್ತಾತ್' ಎಂಬುದರಿಂದ ಪ್ರಕೃತಿ ಮಂಡಲದ ಮೇಲಿರುವ ನಿತ್ಯವಿಭೂತಿಯು ಹೇಳಲ್ಪಟ್ಟಿತು. ಪ್ರಕೃತಿಯ ಮೇಲ್ಗಡೆ-ಯೆಂದು ಅದರ ಅರ್ಥ. ಇದರಿಂದ ಪ್ರಕೃತಿಮಂಡಲದ ಊರ್ಧ್ವ ಭಾಗದಲ್ಲಿರುವ ಲೋಕವಿಶೇಷ ಸಿದ್ಧಿಸುತ್ತದೆ. 'ಕ್ಷಯಂತಮಸ್ಯ ರಜಸಃ ಪರಾಕೇ' (ತೈ.ಸಂ. 2.2.68) ಎಂಬ ಶ್ರುತಿವಾಕ್ಯದಿಂದಲೂ ಈಶ್ವರನು ಇಂತಹ ಅಪ್ರಾಕೃತ ಲೋಕದಲ್ಲಿರುವನೆಂದು ತಿಳಿಯುತ್ತದೆ. ಅಸ್ಯ ರಜಸಃ - ಈ ಪ್ರಕೃತಿ ಮಂಡಲದ, ಪರಾಕೇ - ಮೇಲ್ಗಡೆ, ಕ್ಷಯನ್ತಂ - ವಾಸಿಸುವವನನ್ನು ಎಂದರ್ಥ. 'ಕ್ಷಿ ನಿವಾಸಗತ್ಯೋಃ' (ತುದಾದಿ ಗಣ) ಎಂಬ ಧಾತುವಿನಿಂದ ಈ ಅರ್ಥ ನಿಷ್ಪನ್ನವಾಗುತ್ತದೆ. ಇಲ್ಲಿ 'ತಮಸಃ ಪರಸ್ತಾತ್' ಎಂಬುದರಿಂದ ಅಪ್ರಾಕೃತ ದೇಶವಿಶೇಷವೂ, 'ತದ್ವಿಷ್ಣೋಃ ಪರಮಂ ಪದಂ ಸದಾ ಪಶ್ಯನ್ತಿ

ಸೂರಯಃ' (ತೈ.ಸಂ. 1.3.11) ಎಂಬ ಶ್ರುತಿಯಿಂದ ಅಲ್ಲಿರುವ ನಿತ್ಯಸೂರಿಗಳೆಂದು ತಿಳಿದು ಬರುವ ಚೇತನ ವಿಶೇಷರೂ ಹೇಳಿದಂತಾಗುತ್ತಾರೆ. ನಿತ್ಯವಿಭೂತಿಯು 'ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್' (ತೈ.ಆ. 5.24), 'ತದಕ್ಷರೇ ಪರಮೇ ವ್ಯೋಮನ್' (ತೈ.ಆ. 6.1), 'ಆದಿತ್ಯವರ್ಣಂ ತಮಸಸ್ತು ಪಾರೇ' (ತೈ.ಆ. 3.38) ಮುಂತಾದೆಡೆ-ಗಳಲ್ಲಿಯೂ ಹೇಳಲಾಗಿದೆ. ಹೀಗೆಯೇ ನಿತ್ಯರ ವಿಷಯವೂ 'ಯತ್ರ ಪೂರ್ವೇ ಸಾಧ್ಯಾಸ್ಸಂತಿ ದೇವಾಃ' (ತೈ.ಆ. 3.38), 'ಸಾಧ್ಯಾ ಋಷಯಶ್ಚ ಯೇ ' (ತೈ.ಆ. 3.35) ಮುಂತಾದೆಡೆಗಳಲ್ಲಿ ಪ್ರಸ್ತುತವಾಗಿದೆ.

ಹೀಗೆಯೇ 'ಜ್ಞಃ ಕಾಲಕಾಲೋ ಗುಣೀ ಸರ್ವವಿದ್ಯಃ' (6.16) ಎಂಬಲ್ಲಿ ಕಾಲವೆಂಬ ತತ್ತ್ವವು ಹೇಳಲ್ಪಟ್ಟಿದೆ. ಕಾಲಕಾಲಃ - ಕಾಲಕ್ಕೂ ನಿಯಾಮಕನೆಂದರ್ಥ. 'ಸರ್ವೇ ನಿಮೇಷಾ ಜಜ್ಞಿರೇ ವಿದ್ಯುತಃ ಪುರುಷಾದಧಿ । ಕಲಾ ಮುಹೂರ್ತಾಃ ಕಾಷ್ಠಾಶ್ಚಾ-ಹೋರಾತ್ರಾಶ್ಚ ಸರ್ವಶಃ ॥ ಅರ್ಧಮಾಸಾ ಮಾಸಾ ಋತವಃ ಸಂವತ್ಸರಶ್ಚ ಕಲ್ಪತಾಂ' (ತೈ.ಆ. 6.2) ಎಂಬಲ್ಲಿಯೂ ಪರಮಾತ್ಮನ ಕಾಲಕಾರಣತ್ವ ವಿದಿತವಾಗಿದೆ.

ಇನ್ನು ಜೀವಾತ್ಮನ ಧರ್ಮವಾದ ಚೈತನ್ಯ(ಧರ್ಮಭೂತ ಜ್ಞಾನ)ವೂ 'ಪ್ರಜ್ಞಾ ಚ ತಸ್ಮಾತ್ ಪ್ರಸೃತಾ ಪುರಾಣೀ' (4.18) ಎಂಬಲ್ಲಿ ಹೇಳಿದೆ. ಇದು 'ನಹಿ ವಿಜ್ಞಾತುಃ ವಿಜ್ಞಾತೇಃ ವಿಪರಿಲೋಪೋ ವಿದ್ಯತೇ ಅವಿನಾಶಿತ್ವಾತ್' (ಆತ್ಮನಃ) (ಬೃ.ಉ. 6.3.30), 'ಅವಿನಾಶೀ ವಾ ಅರೇಽಯಮಾತ್ಮಾ ಅನುಚ್ಛಿತ್ತಿಧರ್ಮಾ' (ಬೃ.ಉ. 6.5.14) ಮುಂತಾದೆಡೆಗಳಲ್ಲಿ ಸಿದ್ಧವಾಗಿದೆ. ಇಲ್ಲಿ ಜೀವಾತ್ಮ ಸ್ವರೂಪ ಭಿನ್ನವಾದ, ಅವನ ಧರ್ಮವಾದ ಜ್ಞಾನವಿರುವುದು ಸ್ಪಷ್ಟೋಕ್ತವಾಗಿದೆ. ಈ ರೀತಿ ಪರಸ್ಪರ ವಿಲಕ್ಷಣನಾದ ಚಿದಚಿದೀಶ್ವರ ತತ್ತ್ವತ್ರಯವೂ, ಚಿತ್ ಮತ್ತು ಅಚಿತ್ ತತ್ತ್ವಗಳ ಅವಾಂತರಭೇದಗಳೂ ಶ್ರುತಿಯಿಂದ ಸಿದ್ಧಿಸುವುವು.

ಇಲ್ಲಿ 'ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ' (6.11) ಎಂಬ ಮಂತ್ರದಿಂದ ಬ್ರಹ್ಮವು ನಿರ್ಗುಣವೆಂದು ಸಿದ್ಧಿಸುತ್ತದೆಂದೂ 'ಮಾಯಾಂ ತು ಪ್ರಕೃತಿಂ ವಿದ್ಯಾತ್' (4.10), 'ಮಾಯಯಾ ಸನ್ನಿರುದ್ಧಃ' (4.9) ಎಂಬೆಡೆಗಳಲ್ಲಿ ಜಗತ್ತು ಮಿಥ್ಯೆಯೆಂದು ಹೇಳಲ್ಪಡುವುದೆಂಬ ವಾದಗಳು ಯುಕ್ತವಲ್ಲವೆಂಬುದು ಆಚಾರ್ಯರ ಭಾಷ್ಯದಲ್ಲಿ ವಿಶದವಾಗಿ ಸ್ಥಾಪಿಸಲ್ಪಟ್ಟಿದೆ. ಈ ಉಪನಿಷತ್ತಿನ 'ವೇದಾಹಮೇತಂ ಪುರುಷಂ ಮಹಾನ್ತಂ ಆದಿತ್ಯವರ್ಣಂ ತಮಸಃ ಪರಸ್ತಾತ್ । ತಮೇವ ವಿದಿತ್ವಾ ಅತಿ ಮೃತ್ಯುಮೇತಿ' (3.8) ಎಂಬ ಮಂತ್ರದಲ್ಲಿ ಆಯಾ ಗುಣಗಳಿಂದ ಕೂಡಿದ ಈಶ್ವರನ ಜ್ಞಾನ (ವೇದನ - ತಿಳಿಯುವಿಕೆ) ಮೋಕ್ಷೋಪಾಯವಾಗಿ ಪ್ರತಿಪಾದಿಸಲ್ಪಟ್ಟಿರುವುದರಿಂದ ಆ ಉಪಾಯ ಜ್ಞಾನವೂ, ಈಶ್ವರನೂ, ಅವನ ಗುಣಗಳೂ, ತಾತ್ತ್ವಿಕ(ಸತ್ಯ)ಗಳೆಂದು ಲಭಿಸುತ್ತದೆ. ಇಲ್ಲಿ 'ನಿರ್ಗುಣ'ವೆಂಬ ಪದದಿಂದ ಸರ್ವಜ್ಞತ್ವ, ಸರ್ವಶಕ್ತಿತ್ವ, ಸರ್ವಸುಹೃತ್ತ್ವ, ಕರ್ಮಫಲಪ್ರದತ್ವ, ಅಕರ್ಮವಶ್ಯತ್ವ, ನಿತ್ಯತ್ವ, ಚೇತನತ್ವ, ಅಪ್ರಾಕೃತದೇಶವರ್ತಿತ್ವ, ಸಂಸಾರಮೋಕ್ಷಸ್ಥಿತಿಬಂಧಹೇತುತ್ವ ಮುಂತಾದ ಅನೇಕ ಮಂಗಳ ಗುಣಗಳ ನಿಷೇಧ ಹೇಳಲ್ಪಡುವುದಿಲ್ಲ. ಇವೆಲ್ಲವೂ ಸ್ವಾಭಾವಿಕಗಳೆಂದೂ ಹೇಳಲಾಗಿದೆ. ಆದರಿಂದ ಹೇಯ(ತ್ಯಾಜ್ಯ - ಬಿಡತಕ್ಕ)ಗುಣಗಳಿಲ್ಲವೆಂದೇ ಗ್ರಹಿಸುವುದು ಯುಕ್ತ. ಗುಣಗಳಿಲ್ಲ ಎಂಬ ಸ್ವಾರಸ್ಯಾರ್ಥ-ವುಳ್ಳ 'ನಿರ್ಗುಣ'ಶಬ್ದಕ್ಕೆ ಹೇಯಗುಣಗಳಿಲ್ಲವೆಂದು ಅರ್ಥ ಹೇಳಿದರೆ ಶಬ್ದಶಕ್ತಿಯು ಸಂಕುಚಿತವಾಗುವುದೆಂದರೆ, ಬೇರೆ ಪ್ರಮಾಣಗಳಿಂದರಿಯಲಾಗದ ಗುಣಗಳನ್ನು ಶ್ರುತಿಯು ತಾನೇ ತಿಳಿಸಿ, ನಂತರ ಅವನ್ನು ನಿಷೇಧಿಸುತ್ತದೆಂಬುದು ಅಸಂಗತವಾಗುತ್ತದೆ. ಅವು ಸ್ವಾಭಾವಿಕಗಳೆಂದಿರುವುದೂ ಗಮನಾರ್ಹ. ಈ ರೀತಿ ಆಪಾತವಿರೋಧಪರಿಹಾರಕ್ಕಾಗಿ ಶಬ್ದಶಕ್ತಿ ಸಂಕೋಚ ಸಹ್ಯವಾಗುವುದು. ಅಲ್ಲದೆ, ವ್ಯವಹಾರದಲ್ಲೂ 'ನಗರದಲ್ಲಿ ಏನು ವಿಶೇಷ' ಎಂಬ ಪ್ರಶ್ನೆಗೆ ಉತ್ತರವಾಗಿ 'ಏನೂ ವಿಶೇಷವಿಲ್ಲ' ಎಂದಾಗ ಆಯಾ ಸಂದರ್ಭ/ಪ್ರಕರಣಾನುಸಾರವಾಗಿ 'ವಿಶೇಷ'ವೆಂಬುದು ವಿವಕ್ಷಿತಾರ್ಥವನ್ನು ತಿಳಿಸುವುದು ಸಾಮಾನ್ಯವೇ. ('ಸರ್ವತ್ವಂ ಆಧಿಕಾರಿಕಂ' ಇತ್ಯಾದಿಯಂತೆ).

ಇನ್ನೊಂದು ಅಂಶವೆಂದರೆ, ವೇದಾಂತಶಾಸ್ತ್ರದಲ್ಲಿ ಗುಣಶಬ್ದವು ಪ್ರಾಯಿಕವಾಗಿ ಸತ್ತ್ವಾದಿಗುಣಗಳಲ್ಲಿ ಪ್ರಸಿದ್ಧವಾಗಿ-ರುವುದರಿಂದ, ಈ ಉಪನಿಷತ್ತಿನಲ್ಲೂ 'ಗುಣಾನ್ವಯೋ ಯಃ' ಎಂಬಲ್ಲಿ, ಗುಣಶಬ್ದವು ಸತ್ತ್ವಾದಿಗುಣಗಳನ್ನು ತಿಳಿಸುವುದರಿಂದ, ಇದಕ್ಕನುಸಾರವಾಗಿ ನಿರ್ಗುಣ ಶಬ್ದವು ಸತ್ತ್ವ ಮುಂತಾದ ಗುಣಗಳಿಲ್ಲವೆಂದೂ ತಿಳಿಸಬಹುದಾಗಿ, ಸರ್ವಜ್ಞತ್ವ ಮುಂತಾದ ಗುಣಗಳ ನಿಷೇಧ ಇಲ್ಲಿ, ಸರ್ವಥಾ ಅಪ್ರಸ್ತುತ ಎಂದು ಸಿದ್ಧಿಸುತ್ತದೆ. ಗುಣಾನ್ವಯನೆಂದು ಜೀವನನ್ನು ಗುಣತ್ರಯಗಳಿಗೆ ವಶ್ಯನೆಂದೂ, ನಿರ್ಗುಣನೆಂದು ಈಶ್ವರನನ್ನು ಗುಣತ್ರಯಗಳಿಗೆ ಒಳಪಡದವನೆಂದೂ ಹೇಳಿದ್ದರಿಂದ ಅವರಿಬ್ಬರಿಗೆ ಮತ್ತೊಂದು ವೈಲಕ್ಷಣ್ಯ (ಭೇದ) ಹೇಳಿದಂತಾಯಿತು. ಹೀಗೆ ಚಿದಚಿದೀಶ್ವರ ತತ್ತ್ವತ್ರಯವೂ, ಅವುಗಳ ಪರಸ್ಪರ ಭೇದವೂ, ಬ್ರಹ್ಮದ ಅನಂತಕಲ್ಯಾಣಗುಣಾಕರತ್ವವೂ ವ್ಯಕ್ತವಾಗಿದೆ.

ಇದರಂತೆಯೇ 'ತಸ್ಯಾವಯವಭೂತೈಸ್ತು ವ್ಯಾಪ್ತಂ ಸರ್ವಮಿದಂ ಜಗತ್' (4.10) ಎಂಬ ಮಂತ್ರಖಂಡದಲ್ಲಿ ಚಿದಚಿತ್ತುಗಳಿಗೂ ಈಶ್ವರನಿಗೂ ಪ್ರಕಾರ (ವಿಶೇಷಣ) ಪ್ರಕಾರಿ (ವಿಶೇಷ್ಯ) ಭಾವವು ಹೇಳಲಾಗಿದೆ. ತಸ್ಯ - ಈಶ್ವರನ,

ಅವಯವ ಭೂತೈಃ - ಶರೀರ ರೂಪವಾದ ಚೇತನಾಚೇತನಗಳಿಂದ, ಇದಂ ಸರ್ವಂ ಜಗತ್ - ಚಿದಚಿದ್ರೂಪವಾದ ಪೂರ್ಣಪ್ರಪಂಚವೂ, ವ್ಯಾಪ್ತಂ - ವ್ಯಾಪ್ತವಾಗಿದೆಯೆಂದರ್ಥ. ಈಶ್ವರನ ಚಿದಚಿಚ್ಛರೀರತ್ವವು ಬೃಹದಾರಣ್ಯಕೋಪ-ನಿಷತ್ತಿನ ಅಂತರ್ಯಾಮಿಬ್ರಾಹ್ಮಣದಲ್ಲಿ ಸ್ಪಷ್ಟವಾಗಿ ಉಕ್ತವಾಗಿದೆ. ಅಲ್ಲಿ 'ಯಃ ಪೃಥಿವ್ಯಾಂ ತಿಷ್ಠನ್, ಪೃಥಿವ್ಯಾ ಅಂತರಃ, ಯಂ ಪೃಥಿವೀ ನ ವೇದ, ಯಸ್ಯ ಪೃಥಿವೀ ಶರೀರಂ, ಯಃ ಪೃಥಿವೀಂ ಅಂತರೋ ಯಮಯತಿ, ಸ ತ ಆತ್ಮಾ ಅನ್ತರ್ಯಾಮ್ಯಮೃತಃ' (ಬೃ.ಉ. 5.7.3) ಎಂದು ಪ್ರಾರಂಭಿಸಿ ಪೃಥಿವೀ ಮುಂತಾದ ತಮಸ್ ವರೆಗಿನ ಎಲ್ಲ ವಸ್ತುಗಳು ಮತ್ತು ಜೀವಾತ್ಮರ ಈಶ್ವರ (ಪರಮಾತ್ಮ) ಶರೀರತ್ವವು ಪ್ರತ್ಯೇಕವಾಗಿ ಅಭ್ಯಾಸ ಮಾಡಲ್ಪಟ್ಟಿದೆ. ಇಲ್ಲಿ ಶರೀರ-ವೆಂಬುದು ಒಬ್ಬ ಚೇತನನನ್ನು ಬಿಟ್ಟಿರಲಾರದ, ವಿಶೇಷಣಭೂತವಾದ ದ್ರವ್ಯವು. ವಿಶೇಷಣವೇ ಪ್ರಕಾರವೆನಿಸುವುದಾಗಿ 'ಅಶೇಷಚಿದಚಿತ್ಪ್ರಕಾರಂ ಬ್ರಹ್ಮೈಕಮೇವ ತತ್ತ್ವಂ' ಎಂದು ಆಚಾರ್ಯರ ವಿಶಿಷ್ಟಾದ್ವೈತ ತತ್ತ್ವಸಂಗ್ರಹ ಶ್ರೀಸೂಕ್ತಿ (ಎಲ್ಲ ಚಿದಚಿತ್ತುಗಳನ್ನೂ ಪ್ರಕಾರ(ವಿಶೇಷಣ)ವಾಗಿ ಉಳ್ಳ ಬ್ರಹ್ಮ ಒಂದೇ ತತ್ತ್ವ) ಸಮಂಜಸವಾಗಿದೆ.

ಮುಂದೆ ಈ ತತ್ತ್ವತ್ರಯದ ಸ್ವರೂಪ(ಲಕ್ಷಣ)ವನ್ನು ವಿವರಿಸುವ ಇತರ ಉಪನಿಷತ್ತುಗಳ ಉದಾಹರಣೆ - ಉಲ್ಲೇಖ-ದೊಡನೆ ತತ್ತ್ವ ವಿವೇಚನೆ ಶ್ರುತಿಪ್ರಮಾಣದಿಂದ ಸಿದ್ಧಿಸುವ ಬಗೆ ವಿವರಿಸಲಾಗುತ್ತದೆ.

<u>ಚಿತ್ತತ್ತ್ವನಾದ ಜೀವಾತ್ಮ ಸ್ವರೂಪವು</u> - ಚೇತನನಾಗಿದ್ದು ಅಣು(ಸೂಕ್ಷ್ಮ)ಸ್ವರೂಪವಾಗಿರುವಿಕೆ 'ವಾಲಾಗ್ರಶತಭಾಗಸ್ಯ ಶತಧಾ ಕಲ್ಪಿತಸ್ಯ ಚ । ಭಾಗೋ ಜೀವಸ್ಸ ವಿಜ್ಞೇಯಃ ಸ ಚಾನಂತ್ಯಾಯ ಕಲ್ಪತೇ' (ಶ್ವೇ.ಉ. 5.9) ಎಂಬಲ್ಲಿ ಮತ್ತು 'ಏಷೋಽಣುರಾತ್ಮಾ ಚೇತಸಾ ವೇದಿತವ್ಯಃ' (ಮು.ಉ. 3.1.9) ಎಂಬಲ್ಲಿಯೂ ವ್ಯಕ್ತವಾಗಿದೆ.

ಶೇಷತ್ವವು ಪರಮಾತ್ಮನಿಗೆ ಶರೀರವೆಂಬುದರಿಂದ ಸಿದ್ಧಿಸುತ್ತದೆ. 'ಯ ಆತ್ಮನಿ ತಿಷ್ಠನ್, ಆತ್ಮನೋಽನ್ತರಃ, ಯಮಾತ್ಮಾ ನ ವೇದ, ಯಸ್ಯಾತ್ಮಾ ಶರೀರಂ, ಯ ಆತ್ಮಾನಮಂತರೋ ಯಮಯತಿ ಸ ತ ಆತ್ಮಾ ಅಂತರ್ಯಾಮ್ಯಮೃತಃ' (ಬೃ.ಉ. 5.7.22) ಎಂಬುದರಿಂದ ಆಧೇಯತ್ವ, ವಿಧೇಯತ್ವ, ಶೇಷತ್ವಗಳು ಪರಮಾತ್ಮನಿರೂಪಿತವಾಗಿ ಹೇಳಿದ್ದಾಯಿತು.

ಜ್ಞಾತೃತ್ವವು 'ಜಾನಾತ್ಯೇವಾಯಂ ಪುರುಷಃ' (?), 'ವಿಜ್ಞಾನಘನ ಏವ' (ಮಾ.ಉ. 2.3), 'ಅತ್ರಾಯಂ ಪುರುಷಃ ಸ್ವಯಂ-ಜ್ಯೋತಿಃ ಭವತಿ' (ಬೃ.ಉ. 6.3.9), 'ನ ಹಿ ವಿಜ್ಞಾತುಃ ವಿಜ್ಞಾತೇಃ ವಿಪರಿಲೋಪೋ ವಿದ್ಯತೇ' (ಬೃ.ಉ. 6.3.30), 'ದ್ರಷ್ಟಾ ಶ್ರೋತಾ ಘ್ರಾತಾ ರಸಯಿತಾ' (ಪ್ರ.ಉ. 4.9), ಇತ್ಯಾದಿಯಾಗಿ ಹೇಳಲಾಗಿದೆ. (ಧರ್ಮಭೂತಜ್ಞಾನದ ಪ್ರಮಾಣಗಳನ್ನು ಹಿಂದೆಯೇ ಹೇಳಿದೆ).

'ಅಪಹತಪಾಪ್ಮಾ, ವಿಜರಃ, ವಿಮೃತ್ಯುಃ, ವಿಶೋಕಃ, ವಿಜಿಘತ್ಸಃ, ಅಪಿಪಾಸಃ, ಸತ್ಯಕಾಮಃ, ಸತ್ಯಸಂಕಲ್ಪಃ', (ಛಾ.ಉ. 8.7.1) ಎಂಬಲ್ಲಿ ಜೀವಾತ್ಮ ಸ್ವರೂಪದಲ್ಲಿ ಸ್ವಾಭಾವಿಕವಾದ ದೋಷಗಳಾವುದೂ ಇಲ್ಲವೆಂಬುದೂ ಮೋಕ್ಷದಲ್ಲಿ ಈ ಸ್ವರೂಪದ ಆವಿರ್ಭಾವ ಉಂಟಾಗುತ್ತದೆಂದೂ ತಿಳಿಯುತ್ತದೆ.

ಆತ್ಮನ (ಶರೀರಭಿನ್ನ ಸ್ವರೂಪಕ್ಕೆ) ನಿತ್ಯತ್ವವು 'ನ ಜಾಯತೇ ಮ್ರಿಯತೇ ವಾ ವಿಪಶ್ಚಿತ್ ನಾಯಂ ಕುತಶ್ಚಿನ್ನ ಬಭೂವ ಕಶ್ಚಿತ್ । ಅಜೋ ನಿತ್ಯಃ ಶಾಶ್ವತೋಽಯಂ ಪುರಾಣಃ ನ ಹನ್ಯತೇ ಹನ್ಯಮಾನೇ ಶರೀರೇ ॥' (ಕ.ಉ. 2.18) ಎಂಬಲ್ಲಿ ವಿಶದವಾಗಿ ಪ್ರತಿಪಾದಿತವಾಗಿದೆ. 'ಅವಿನಾಶೀ ವಾ ಅರೇಽಯಮಾತ್ಮಾ' (ಬೃ.ಉ. 6.5.14) ಎಂಬುದೂ ಈ ಅರ್ಥವನ್ನು ತಿಳಿಸುತ್ತದೆ.

ಜೀವನ ಕರ್ಮವಶ್ಯತ್ವವು ಕೆಳಗೆ ನಿರೂಪಿಸಿದೆ. 'ಅನೀಶಯಾ ಶೋಚತಿ ಮುಹ್ಯಮಾನಃ' (ಮು.ಉ. 3.12) ಎಂಬಲ್ಲಿಯೂ ಇದು ಸ್ಪಷ್ಟ. ಜೀವನ ಪರಮಾತ್ಮಾಯತ್ತವಾದ ಕರ್ತೃತ್ವವು 'ಕೇನೇಷಿತಂ ಪತತಿ ಪ್ರೇಷಿತಂ ಮನಃ ಕೇನ ಪ್ರಾಣಃ ಪ್ರಥಮಃ ಪ್ರೈತಿ ಯುಕ್ತಃ । ಕೇನೇಷಿತಾಂ ವಾಚಂ ಇಮಾಂ ವದಂತಿ ಚಕ್ಷುಃ ಶ್ರೋತ್ರಂ ಕ ಉ ದೇವೋ ಯುನಕ್ತಿ ॥' (ಕೇನ.ಉ. 1.1) ಎಂದೂ, ಗಾಯತ್ರೀ ಮಂತ್ರದಲ್ಲೂ ಹೇಳಿದೆ.

ಜೀವನ ಮೋಕ್ಷೋಪಾಯ ಅನುಷ್ಠಾನದಲ್ಲಿ ಅಧಿಕಾರವು ಉಪಾಸನವನ್ನು ವಿಧಿಸುವ ಅನೇಕ ವಾಕ್ಯಗಳಲ್ಲಿ ಹೇಳಲಾಗಿದ್ದು, ಅವು ಹಿತಸ್ವರೂಪ ವಿಚಾರ ಪ್ರಕರಣದಲ್ಲಿ ವಿವರಿಸಲಾಗುವುದು.

ಅಚಿತ್ತತ್ತ್ವವಾದ ಪ್ರಕೃತಿಯು 'ಅಜಾ'ಮಂತ್ರದಲ್ಲಿ ವಿವರಿಸಲ್ಪಟ್ಟಿದೆ. ಅಲ್ಲಿ, 'ಲೋಹಿತಶುಕ್ಲಕೃಷ್ಣಾಂ' ಎಂಬುದರಿಂದ 'ಶುಕ್ಲ' ವರ್ಣದಿಂದ ಸತ್ತ್ವವೂ, 'ಲೋಹಿತ' ವರ್ಣದಿಂದ ರಜಸ್ಸೂ ಮತ್ತು 'ಕೃಷ್ಣ' ವರ್ಣದಿಂದ ತಮಸ್ಸೂ ಹೇಳಿದಂ-ತಾಯಿತು. ಹೀಗೆ ಸತ್ತ್ವ, ರಜಸ್, ತಮಸ್ ಎಂಬ ತ್ರಿಗುಣಾತ್ಮಕವಾದ ಪ್ರಕೃತಿಯೂ ನಿತ್ಯವಾಗಿದ್ದು, 'ಯಃ ಪೃಥಿವ್ಯಾಂ ತಿಷ್ಠನ್....' (ಬೃ.ಉ. 5.7.3) ಮುಂತಾದೆಡೆ ಪರಮಾತ್ಮ ಶರೀರವಾಗಿದೆ ಎಂಬುದು ಸಿದ್ಧ. ಇದು 'ಭೋಗ್ಯ'ವೆಂದೂ,

'ಮಾಯೆ'ಯೆಂಬ ಬಂಧಕಸಾಮಗ್ರಿ ಎಂದೂ ಹಿಂದೆ ತಿಳಿಸಿದೆ. ಈ ಅಚಿತ್ತತ್ತ್ವವೇ (ಮೂಲ) ಪ್ರಕೃತಿ, ಕಾಲ, ಹಾಗೂ ಶುದ್ಧಸತ್ತ್ವವೆಂದು ಮೂರು ವಿಧವಾಗಿದೆ. ಧರ್ಮಭೂತಜ್ಞಾನವೂ ಅಚೇತನವಾದರೂ, ಜೀವಾತ್ಮನ ಮುಕ್ತಿದಶೆಯಲ್ಲೂ ಅವನಿಗೆ ಅಪೃಥಕ್ ಸಿದ್ಧವಾದ ದ್ರವ್ಯವಾದ್ದರಿಂದ ತ್ರಿವಿಧ ಅಚೇತನ ಎಂಬಲ್ಲಿ ಗಣಿಸಲ್ಪಟ್ಟಿಲ್ಲ.

ಹೀಗೆ ಈಶ್ವರನು '<u>ಸ್ವಾಧೀನ-ತ್ರಿವಿಧ-ಚೇತನಾಚೇತನ-ಸ್ವರೂಪ-ಸ್ಥಿತಿ-ಪ್ರವೃತ್ತಿ-ಭೇದ</u>' ನೆಂಬುದು, ಅಂದರೆ, ಬದ್ಧ, ಮುಕ್ತ, ನಿತ್ಯರೆಂಬ ಮೂರು ವಿಧ ಚೇತನರ ಹಾಗೂ ಪ್ರಕೃತಿ, ಕಾಲ, ಶುದ್ಧಸತ್ವವೆಂಬ ಮೂರು ವಿಧ ಅಚೇತನಗಳ ಸ್ವರೂಪ, ಸ್ಥಿತಿ ಮತ್ತು ಪ್ರವೃತ್ತಿಗಳನ್ನು ತನ್ನ ಅಧೀನದಲ್ಲಿ ಉಳ್ಳವನು, ಎಂಬ ಅರ್ಥ ವಿವರಿಸಲ್ಪಟ್ಟಿತು.

ಇನ್ನು ಈಶ್ವರ ತತ್ತ್ವದ ಸ್ವರೂಪಾದಿಗಳ ವಿಷಯದಲ್ಲಿ ನೂರಾರು ಉಪನಿಷದ್ವಾಕ್ಯಗಳು ಪ್ರಮಾಣಗಳಾಗಿವೆ. ಅದರಲ್ಲಿ ಕೆಲವನ್ನು ಇಲ್ಲಿ ಉದಾಹರಿಸಲಾಗುವುದು. 'ಏಷ ಸರ್ವಭೂತಾನ್ತರಾತ್ಮಾ ಅಪಹತಪಾಪ್ಮಾ ದಿವ್ಯೋ ದೇವ ಏಕೋ ನಾರಾಯಣಃ' (ಸು.ಉ. 7) ಎಂಬಲ್ಲಿ, ಶ್ರೀಮನ್ನಾರಾಯಣನೇ ಸರ್ವಾಂತರ್ಯಾಮಿ ಎಂದೂ, ಸರ್ವಶರೀರೀ ಮತ್ತು ಹೇಯ ಪ್ರತ್ಯನೀಕ, ಕಲ್ಯಾಣಗುಣೈಕತಾನನೆಂದೂ ಸ್ಪಷ್ಟವಾಗಿದೆ. ಈ ಪರತತ್ತ್ವನಿರ್ಣಯವನ್ನು ಭಾಷ್ಯಕಾರರು 'ವೇದಾರ್ಥ-ಸಂಗ್ರಹ'ದಲ್ಲಿ ವಿಶದವಾಗಿ ನಿರೂಪಿಸಿದ್ದಾರೆ. ಚಿದಚಿದಾತ್ಮಕವಾದ ಪ್ರಪಂಚಕ್ಕೆ ಸೃಷ್ಟಿ, ಸ್ಥಿತಿ, ಪ್ರಳಯ, ಸಂಸಾರವನ್ನು ನಿಲ್ಲಿಸಲು ಏಕಕಾರಣನಾದ, ಯಾವ ದೋಷಗಳ ಸಂಭವವೂ ಇಲ್ಲದ, ಎಲ್ಲೆಯಿಲ್ಲದ ಎಲ್ಲಾ ಮಂಗಳ ಗುಣಗಳಿಗೂ ಆಕರನಾದ, ತನ್ನನ್ನುಳಿದ ಮತ್ತೆಲ್ಲಕ್ಕಿಂತ ಅತ್ಯಂತ ವಿಲಕ್ಷಣನಾದ ಈ ಈಶ್ವರನನ್ನು ಶ್ರುತಿಗಳು 'ಸರ್ವಾತ್ಮಾ' (ತೈ.ಆ. 3.20), 'ಪರಂ ಬ್ರಹ್ಮ' (ತೈ.ಆ. 6.25), 'ಪರಂ ಜ್ಯೋತಿಃ' (ಛಾ.ಉ. 8.12.2), ಪರತತ್ತ್ವ, ಪರಮಾತ್ಮಾ (ತೈ.ಆ. 6.25) 'ಸತ್' (ಛಾ.ಉ. 6.2.1) ಮುಂತಾದ ಶಬ್ದಗಳಿಂದ ತಿಳಿಸುತ್ತವೆ. ಶ್ರೀಮದಷ್ಟಾಕ್ಷರವೂ ಶ್ರೀಮನ್ನಾರಾಯಣನ ಪರದೇವತಾತ್ವವನ್ನು ಸಾರುತ್ತದೆ. ಇದರ ವಿವರಣೆ ರಹಸ್ಯಗ್ರಂಥಗಳಲ್ಲಿ ದೊರೆಯುವುದು.

ಈತನ ಜಗತ್ಸೃಷ್ಟ್ಯಾದಿ ಕಾರಣತ್ವ 'ತದೈಕ್ಷತ ಬಹು ಸ್ಯಾಂ ಪ್ರಜಾಯೇಯ' ಎಂದು ಪ್ರಾರಂಭಿಸಿ 'ಸನ್ಮೂಲಾಃ ಸೋಮ್ಯೇಮಾಃ ಸರ್ವಾಃ ಪ್ರಜಾಃ ಸದಾಯತನಾಃ ಸತ್ಪ್ರತಿಷ್ಠಾಃ' (ಛಾ.ಉ. 6.2.3 - 6.8.6) ಎಂಬವರೆಗೆ ಹೇಳಿದೆ. ಇನ್ನೂ 'ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನ್ ಇತಿ ಶಾಂತ ಉಪಾಸೀತ' (ಛಾ.ಉ. 3.14.1), 'ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಂ' (ಛಾ.ಉ. 6.2.1), 'ಯತೋ ವಾ ಇಮಾನಿ ಭೂತಾನಿ ಜಾಯಂತೇ । ಯೇನ ಜಾತಾನಿ ಜೀವಂತಿ । ಯತ್ಪ್ರಯನ್ತ್ಯಭಿ ಸಂವಿಶನ್ತಿ । ತದ್ವಿಜಿಜ್ಞಾಸಸ್ವ । ತದ್ ಬ್ರಹ್ಮ' (ತೈ.ಆ. 5.33), 'ಏತಸ್ಮಾಜ್ಜಾಯತೇ ಪ್ರಾಣಃ ಮನಸ್ಸರ್ವೇಂದ್ರಿಯಾಣಿ ಚ । ಖಂ ವಾಯುಃ ಜ್ಯೋತಿರಾಪಃ ಪೃಥಿವೀ ವಿಶ್ವಸ್ಯ ಧಾರಿಣೀ ॥' (ಮು.ಉ. 2.13), 'ಯತಃ ಪ್ರಸೂತಾ ಜಗತಃ ಪ್ರಸೂತೀ ತೋಯೇನ ಜೀವಾನ್ ವ್ಯಸಸರ್ಜ ಭೂಮ್ಯಾಂ' (ತೈ.ಆ. 6.1), 'ಬ್ರಹ್ಮ ವನಂ ಬ್ರಹ್ಮ ಸ ವೃಕ್ಷ ಆಸೀತ್ । ಯತೋ ದ್ಯಾವಾಪೃಥಿವೀ ನಿಷ್ಟತಕ್ಷುಃ । ಮನೀಷಿಣೋ ಮನಸಾ ವಿಬ್ರವೀಮಿ ವಃ । ಬ್ರಹ್ಮಾಧ್ಯತಿಷ್ಠತ್ ಭುವನಾನಿ ಧಾರಯನ್' (ತೈ.ಬ್ರಾ. 2.8.76,77), 'ಸಪ್ತ ಪ್ರಾಣಾಃ ಪ್ರಭವಂತಿ ತಸ್ಮಾತ್ಸಪ್ತಾರ್ಚಿಷಃ ಸಮಿಧಃ ಸಪ್ತ ಜಿಹ್ವಾಃ । ಸಪ್ತ ಇಮೇ ಲೋಕಾ ಯೇಷು ಚರಂತಿ ಪ್ರಾಣಾ ಗುಹಾಶಯಾನ್ನಿಹಿತಾಃ ಸಪ್ತಸಪ್ತ' (ತೈ.ಆ. 6.20) ಮಂತಾದ ಅನೇಕ ಶ್ರುತಿಗಳು ಇದನ್ನು ಘೋಷಿಸುತ್ತವೆ.

ಪರಮಾತ್ಮನ ಸರ್ವಶರೀರಿತ್ವವು ಅಂತರ್ಯಾಮಿಬ್ರಾಹ್ಮಣ ಮುಂತಾದೆಡೆಗಳಲ್ಲಿ ಪ್ರಸಿದ್ಧ. ಹಾಗೆಯೇ 'ಸ ಆತ್ಮಾ । ಅಂಗಾನ್ಯನ್ಯಾ ದೇವತಾಃ' (ತೈ.ಆ. 5.9), 'ತಸ್ಯೈಷ ಏವ ಶಾರೀರ ಆತ್ಮಾ' (ತೈ.ಆ. 5.27) ಇತ್ಯಾದಿಯಲ್ಲಿ ಸಿದ್ಧವಾಗಿ ವೇದಾಂತಶಾಸ್ತ್ರ ಶಾರೀರಕ ಮೀಮಾಂಸೆಯೆನಿಸಿದೆ.

ಅವನ ಸ್ವರೂಪದ ಲಕ್ಷಣವು, 'ಸತ್ಯಂ ಜ್ಞಾನಮನಂತಂ ಬ್ರಹ್ಮ' (ತೈ.ಆ. 5.24), 'ಆನಂದೋ ಬ್ರಹ್ಮ' (ತೈ.ಆ. 5.38), 'ಅಪಹತಪಾಪ್ಮಾ' (ಛಾ.ಉ. 8.7.1), 'ಸರ್ವೇಭ್ಯಃ ಪಾಪ್ಮಭ್ಯಃ ಉದಿತಃ' (ಛಾ.ಉ. 1.6.7) ಎಂಬಲ್ಲಿ ಸ್ಪಷ್ಟವಾಗಿ ಸತ್ಯತ್ವ, ಜ್ಞಾನತ್ವ, ಅನಂತತ್ವ, ಅಮಲತ್ವ ಹಾಗೂ ಆನಂದತ್ವವೆಂದು ತಿಳಿಯುತ್ತದೆ. ಈ ಪರಮಾತ್ಮನು ಸದಾ ಲಕ್ಷ್ಮೀವಿಶಿಷ್ಟನಾಗಿದ್ದು, ಈ ಲಕ್ಷ್ಮೀಪತಿತ್ವವೂ ಪರಮಾತ್ಮ ಲಕ್ಷಣವೆಂಬುದೂ, ಲಕ್ಷ್ಮಿಯ ವೈಭವವೂ, 'ಆನೀದವಾತಗ್ಂ ಸ್ವಧಯಾ ತದೇಕಂ' (ತೈ.ಬ್ರಾ. 2.8.74) ಎಂದು ಸೃಷ್ಟಿಗೆ ಮುಂಚೆಯೂ, 'ಹ್ರೀಶ್ಚ ತೇ ಲಕ್ಷ್ಮೀಶ್ಚ ಪತ್ನ್ಯೌ' (ತೈ.ಆ. 3.40), 'ಅಸ್ಯೇಶಾನಾ ಜಗತೋ ವಿಷ್ಣುಪತ್ನೀ' (ತೈ.ಸಂ. 4.4.37), 'ಈಶಾನಾ ದೇವೀ ಭುವನಸ್ಯಾಧಿಪತ್ನೀ' (ತೈ.ಕಾ. 3.12), 'ಬೃಹತ್ತೇ ವಿಷ್ಣೋ ಸುಮತಿಂ ಭಜಾಮಹೇ', 'ಸುಮಜ್ಜಾನಯೇ ವಿಷ್ಣವೇ ದದಾಶತಿ' (ತೈ.ಬ್ರಾ. 2.4.29), 'ಅದಿತ್ಯೈ ವಿಷ್ಣುಪತ್ನ್ಯೈ' (ತೈ.ಸಂ. 7.5.38) ಇತ್ಯಾದಿಯಲ್ಲಿ 'ಅದಿತಿ' ಎಂದು ಹೇಳಲ್ಪಟ್ಟ ಲಕ್ಷ್ಮಿಯನ್ನು 'ಅದಿತಿ-ಸೂಕ್ತ'ದಲ್ಲಿ (ತೈ.ಸಂ. 1.5.51) ಮೋಕ್ಷೋಪಾಯವಾಗಿ ಪಠಿಸಿದೆ. ಶ್ರೀಸೂಕ್ತದಲ್ಲಿ ಲಕ್ಷ್ಮೀವೈಭವ ವಿಸ್ತಾರವಾಗಿ ಹೇಳಿದೆ. 'ತಾಂ ಪದ್ಮನೇಮೀಂ ಶರಣಮಹಂ ಪ್ರಪದ್ಯೇ' (ಶ್ರೀಸೂಕ್ತ 5) ಎಂಬಲ್ಲಿ ಶರಣ್ಯತ್ವವೂ ವಿದಿತ. ಮೋಕ್ಷಪ್ರದತ್ವವೂ

ಕಂಠೋಕ್ತ.

ಪರಮಾತ್ಮನು ಪರ, ವ್ಯೂಹ, ವಿಭವ, ಅರ್ಚಾ, ಅಂತರ್ಯಾಮಿ ದಶೆಗಳಲ್ಲೆಲ್ಲಾ ಲಕ್ಷ್ಮೀವಿಶಿಷ್ಟನಾಗಿರುವುದೂ ಶ್ರುತಿಸಿದ್ಧವಾಗಿದೆ. 'ಇಂಧೋ ಹ ವೈ ನಾಮೈಷ ಯೋऽಯಂ ದಕ್ಷಿಣೇऽಕ್ಷನ್ ಪುರುಷಸ್ತಂ ವಾ ಏತಮಿಂಧಂ ಸನ್ತಂ ಇಂದ್ರ ಇತ್ಯಾಚಕ್ಷತೇ....', 'ಅಥೈತದ್ವಾಮೇऽಕ್ಷಣಿ ಪುರುಷರೂಪಮೇಷಾಸ್ಯ ಪತ್ನೀ ವಿರಾಟ್, ತಯೋರೇಷ ಸಂಸ್ತಾವಃ ಯ ಏಷೋऽನ್ತರ್ಹೃದಯ ಆಕಾಶಃ, ಅಥ ಏನಯೋರೇತದನ್ನಂ ಯ ಏಷೋऽನ್ತರ್ಹೃದಯೇ ಲೋಹಿತಪಿಂಡಃ, ಅಥೈನಯೋರೇತತ್ಪ್ರಾವರಣಂ ಯದೇತದಂತರ್ಹೃದಯೇ ಜಾಲಕಮಿವ, ಅಥೈನಯೋರೇಷಾ ಸೃತಿಃ ಸೈಷಾ ಸಂಚರಣೀ ಯೈಷಾ ಹೃದಯಾದೂರ್ಧ್ವಾ ನಾಡ್ಯುಚ್ಚರತಿ' (ಬೃ.ಉ. 6.2.2,3) ಇತ್ಯಾದಿಯಲ್ಲಿ ಪರಮಾತ್ಮ ಲಕ್ಷ್ಮೀವಿಶಿಷ್ಟನಾಗಿ ಅನ್ತರ್ಯಾಮಿಯಾಗುವುದು, ಮುಂತಾದ ಅಂಶಗಳು ವ್ಯಕ್ತ. ಶ್ರದ್ಧಾಸೂಕ್ತದಲ್ಲೂ (ತೈ.ಬ್ರಾ. 2.8.64) ಮತ್ತು (ತೈ.ಕಾ. 3.11.12) ಲಕ್ಷ್ಮೀವೈಭವ ಪ್ರತಿಪಾದಿತವಾಗಿದೆ. ಹೀಗೆ ಶ್ರಿಯಃಪತಿತ್ವ ಲಕ್ಷಣವೂ ಶ್ರುತಿಸಿದ್ಧವೆಂದು ಏರ್ಪಡುತ್ತೆ.

ಈಶ್ವರತ್ವ, ಸ್ವಾಮಿತ್ವ ಮುಂತಾದ ಅಂಶಗಳು 'ಪತಿಂ ವಿಶ್ವಸ್ಯಾತ್ಮೇಶ್ವರಂ' (ತೈ.ಆ. 6.25), 'ಅಂತಃಪ್ರವಿಷ್ಟಃ ಶಾಸ್ತಾ ಜನಾನಾಂ' (ತೈ.ಆ. 3.20), 'ನ ತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ' (ಶ್ವೇ.ಉ. 6.8), 'ಸರ್ವಸ್ಯ ವಶೀ ಸರ್ವಸ್ಯೇಶಾನಃ' (ಬೃ.ಉ. 6.4.22), 'ತಮೀಶ್ವರಾಣಾಂ ಪರಮಂ ಮಹೇಶ್ವರಂ..' (ಶ್ವೇ.ಉ. 6.13), 'ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ಸೂರ್ಯಾಚಂದ್ರಮಸೌ ವಿಧೃತೌ ತಿಷ್ಠತಃ' (ಬೃ.ಉ. 5.8.9), 'ಭೀಷಾಸ್ಮಾದ್ವಾತಃ ಪವತೇ । ಭೀಷೋದೇತಿ ಸೂರ್ಯಃ । ಭೀಷಾಸ್ಮಾದಗ್ನಿಶ್ಚೇಂದ್ರಶ್ಚ । ಮೃತ್ಯುರ್ಧಾವತಿ ಪಂಚಮ ಇತಿ' (ತೈ.ಆ. 5.31), 'ಅಥ ಸೋऽಭಯಂ ಗತೋ ಭವತಿ । ಯದಾ ಹ್ಯೇವೈಷ ಏತಸ್ಮಿನ್ನು ದರಮಂತರಂ ಕುರುತೇ । ಅಥ ತಸ್ಯ ಭಯಂ ಭವತಿ' (ತೈ.ಆ. 5.30), 'ಯಸ್ಸರ್ವಜ್ಞಃ ಸರ್ವವಿತ್' (ಮು.ಉ.1.1.9), 'ಸರ್ವಕರ್ಮಾ ಸರ್ವಕಾಮಃ ಸರ್ವಗಂಧಃ ಸರ್ವರಸಃ' (ಛಾ.ಉ. 3.14.2), 'ಯಚ್ಚ ಕಿಂಚಿತ್ ಜಗತ್ಯಸ್ಮಿನ್ ದೃಶ್ಯತೇ ಶ್ರೂಯತೇऽಪಿ ವಾ । ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ' (ತೈ.ಆ. 6.25), 'ಬ್ರಹ್ಮಣಾ ವಿಪಶ್ಚಿತಾ' (ತೈ.ಆ. 5.24) ಇತ್ಯಾದಿಗಳಲ್ಲಿ ಸಿದ್ಧ.

ಸೃಷ್ಟಿಯಲ್ಲಿ ಸೂಕ್ಷ್ಮಚೇತನಾಚೇತನವಿಶಿಷ್ಟಬ್ರಹ್ಮ ಕಾರಣ ಮತ್ತು ಸ್ಥೂಲಚೇತನಾಚೇತನವಿಶಿಷ್ಟಬ್ರಹ್ಮ ಕಾರ್ಯವೆಂಬುದು ಬಹುಭವನಸಂಕಲ್ಪಶ್ರುತಿಯಿಂದ ತಿಳಿಯುತ್ತೆ. 'ಸೋऽಕಾಮಯತ । ಬಹು ಸ್ಯಾಂ ಪ್ರಜಾಯೇಯೇತಿ । ಸ ತಪೋऽತಪ್ಯತ । ಸ ತಪಸ್ತಪ್ತ್ವಾ । ಇದಗ್ಂ ಸರ್ವಮಸೃಜತ । ಯದಿದಂ ಕಿಂಚ । ತತ್ಸೃಷ್ಟ್ವಾ । ತದೇವಾನು ಪ್ರಾವಿಶತ್ । ತದನುಪ್ರವಿಶ್ಯ । ಸಚ್ಚ ತ್ಯಚ್ಚಾಭವತ್' । (ತೈ.ಆ. 5.29) ಮುಂತಾದೆಡೆ ಇದು ಸ್ಪಷ್ಟ. ಇದರಿಂದೇರ್ಪಡುವ ಸರ್ವಶಬ್ದವಾಚ್ಯತ್ವವೂ, ನಾಮರೂಪ ವ್ಯಾಕರ್ತೃತ್ವವೂ, 'ಅನೇನ ಜೀವೇನಾತ್ಮನಾ ಅನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ' (ಛಾ.ಉ. 6.3.2), 'ಸರ್ವಾಣಿ ರೂಪಾಣಿ ವಿಚಿತ್ಯ ಧೀರಃ । ನಾಮಾನಿ ಕೃತ್ವಾऽಭಿವದನ್ ಯದಾಸ್ತೇ' (ತೈ.ಆ. 3.38), 'ಸರ್ವೇ ವೇದಾ ಯತ್ಪದಮಾಮನಂತಿ ತಪಾಂಸಿ ಸರ್ವಾಣಿ ಚ ಯದ್ವದಂತಿ' (ಕ.ಉ. 2.15) ಎಂಬಲ್ಲಿ ತಿಳಿಯುತ್ತದೆ. ಈತನ ಸ್ವರೂಪ, ರೂಪಾದಿಗಳು 'ಯತ್ತೇ ರೂಪಂ ಕಲ್ಯಾಣತಮಂ ತತ್ತೇ ಪಶ್ಯಾಮಿ' (ಈ.ಉ. 16), 'ಆದಿತ್ಯವರ್ಣಂ ತಮಸಸ್ತು ಪಾರೇ' (ತೈ.ಆ. 3.38), 'ಯದಾ ಪಶ್ಯಃ ಪಶ್ಯತೇ ರುಕ್ಮವರ್ಣಂ' (ಮು.ಉ. 3.1.3), 'ಹಿರಣ್ಮಯಃ ಪುರುಷಃ ದೃಶ್ಯತೇ, ಹಿರಣ್ಯಶ್ಮಶ್ರುಃ ಹಿರಣ್ಯಕೇಶಃ ಆಪ್ರಣಖಾತ್ ಸರ್ವ ಏವ ಸುವರ್ಣಃ, ತಸ್ಯ ಯಥಾ ಕಪ್ಯಾಸಂ ಪುಂಡರೀಕಮೇವಮಕ್ಷಿಣೀ' (ಛಾ.ಉ. 1.6.6,7), 'ಸಹಸ್ರಶೀರ್ಷಾ ಪುರುಷಃ । ಸಹಸ್ರಾಕ್ಷಃ ಸಹಸ್ರಪಾತ್' (ತೈ.ಆ. 3.32), 'ವಿದ್ಯುತಃ ಪುರುಷಾದಧಿ' (ತೈ.ಆ. 6.1), 'ಮಹಾರಜನಂ ವಾಸಃ' (ಬೃ.ಉ. 4.3.6) ಇತ್ಯಾದಿ ಅನೇಕ ಕಡೆಗಳಲ್ಲಿ ವಿಶದ.

ಇವನ ಅಪ್ರಾಕೃತ ದೇಶದಲ್ಲಿರುವಿಕೆ ಹಿಂದೆ ತಿಳಿಸಿದೆ. 'ಯೋ ಅಸ್ಯಾಧ್ಯಕ್ಷಃ ಪರಮೇ ವ್ಯೋಮನ್' (ತೈ.ಬ್ರಾ. 2.8.76), 'ಯೋ ವೈ ತಾಂ ಬ್ರಹ್ಮಣೋ ವೇದ । ಅಮೃತೇನಾವೃತಾಮ್ ಪುರೀಂ', 'ದೇವಾನಾಂ ಪೂರಯೋಧ್ಯಾ' (ತೈ.ಆ. 1.115) ಎಂಬುದೆಲ್ಲ ಇಲ್ಲಿ ವಿವಕ್ಷಿತ. ಅಲಿಯ ನಿತ್ಯಸೂರಿಗಳಿಂದಲೂ, ಮುಕ್ತಾತ್ಮರಿಂದಲೂ ಸ್ತುತನಾಗಿ ಬ್ರಹ್ಮಾನುಭವದಲ್ಲಿರುವಿಕೆಯೂ, 'ತದ್ವಿಪ್ರಾಸೋ ವಿಪನ್ಯವೋ ಜಾಗೃವಾಂಸಃ ಸಮಿಂಧತೇ । ವಿಷ್ಣೋರ್ಯತ್ಪರಮಂ ಪದಂ' (ಋ.ಸಂ 1.22.21), 'ಯತ್ರರ್ಷಯಃ ಪ್ರಥಮಜಾ ಯೇ ಪುರಾಣಾಃ' (ತೈ.ಬ್ರಾ. 3.7.63) ಮುಂತಾದ ವಾಕ್ಯಗಳಿಂದ ತಿಳಿಯುತ್ತದೆ. ಹೀಗೆ ಅಚಿಂತ್ಯಮಹಿಮವಾದ ಈಶ್ವರತತ್ತ್ವವನ್ನು ಪ್ರಸ್ತಾಪಿಸಿ ತತ್ತ್ವವಿಚಾರ ಪೂರ್ಣವಾಯಿತು.

ಈಗ ಹಿತಸ್ವರೂಪ ವಿಚಾರದಲ್ಲಿ ಶ್ರುತಿಗಳ ಆಶಯವನ್ನು ಪರೀಕ್ಷಿಸೋಣ.

ಸ್ವಾತ್ಮನ ಯಾಥಾತ್ಮ್ಯ ಜ್ಞಾನದೊಡನೆ ಪರಮಾತ್ಮನನ್ನು ಭಕ್ತಿಯಿಂದ ಧ್ಯಾನಿಸುವುದೆಂಬ ಉಪಾಸನವೇ ಉಪಾಯವೆಂದೂ,

ಅದಕ್ಕೆ ವರ್ಣಾಶ್ರಮ ಧರ್ಮಾನುಷ್ಠಾನ ಅಂಗವಾಗಿ ಅವಶ್ಯಕವೆಂದೂ ಕೆಳಗೆ ಹೇಳಲಾಯಿತು. ಉಪಾಸನೆಗೆ ಪರ್ಯಾಯವಾಗಿ ಅಶಕ್ತರಿಗೆ ನ್ಯಾಸವೂ ವಿಹಿತವೆಂದಿದೆ. ಈ ಅಂಶದಲ್ಲಿ ಪ್ರಮಾಣಗಳು 'ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾ ಅಮೃತಮಶ್ನುತೇ' (ಈ.ಉ. 11), 'ತಮೇವಂ ವಿದ್ವಾನಮೃತ ಇಹ ಭವತಿ । ನಾನ್ಯಃ ಪಂಥಾ ಅಯನಾಯ ವಿದ್ಯತೇ' (ತೈ.ಆ. 3.38), 'ಯ ಏನಂ ವಿದುರಮೃತಾಸ್ತೇ ಭವಂತಿ' (ತೈ.ಆ. 6.3), 'ಬ್ರಹ್ಮವಿದಾಪ್ನೋತಿ ಪರಂ' (ತೈ.ಆ. 5.24), 'ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ' (ಮು.ಉ. 2.2.9), 'ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ' (ಬೃ.ಉ. 6.5.6), 'ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ । ತಗ್ಂ ಹ ದೇವಮಾತ್ಮಬುದ್ಧಿಪ್ರಸಾದಂ ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ ॥' (ಶ್ವೇ.ಉ. 6.35), ದ್ವಯ ಮಂತ್ರ, 'ಬ್ರಹ್ಮಣೇ ತ್ವಾ ಮಹಸ ಓಮಿತ್ಯಾತ್ಮಾನಂ ಯುಂಜೀತ' (ತೈ.ಆ. 6.78) 'ಯ ಆತ್ಮದಾ ಬಲದಾ ಯಸ್ಯ ವಿಶ್ವ ಉಪಾಸತೇ ಪ್ರಶಿಷಂ ಯಸ್ಯ ದೇವಾಃ । ಯಸ್ಯ ಛಾಯಾಽಮೃತಂ ಯಸ್ಯ ಮೃತ್ಯುಃ ಕಸ್ಮೈ ದೇವಾಯ ಹವಿಷಾ ವಿಧೇಮ' (ತೈ.ಸಂ. 4.1.32), 'ತಾಂ ಪದ್ಮನೇಮೀಂ ಶರಣಮಹಂ ಪ್ರಪದ್ಯೇ' (ಶ್ರೀಸೂಕ್ತ 5) 'ತಾಗ್ ಶ್ರದ್ಧಾಗ್ಂ ಹವಿಷಾ ಯಜಾಮಹೇ । ಸಾ ನೋ ಲೋಕಮಮೃತಂ ದಧಾತು' (ತೈ.ಕಾ. 3.12) ಮುಂತಾದವು. ಇಲ್ಲಿಯೂ ಸಹ ಈ ಭಕ್ತಿ, ಪ್ರಪತ್ತಿಗಳು ಸಾಧ್ಯೋಪಾಯಗಳಾಗಿದ್ದು, ಪರಮಾತ್ಮನೇ ಸಿದ್ಧೋಪಾಯನಾಗಿದಾನೆಂಬುದೂ, 'ನಾಯಮಾತ್ಮಾ ಪ್ರವಚನೇನ ಲಭ್ಯಃ ನ ಮೇಧಯಾ ನ ಬಹುನಾ ಶ್ರುತೇನ । ಯಮೇವೈಷ ವೃಣುತೇ ತೇನ ಲಭ್ಯಃ ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಂ ॥' (ಮು.ಉ. 3.2.3), 'ತಮಕ್ರತುಂ ಪಶ್ಯತಿ ವೀತಶೋಕೋ ಧಾತುಃ ಪ್ರಸಾದಾನ್ಮಹಿಮಾನಮೀಶಂ' (ತೈ.ಆ. 6.20), (ಶ್ವೇ.ಉ. 3.20), 'ಪ್ರಜ್ಞಾ ಚ ತಸ್ಮಾತ್ ಪ್ರಸೃತಾ ಪುರಾಣೀ' (ಶ್ವೇ.ಉ. 4.18), 'ಧಿಯೋ ಯೋ ನಃ ಪ್ರಚೋದಯಾತ್' (ತೈ.ಸಂ. 5.30), 'ಏಷ ಹ್ಯೇವಾನಂದಯಾತಿ' (ತೈ.ಆ. 5.30), 'ಕೋ ಹ್ಯೇವಾನ್ಯಾತ್ಕಃ ಪ್ರಾಣ್ಯಾತ್' (ತೈ.ಆ. 5.30) ಇತ್ಯಾದಿಗಳಲ್ಲಿ ಸಿದ್ಧ.

ಇನ್ನು ಪುರುಷಾರ್ಥ ವಿಷಯವಾಗಿ ಭಗವತ್ಪ್ರಾಪ್ತಿಯು ಅಪ್ರಾಕೃತದೇಶದಲ್ಲಿ ಏರ್ಪಟ್ಟು ಅಲ್ಲಿ ಭಗವಂತನ ಸ್ವರೂಪ ಗುಣಾದಿಗಳ ಆನಂತ್ಯವನ್ನು ಪ್ರತ್ಯಕ್ಷವಾಗಿ ಕಂಡು ಅನುಭವಿಸಿ ಆ ಆನಂದದ ಪರೀವಾಹವಾದ ಸ್ವರೂಪೋಚಿತ ಸರ್ವವಿಧ ಕೈಂಕರ್ಯಗಳನ್ನೂ ಮಾಡುವ ಪರಮ ಪ್ರಯೋಜನವು 'ಅಮೃತ'ವೆಂದು ಮೋಕ್ಷವನ್ನು ಹೇಳಿರುವುದರಿಂದಲೂ 'ಭಿದ್ಯತೇ ಹೃದಯಗ್ರಂಥಿಃ ಛಿದ್ಯಂತೇ ಸರ್ವಸಂಶಯಾಃ । ಕ್ಷೀಯಂತೇ ಚಾಸ್ಯ ಕರ್ಮಾಣಿ' (ಮು.ಉ. 2.2.8), 'ಇಮಂ ಮಾನವಂ ಆವರ್ತಂ ನಾವರ್ತಂತೇ' (ಛಾ.ಉ. 4.15.6), 'ತದಾ ವಿದ್ವಾನ್ ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಂ ಉಪೈತಿ' (ಮು.ಉ. 3.1.3), 'ಜ್ಞಾತ್ವಾ ದೇವಂ ಮುಚ್ಯತೇ ಸರ್ವಪಾಶೈಃ' (ಶ್ವೇ.ಉ. 1.8, 4.16), 'ರಸಗ್ಂ ಹ್ಯೇವಾಯಂ ಲಬ್ಧ್ವಾನಂದೀ ಭವತಿ' (ತೈ.ಆ. 5.30), 'ಸ ತತ್ರ ಪರ್ಯೇತಿ ಜಕ್ಷತ್ ಕ್ರೀಡನ್ ರಮಮಾಣಃ' (ಛಾ.ಉ. 8.12.3), 'ಇಮಾನ್ ಲೋಕಾನ್ ಕಾಮಾನ್ನೀ ಕಾಮರೂಪ್ಯನುಸಂಚರನ್ । ಏತತ್ಸಾಮ ಗಾಯನ್ನಾಸ್ತೇ' (ತೈ.ಆ. 5.42), 'ಪರಂ ಜ್ಯೋತಿರುಪಸಂಪದ್ಯ ಸ್ವೇನ ರೂಪೇಣ ಅಭಿನಿಷ್ಪದ್ಯತೇ' (ಛಾ.ಉ. 8.12.2), 'ಸೋಽಶ್ನುತೇ ಸರ್ವಾನ್ ಕಾಮಾನ್ ಸಹ । ಬ್ರಹ್ಮಣಾ ವಿಪಶ್ಚಿತಾ' (ತೈ.ಆ. 5.24), 'ಯ ಇಹಾತ್ಮಾನಂ ಅನುವಿದ್ಯ ವ್ರಜನ್ತಿ ಏತಾಗ್ಶ್ಚ ಸತ್ಯಾನ್ ಕಾಮಾನ್ ತೇಷಾಂ ಸರ್ವೇಷು ಲೋಕೇಷು ಕಾಮಚಾರೋ ಭವತಿ' (ಛಾ.ಉ. 8.1.6), 'ಸಂಧಾಂಚ ಯಾಗ್ಂ ಸಂದಧೇ ಬ್ರಹ್ಮಣ್ಯೈಷಃ । ರಮತೇ ತಸ್ಮಿನ್ನುತ ಜೀರ್ಣೇ ಶಯಾನೇ । ನೈನಂ ಜಹಾತ್ಯಹಸ್ಸು ಪೂರ್ವ್ಯೇಷು' (ತೈ.ಆ. 3.42), 'ತಥಾ ವಿದ್ವಾನ್ ನಾಮರೂಪಾದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿ ದಿವ್ಯಂ' (ಮು.ಉ. 3.2.8), 'ಪರಾತ್ಪರಂ ಪುರಿಶಯಂ ಪುರುಷಮೀಕ್ಷತೇ' (ಪ್ರ.ಉ. 5.5), 'ತಸ್ಮಿನ್ ಸುಪರ್ಣೋ ಮಧುಕೃತ್ಕುಲಾಯೀ ಭಜನ್ನಾಸ್ತೇ ಮಧು ದೇವತಾಭ್ಯಃ । ತಸ್ಯಾಸತೇ ಹರಯಸ್ಸಪ್ತ ತೀರೇ ಸ್ವಧಾಂ ದುಹಾನಾ ಅಮೃತಸ್ಯ ಧಾರಾಂ ॥' (ತೈ.ಸಂ. 4.2.41), 'ತದ್ವಿಪ್ರಾಸೋ ವಿಪನ್ಯವೋ ಜಾಗೃವಾಂಸಃ ಸಮಿಂಧತೇ' (ಋ.ಸಂ. 1.22.21) ಮುಂತಾದ ಕಡೆಗಳಲ್ಲಿ ಅನಂತವಾದ, ಅದ್ಭುತ ಬ್ರಹ್ಮಾನುಭವರೂಪವಾಗಿಯೂ ತತ್ಪ್ರಕಾರಭೂತ ಕೈಂಕರ್ಯ-ಪರ್ಯವಸಾಯಯಾಗಿಯೂ ಇರುವುದು ತಿಳಿಯುತ್ತದೆ.

ಉಪಾಸನಾದಿ ವಿಷಯ ವಾಕ್ಯಗಳಲ್ಲಿ, 'ವೇದ', 'ವಿದ್ಯಾತ್', 'ಧ್ಯಾಯೀತ', 'ಉಪಾಸೀತ', 'ಯುಂಜೀತ', 'ದ್ರಷ್ಟವ್ಯಃ' ಮುಂತಾದ ವಿಧಿಪ್ರಯೋಗವಿರುವುದರಿಂದಲೂ ಜೀವಾತ್ಮನ ಪರಮಾತ್ಮಾಧೀನವಾದ ಕರ್ತೃತ್ವವು ಸಿದ್ಧಾಂತಿತವಾಗಿರುವುದರಿಂದಲೂ, ಉಪಾಯಾನುಷ್ಠಾನಾಧಿಕಾರ ಸುವ್ಯಕ್ತವಾಗಿದೆ. 'ತಸ್ಮಾನ್ಮಧ್ಯತೋ ಜ್ಯೋತಿರುಪಾಸ್ಮಹೇ' (ತೈ.ಸಂ. 5.2.48) ಮುಂತಾದ ಪ್ರಯೋಗಗಳೂ ಇವೆ.

ಇಲ್ಲಿ ಉಪಾಯವಾದ ಜ್ಞಾನರೂಪವಾದ ಭಕ್ತಿ ಅಥವಾ ಪ್ರಪತ್ತಿಗೆ ಕರ್ಮಾನುಷ್ಠಾನ (ತತ್ತದ್ವರ್ಣಾಶ್ರಮ ಧರ್ಮ - ವಿಧಿ, ನಿಷೇಧ ರೂಪವಾದುದು)ವು ಅಂಗವಾಗಿ ಅವಶ್ಯಾಪೇಕ್ಷಿತವೆಂಬ ವಿಷಯವು 'ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್ ಶತಂ ಸಮಾಃ । ಏವಂ ತ್ವಯಿ ನಾನ್ಯಥೇತೋಽಸ್ತಿ ನ ಕರ್ಮ ಲಿಪ್ಯತೇ ನರೇ' (ಈ.ಉ. 2), 'ತಮೇತಂ ವೇದಾನುವಚನೇನ

ಬ್ರಾಹ್ಮಣಾ ವಿವಿದಿಷನ್ತಿ ಯಜ್ಞೇನ ದಾನೇನ ತಪಸಾಽನಾಶಕೇನ' (ಬೃ.ಉ. 6.4.22), 'ಯೇ ಚೇಮೇಽರಣ್ಯೇ ಶ್ರದ್ಧಾ ತಪ ಇತ್ಯುಪಾಸತೇ ತೇಽರ್ಚಿಷಮಭಿಸಂಭವಂತಿ' (ಛಾ.ಉ. 5.10.1), 'ಸ್ವಾಧ್ಯಾಯಪ್ರವಚನೇ ಏವೇತಿ ನಾಕೋ ಮೌದ್ಗಲ್ಯಃ । ತದ್ಧಿ ತಪಸ್ತದ್ಧಿ ತಪಃ' (ತೈ.ಆ. 1.9), 'ಸ್ವಾಧ್ಯಾಯಪ್ರವಚನಾಭ್ಯಾಂ ನ ಪ್ರಮದಿತವ್ಯಂ । ದೇವಪಿತೃಕಾರ್ಯಾಭ್ಯಾಂ ನ ಪ್ರಮದಿತವ್ಯಂ' (ತೈ.ಆ. 5.18,19), 'ಆತ್ಮಕ್ರೀಡ ಆತ್ಮರತಿಃ ಕ್ರಿಯಾವಾನೇಷ ಬ್ರಹ್ಮವಿದಾಂ ವರಿಷ್ಠಃ' (ಮು.ಉ. 3.1.4) ಮುಂತಾದ ಅನೇಕ ಪ್ರಮಾಣಗಳಿಂದ ಅರಿಯಲಾಗುವುದು.

ಇಂತಹ ತತ್ತ್ವವಿಚಾರದಲ್ಲಿ ಶ್ರುತಿಗಳ ನಂತರ ಇತರ ಪ್ರಮಾಣಗಳನ್ನು ವಿಮರ್ಶಿಸೋಣ.

ಅದರಲ್ಲಿ - ಆಗಮಗಳು ಎರಡು. ಪಾಂಚರಾತ್ರ ಮತ್ತು ವೈಖಾನಸವೆಂದು. ಶ್ರೀಪಾಂಚರಾತ್ರದಲ್ಲಿ ಜಿತಂತಾಸ್ತೋತ್ರವು ನಿತ್ಯಾನುಸಂಧೇಯವಾಗಿದೆ. ಅದರಲ್ಲಿ 'ಏಕಸ್ತ್ವಮಸಿ ಲೋಕಸ್ಯ ಸ್ರಷ್ಟಾ ಸಂಹಾರಕಃ ತಥಾ । ಅಧ್ಯಕ್ಷಶ್ಚಾನುಮಂತಾ ಚ ಗುಣಮಾಯಾಸಮಾವೃತಃ ॥' (1.3), 'ಪ್ರಧಾನಪುರುಷೇಶಾಯ ನಮಸ್ತೇ ಪುರುಷೋತ್ತಮ' (4.3) ಎಂದು ಜಗತ್ಕಾರಣತ್ವಾದಿಗುಣಗಳೂ, ಈಶ್ವರನ ಉಪಾಯತ್ವವು 'ತ್ವಾಮೇವ ಶರಣಂ ಪ್ರಾಪ್ಯ ನಿಸ್ತರನ್ತಿ ಮನೀಷಿಣಃ' (1.4) ಎಂದೂ, ಸರ್ವಶಬ್ದವಾಚ್ಯತ್ವವು 'ವಚಸಾಂ ವಾಚ್ಯಮುತ್ತಮಂ' (1.7) ಎಂದೂ, ಭಗವಂತನ ಸರ್ವಶೇಷಿತ್ವ 'ಸರ್ವೇಷು ದೇಶಕಾಲೇಷು ಸರ್ವಾವಸ್ಥಾಸು ಚಾಚ್ಯುತ । ಕಿಂಕರೋಽಸ್ಮಿ ಹೃಷೀಕೇಶ ಭೂಯೋ ಭೂಯೋಽಸ್ಮಿ ಕಿಂಕರಃ' (1.14) ಎಂಬಲ್ಲಿಯೂ, ಸರ್ವವಿಧಬಂಧುತ್ವ 'ಪಿತಾ ಮಾತಾ ಸುಹೃದ್ಬಂಧುಃ ಭ್ರಾತಾ ಪುತ್ರಸ್ತ್ವಮೇವ ಹಿ । ವಿದ್ಯಾ ಧನಂ ಚ ಕಾಮ್ಯಂ ಚ ನಾನ್ಯತ್ಕಿಂಚಿತ್ತ್ವಯಾ ವಿನಾ ॥' (2.7) ಎಂದೂ, ಅಪ್ರಾಕೃತಲೋಕವೂ ಅದರಲ್ಲಿ ಭಗವಂತನ ನಿತ್ಯವಾಸವೂ 'ಲೋಕಂ ವೈಕುಂಠನಾಮಾನಂ ದಿವ್ಯಂ ಷಾಡ್ಗುಣ್ಯಸಂಯುತಂ । ಅವೈಷ್ಣವಾನಾಮ್ ಅಪ್ರಾಪ್ಯಂ ಗುಣತ್ರಯವಿವರ್ಜಿತಂ ॥ ನಿತ್ಯಸಿದ್ಧೈಃ ಸಮಾಕೀರ್ಣಂ ತನ್ಮಯೈಃ ಪಾಂಚಕಾಲಿಕೈಃ ।' (2.18,19) ಎಂದೂ ಶುದ್ಧಸತ್ತ್ವ, ನಿತ್ಯ(ಜೀವಾತ್ಮಭೇದ) ರೊಡನೆ ವಿವರಿಸಲಾಗಿದೆ.

ಹೀಗಿರುವ ಪರಮಾತ್ಮನ ಪ್ರಪತ್ತಿಯೇ ಉಪಾಯವೆಂದೂ ಅದು ಪಂಚಕಾಲಪರಾಯಣನಾಗಿ ವರ್ಣಾಶ್ರಮಧರ್ಮ ಅನುಷ್ಠಿಸಿಯೇ ಸಾಧ್ಯವೆಂಬುದೂ 'ಪಂಚಕಾಲೈಕಮನಸಾಂ ತ್ವಮೇವ ಗತಿರವ್ಯಯಃ । ಪರೇ ವ್ಯೋಮ್ನಿ ಸ್ಥಿತಂ ದೇವಂ ನಿರವದ್ಯಂ ನಿರಂಜನಂ ॥ ಅಪ್ರಮೇಯಮಜಂ ವಿಷ್ಣುಮಬ್ಜನಾಭಂ ಸುರೇಶ್ವರಂ । ವಾಗತೀತಂ ಪರಂ ಶಾಂತಂ ಶರಣಂ ತ್ವಾಂ ಗತೋಽಸ್ಮ್ಯಹಂ ॥' (2.33.34) ಎಂಬಲ್ಲಿ ವ್ಯಕ್ತವಾಗಿ ಉಕ್ತವಾಗಿದೆ.

ಇನ್ನು ಪುರುಷಾರ್ಥವು ಭಗವತ್ಕೈಂಕರ್ಯರೂಪವಾಗಿ ಅಪ್ರಾಕೃತಲೋಕದಲ್ಲಿ ಲಭಿಸುವುದೆಂದು 'ಇಚ್ಛಾಮ್ಯಹಂ ಮಹಾ-ಬಾಹೋ ಸಾಯುಜ್ಯಂ ತವ ಸುವ್ರತ' (2.36) ಎಂದೂ, 'ಶ್ರಿಯಃಕಾಂತಂ ಕದಾ ದ್ರಕ್ಷ್ಯಾಮಿ ಚಕ್ಷುಷಾ' (2.24), 'ಶಂಖಚಕ್ರಗದಾಪದ್ಮೈರಂಕಿತಂ ಪಾದಪಂಕಜಂ .... ಕದಾ ವಾ ದೇವ ಮೂರ್ಧಾನಂ ಮಾಮಕಂ ಮಂಡಯಿಷ್ಯತಿ' (2.25,26), 'ಕದಾ ಗಂಭೀರಯಾ ವಾಚಾ ಶ್ರಿಯಾ ಯುಕ್ತೋ ಜಗತ್ಪತಿಃ .... ಏವಂ ಕುರ್ವಿತಿ ವಕ್ಷ್ಯತಿ' (2.27), 'ಸರ್ವೇಷು ದೇಶಕಾಲೇಷು ಸರ್ವಾವಸ್ಥಾಸು ಚಾಚ್ಯುತ । ಕಿಂಕರೋಽಸ್ಮಿ ಹೃಷೀಕೇಶ ಭೂಯೋ ಭೂಯೋಽಸ್ಮಿ ಕಿಂಕರಃ' (4.18), 'ಕರ್ಮಣಾ ಮನಸಾ ವಾಚಾ ಯಾ ಚೇಷ್ಟಾ ಮಮ ನಿತ್ಯಶಃ । ಕೇಶವಾರಾಧನೇ ಸಾ ಸ್ಯಾತ್ ಜನ್ಮಜನ್ಮಾಂತರೇಷ್ವಪಿ ॥' (3.16), 'ಕಾಮಯೇ ವೈಷ್ಣವತ್ವಂ ತು ಸರ್ವಜನ್ಮಸು ಕೇವಲಂ' (1.13), 'ಅಹಂಕಾರಾರ್ಥಕಾಮೇಷು ಪ್ರೀತಿರದ್ಯೈವ ನಶ್ಯತು । ತ್ವಾಂ ಪ್ರಪನ್ನಸ್ಯ ಮೇ ದೇವ ವರ್ಧತಾಂ ಶ್ರೀಮತಿ ತ್ವಯಿ ॥' (1.17) ಮುಂತಾದ ಅನೇಕ ಕಡೆಗಳಲ್ಲಿ ವಿಶದೀಕರಿಸಿದೆ.

ಭಗವಚ್ಛಾಸ್ತ್ರ, ಸಾತ್ತ್ವತಧರ್ಮ ಮುಂತಾದ ಹೆಸರುಗಳುಳ್ಳ ಈ ವೈಷ್ಣವಭಕ್ತಿಮಾರ್ಗವು ವಿಶಿಷ್ಟಾದ್ವೈತದ ನಿತ್ಯ ಜೀವನಕ್ಕೆ ಸಂಬಂಧಿಸಿದಂತೆ ಅತ್ಯುನ್ನತ ಪ್ರಮಾಣವಾಗಿದೆ. ಮನೆ, ಮಂದಿರಗಳಲ್ಲಿ ಪೂಜಾದಿ ಕಾರ್ಯಕಲಾಪಗಳಿಗೆ ಮಾರ್ಗದರ್ಶಕವಾಗಿದೆ.

ಪ್ರಧಾನವಾಗಿ ಭಕ್ತಿ, ಪ್ರಪತ್ತಿಗಳೆಂಬ ಎರಡು ವಿಧ ಮೋಕ್ಷೋಪಾಯಗಳಲ್ಲಿ ಪ್ರಪತ್ತಿ(ಶರಣಾಗತಿ)ಯನ್ನು ವಿಸ್ತಾರವಾಗಿ ಪ್ರತಿಪಾದಿಸಿದೆ ಈ ಆಗಮದಲ್ಲಿ.

ಷಡಂಗಯೋಗವೆಂದು ಹೇಳಲ್ಪಡುವ ಈ ಶರಣಾಗತಿಯಲ್ಲಿ 5 ಅಂಗಗಳೂ ಆತ್ಮನಿಕ್ಷೇಪ ಎಂಬ ಅಂಗಿಯೂ ಸೇರಿದ್ದರೂ, ಭಕ್ತಿಯಲ್ಲಿ ಅಂಗಿಯಾದ ಸಮಾಧಿಯನ್ನೂ ಸೇರಿಸಿ ಅಷ್ಟಾಂಗಯೋಗವೆಂದು ವ್ಯವಹರಿಸುವಂತೆ ಇಲ್ಲಿಯೂ ತಿಳಿಯುವುದು. ಈ ಅಂಗಗಳನ್ನು 'ಆನುಕೂಲ್ಯಸ್ಯ ಸಂಕಲ್ಪಃ, ಪ್ರಾತಿಕೂಲ್ಯಸ್ಯ ವರ್ಜನಂ । ರಕ್ಷಿಷ್ಯತೀತಿ ವಿಶ್ವಾಸಃ, ಗೋಪ್ತೃತ್ವವರಣಂ ತಥಾ ॥ ಆತ್ಮನಿಕ್ಷೇಪಕಾರ್ಪಣ್ಯೇ ಷಡ್ವಿಧಾ ಶರಣಾಗತಿಃ' (ಅಹಿ.ಸಂ. 37.18) ಎಂಬಲ್ಲಿ ಹೇಳಿದೆ. ಈ ಪ್ರಪತ್ತ್ಯುಪಾಯವು 'ಅಹಮಸ್ಮ್ಯಪರಾಧಾನಾಂ ಆಲಯೋಽಕಿಂಚನೋಽಗತಿಃ । ತ್ವಮೇವೋಪಾಯಭೂತೋ ಮೇ ಭವೇತಿ ಪ್ರಾರ್ಥನಾಮತಿಃ ॥

ಶರಣಾಗತಿರಿತ್ಯುಕ್ತಾ ಸಾ ದೇವೇಽಸ್ಮಿನ್ಪ್ರಯುಜ್ಯತಾಂ ॥' (ಅಹಿ.ಸಂ. 37.30,31) ಎಂದು ಹೇಳಲಾಗಿದೆ. 'ನಿಕ್ಷೇಪಾಪರ-ಪರ್ಯಾಯಃ ನ್ಯಾಸಃ ಪಂಚಾಂಗಸಂಯುತಃ । ಸಂನ್ಯಾಸಃ ತ್ಯಾಗ ಇತ್ಯುಕ್ತಃ ಶರಣಾಗತಿರಿತ್ಯಪಿ ॥' (ಲಕ್ಷ್ಮೀತಂತ್ರ 17.74) ಎಂದೂ ಈ ಅಂಗಗಳನ್ನು ತಿಳಿಸಿದೆ.

ಸ್ವರೂಪ, ಭರ, ಫಲತ್ಯಾಗವೆಂಬ ಮೂರು ಅಂಶಗಳುಳ್ಳ ಅಂಗಿಯಾದ ಆತ್ಮನಿಕ್ಷೇಪದಲ್ಲಿ 'ಶಾಶ್ವತೀ ಮಮ ಸಂಸಿದ್ಧಿಃ ಇಯಂ ಪ್ರಹ್ವೀಭವಾಮಿ ಯತ್ । ಪುರುಷಂ ಪರಮುದ್ದಿಶ್ಯ ನ ಮೇ ಸಿದ್ಧಿರಿತೋಽನ್ಯಥಾ ॥ ಇತ್ಯಂಗಮುದಿತಂ ಶ್ರೇಷ್ಠಂ ಫಲೇಪ್ಸಾ ತದ್ವಿರೋಧಿನೀ ॥ (ಅ.ಸಂ. 52.14), ಎಂದು ಫಲತ್ಯಾಗವು ಹೇಳಲಾಗಿದೆ.

ಇದರ ಐದು ಅಂಗಗಳಲ್ಲಿ ಆನುಕೂಲ್ಯಸಂಕಲ್ಪ, ಪ್ರಾತಿಕೂಲ್ಯವರ್ಜನಗಳಿಂದ ಅಪಾಯಪರಿಹಾರ ಸಿದ್ಧಿಸುವುದೆಂದು 'ಆನುಕೂಲ್ಯೇತರಾಭ್ಯಾಂ ತು ವಿನಿವೃತ್ತಿರಪಾಯತಃ' (ಲ.ತಂ. 17.76) ಎಂಬಲ್ಲಿಯೂ, ಕಾರ್ಪಣ್ಯವು ಭಗವಂತನ ಕಾರುಣ್ಯವನ್ನು ಬೆಳೆಸಿ ಅನನ್ಯೋಪಾಯತೆಗೆ ಉಪಯುಕ್ತವಾಗುವುದೆಂದು 'ಕಾರ್ಪಣ್ಯೇನಾಪ್ಯುಪಾಯಾನಾಂ ವಿನಿವೃತ್ತಿಃ ಇಹೇರಿತಾ' (ಲ.ತಂ. 17.77) ಎಂಬಲ್ಲಿಯೂ, 'ರಕ್ಷಿಷ್ಯತೀತಿ ವಿಶ್ವಾಸಾದಭೀಷ್ಟೋಪಾಯಕಲ್ಪನಂ' (ಲ.ತಂ. 17.77) ಎಂದು ಮಹಾವಿಶ್ವಾಸವು ಅಂಗಿಯ ಅನುಷ್ಠಾನಕ್ಕೂ, ನಿರ್ಭರನಾಗಿರುವಿಕೆಗೂ ಹೇತುವಾಗುವುದೆಂದೂ, 'ಗೋಪ್ತೃತ್ವ-ವರಣಂ ನಾಮ ಸ್ವಾಭಿಪ್ರಾಯನಿವೇದನಂ' (ಲ.ತಂ. 17.78) ಎಂದು ಪ್ರಾರ್ಥಿಸದಿದ್ದರೆ ರಕ್ಷಿಸಲಾಗದೆಂಬ ಅರ್ಥವೂ ಸೇರಿ, ಈ ಐದು ಅಂಗಗಳ ವಿಸ್ತಾರ ನಿರೂಪಿತವಾಗಿದೆ.

ಇದನ್ನೇ 'ಸರ್ವಜ್ಞೋಽಪಿ ಹಿ ವಿಶ್ವೇಶಃ ಸದಾ ಕಾರುಣಿಕೋಽಪಿ ಸನ್ । ಸಂಸಾರತಂತ್ರವಾಹಿತ್ವಾತ್ ರಕ್ಷಾಪೇಕ್ಷಾಂ ಪ್ರತೀಕ್ಷತೇ ॥' (ಲ.ತಂ. 17.78) ಎಂದು ಸ್ಪಷ್ಟಪಡಿಸಿದೆ. ಹೀಗೆ 'ಆತ್ಮಾತ್ಮೀಯಭರನ್ಯಾಸೋ ಹ್ಯಾತ್ಮನಿಕ್ಷೇಪ ಉಚ್ಯತೇ ॥' (ಲ.ತಂ. 17.79) ಎಂದು ಅಂಗಿಯಾದ ಆತ್ಮನಿಕ್ಷೇಪವು ಆ ಐದು ಅಂಗಗಳೊಡನೆ ಮಾಡತಕ್ಕದ್ದೆಂದಿದೆ. ಇಂತಹ ರಕ್ಷಾಫಲವೂ ಭಗವಂತನಿಗೆ ಸಮರ್ಪಿಸತಕ್ಕದೆಂದು 'ತೇನ ಸಂರಕ್ಷ್ಯಮಾಣಸ್ಯ ಫಲೇ ಸ್ವಾಮ್ಯವಿಮುಕ್ತತಾ । ಕೇಶವಾರ್ಪಣಪರ್ಯಂತಾ ಹ್ಯಾತ್ಮನಿಕ್ಷೇಪ ಉಚ್ಯತೇ' (ಲ.ತಂ. 17.73) ಎಂಬಲ್ಲಿ ವ್ಯಕ್ತ. ಈ ವಿಧಿಯು ಸಾತ್ಯಕಿತಂತ್ರದಲ್ಲಿ ಭಗವಂತನಿಂದಲೇ 'ಅನೇನೈವ ತು ಮಂತ್ರೇಣ ಸ್ವಾತ್ಮಾನಂ ಮಯಿ ನಿಕ್ಷಿಪೇತ್ । ಮಯಿ ನಿಕ್ಷಿಪ್ತಕರ್ತವ್ಯಃ ಕೃತಕೃತ್ಯೋ ಭವಿಷ್ಯತಿ ॥' ಎಂದು ಹೇಳಲ್ಪಟ್ಟಿದೆ.

ಹೀಗೆ ಉಪಾಯಾನುಷ್ಠಾನದಿಂದ ಕೃತಕೃತ್ಯನಾದವನಿಗೆ ಪುರುಷಾರ್ಥವಾಗಿ ಭಗವತ್ಕೈಂಕರ್ಯವೂ, ಪುರುಷಾರ್ಥ-ಕಾಷ್ಠೆಯಾಗಿ ಭಾಗವತಕೈಂಕರ್ಯವೂ ಇರುತ್ತವೆಂದು 'ಆರಾಧನಾನಾಂ ಸರ್ವೇಷಾಂ ವಿಷ್ಣೋರಾರಾಧನಂ ಪರಂ । ತಸ್ಮಾತ್ ಪರತರಂ ಪ್ರೋಕ್ತಂ ತದೀಯಾರಾಧನಂ ಪರಂ ॥' (ಶ್ರೀಪಾದ್ಮೋತ್ತರ 29.81) ಇತ್ಯಾದಿಗಳಲ್ಲಿ ಪ್ರತಿಪಾದಿತ. ಇಂತಹ ಅಧಿಕಾರಿಗೂ ಯಾವಜ್ಜೀವನ ಶಾಸ್ತ್ರವಿಹಿತ ವರ್ಣಾಶ್ರಮಾನುಷ್ಠಾನವು ಅವಶ್ಯಾಪೇಕ್ಷಿತವೆಂದು '.... ಮನೀಷೀ ವೈದಿಕಾ-ಚಾರಂ ಮನಸಾಪಿ ನ ಲಂಘಯೇತ್' (ಲ.ತಂ. 17.94) ಇತ್ಯಾದಿಯಾಗಿ ಹೇಳಿ ಪಾರಮೈಕಾಂತ್ಯನಿಷ್ಠೆ ಉದ್ಘೋಷಿಸಲಾಗಿದೆ.

ಶ್ರೀ <u>ವಿಷ್ಣುಪುರಾಣದ</u> ಮಹಿಮೆಯೂ, ಅದರಲ್ಲಿ ವಿಶದವಾಗಿ ವಿಶಿಷ್ಟಾದ್ವೈತ ತತ್ತ್ವಗಳು ಪ್ರತಿಪಾದಿತವಾಗಿರುವುದೂ ಶ್ರೀಮದ್ಯಾಮುನಾಚಾರ್ಯರಚಿತ ಸ್ತೋತ್ರದಲ್ಲಿ 'ತತ್ತ್ವೇನ ಯಶ್ಚಿದಚಿದೀಶ್ವರ-ತತ್ಸ್ವಭಾವ-ಭೋಗಾಪವರ್ಗ-ತದುಪಾಯ-ಗತೀರುದಾರಃ । ಸಂದರ್ಶಯನ್ನಿರಮಿಮೀತ ಪುರಾಣರತ್ನಂ ತಸ್ಮೈ ನಮೋ ಮುನಿವರಾಯ ಪರಾಶರಾಯ ॥' ಎಂಬ ನಾಲ್ಕನೇ ಶ್ಲೋಕದಲ್ಲಿ ವ್ಯಕ್ತವಾಗಿದೆ. ಇದರಂತೆ ಜೀವಾತ್ಮಸ್ವರೂಪ, ಸ್ವಭಾವ, ಅವಾಂತರ ಭೇದಗಳು - 'ಪಿಂಡಃ ಪೃಥಕ್ ಯತಃ ಪುಂಸಃ' (2.16.85), 'ಪುಮಾನ್ ನ ದೇವೋ ನ ನರಃ ನ ತಿರ್ಯಕ್ ನ ಚ ಪಾದಪಃ । ಶರೀರಾಕೃತಿಭೇದಾಸ್ತು ಭೂಪೈತೇ ಕರ್ಮಯೋನಯಃ ॥' (2.13.98), 'ನಿರ್ವಾಣಮಯ ಏವಾಯಮಾತ್ಮಾ ಜ್ಞಾನಮಯೋಽಮಲಃ' (6.7.22), 'ಆತ್ಮಾ ಶುದ್ಧೋಽಕ್ಷರಃ ಶಾಂತಃ ನಿರ್ಗುಣಃ ಪ್ರಕೃತೇಃ ಪರಃ' (2.13.71), 'ಅದ್ಯಾಪಿ ನ ನಿವರ್ತನ್ತೇ ದ್ವಾದಶಾಕ್ಷರಚಿಂತಕಾಃ' (1.6.39), 'ಯದ್ವೈ ಪಶ್ಯನ್ತಿ ಸೂರಯಃ' (1.6.38) ಮುಂತಾದ ಕಡೆಗಳಲ್ಲಿ ಹೇಳಿದೆ.

ಅಚಿತ್ತತ್ತ್ವ ಸ್ವರೂಪ, ಸ್ವಭಾವ, ಭೇದಗಳು - 'ತ್ರಿಗುಣಂ ತಜ್ಜಗದ್ಯೋನಿಃ ಅನಾದಿಪ್ರಭವಾಪ್ಯಯಂ' (1.2.21), 'ವ್ಯಕ್ತಾವ್ಯಕ್ತೇ ತಥೈವಾನ್ಯೇ ರೂಪೇ ಕಾಲಸ್ತಥಾಪರಃ(ರಂ)' (1.2.15), 'ಕಲಾಮುಹೂರ್ತಾದಿಮಯಶ್ಚ ಕಾಲೋ ನ ಯದ್ವಿಭೂತೇಃ ಪರಿಣಾಮಹೇತುಃ' (4.1.84) ಮುಂತಾದೆಡೆ ತಿಳಿಸಿದೆ.

ಈಶ್ವರ ಸ್ವರೂಪ ಮುಂತಾದುವನ್ನು 'ಅವಿಕಾರಾಯ ಶುದ್ಧಾಯ' (1.2.1), 'ಪರಃ ಪರಾಣಾಂ ಪರಮಃ' (6.3.85), 'ಶಾಸ್ತಾ ವಿಷ್ಣುರಶೇಷಸ್ಯ' (1.17.20), 'ಸಮಸ್ತಕಲ್ಯಾಣಗುಣಾತ್ಮಕೋಽಸೌ' (6.5.84), 'ಯೇ ಭವಿಷ್ಯಂತಿ ಯೇ

ಭೂತಾಃ ಸರ್ವಭೂತೇಶ್ವರಾದ್ದ್ವಿಜ । ತೇ ಸರ್ವೇ ಸರ್ವಭೂತಸಸ್ಯ ವಿಷ್ಣೋರಂಶಸಮುದ್ಭವಾಃ ॥' (1.22.86), 'ಆತ್ಮಭಾವಂ ನಯತ್ಯೇನಂ ತದ್ಬ್ರಹ್ಮಧ್ಯಾಯಿನಂ ಮುನೇ(ನಿಂ) । ವಿಕಾರ್ಯಮಾತ್ಮನಃ ಶಕ್ತ್ಯಾ ಲೋಹಮಾಕರ್ಷಕೋ ಯಥಾ ॥' (6.7.30) ಮುಂತಾದೆಡೆಗಳಲ್ಲಿ ವಿವರಿಸಿದೆ.

ಭೋಗ, ಅದರ ಸ್ಥಾನ, ಭೋಗ್ಯ, ಭೋಗೋಪಕರಣ ಮುಂತಾದವನ್ನು ಭುವನಕೋಶ ಮೊದಲಾದ ಕಡೆ ವಿಸ್ತರಿಸಿದೆ. 'ಯೋಗಿನಾಮಮೃತಂ ಸ್ಥಾನಂ ಸ್ವಾತ್ಮಸಂತೋಷಕಾರಿಣಾಂ' (1.6.38), 'ಏಕಾನ್ತಿನಃ ಸದಾ ಬ್ರಹ್ಮಧ್ಯಾಯಿನೋ ಯೋಗಿನೋ ಹಿ ಯೇ । ತೇಷಾಂ ತತ್ ಪರಮಂ ಸ್ಥಾನಂ....' (1.6.38), 'ನಿರಸ್ತಾತಿಶಯಾಹ್ಲಾದಸುಖಭಾವೈಕಲಕ್ಷಣಾ । ಭೇಷಜಂ ಭಗವತ್ಪ್ರಾಪ್ತಿರೇಕಾಂತಾತ್ಯಂತಿಕೀ ಮತಾ ॥' (6.5.59), 'ತದ್ಭಾವಭಾವಮಾಪನ್ನಃ' (6.7.95) ಮುಂತಾದವು ಗಮನಿಸತಕ್ಕವು.

ಭಕ್ತಿಯೋಗವು 'ತದ್ರೂಪಪ್ರತ್ಯಯೇ ಚೈಕಾ ಸಂತತಿಶ್ಚಾನ್ಯನಿಃಸ್ಪೃಹಾ । ತದ್ಧ್ಯಾನಂ ಪ್ರಥಮೈಃ ಷಡ್ಭಿಃ ಅಂಗೈಃ ನಿಷ್ಪಾದ್ಯತೇ ನೃಪ' (1.9.73) ಮುಂದಾಗಿ ಹೇಳಿದೆ. ಶರಣಾಗತಿಸ್ವರೂಪವು 'ತಾವದಾರ್ತಿಸ್ತಥಾ ವಾಂಛಾ ತಾವನ್ಮೋಹಃ ತಥಾಽಸುಖಂ । ಯಾವನ್ನ ಯಾತಿ ಶರಣಂ ತ್ವಾಮಶೇಷಾಘನಾಶನಂ ॥' (1.9.73) ಮುಂತಾದೆಡೆಗಳಲ್ಲಿ ವ್ಯಕ್ತ.

ಮತ್ತೆಯೂ ಕೆಲವು ವಿಶೇಷ ತತ್ತ್ವಾಂಶಗಳ ವಿವರಣವಾಗಿರುವ ಕೆಲವು ಪ್ರಮಾಣವಚನಗಳೆಂದರೆ, ಪ್ರಾರಂಭದಲ್ಲೇ 'ಸೋಽಹಮಿಚ್ಛಾಮಿ ಧರ್ಮಜ್ಞ ಶ್ರೋತುಂ ತ್ವತ್ತೋ ಯಥಾ ಜಗತ್ । ಬಭೂವ ಭೂಯಶ್ಚ ಯಥಾ ಮಹಾಭಾಗ ಭವಿಷ್ಯತಿ ॥ ಯನ್ಮಯಂ ಚ ಜಗತ್ ಬ್ರಹ್ಮನ್ ಯತಶ್ಚೈತತ್ ಚರಾಚರಂ । ಲೀನಮಾಸೀದ್ಯಥಾ ತತ್ರ ಲಯಮೇಷ್ಯತಿ ಯತ್ರ ಚ ॥' (1.1.4,5) ಎಂಬ ಆಧ್ಯಾತ್ಮಿಕ ಪ್ರಶ್ನೆಗಳಿಗೆ ಉತ್ತರವಾಗಿ, 'ವಿಷ್ಣೋಸ್ಸಕಾಶಾದುದ್ಭೂತಂ ಜಗತ್ ತತ್ರೈವ ಚ ಸ್ಥಿತಂ । ಸ್ಥಿತಿಸಂಯಮಕರ್ತಾಸೌ ಜಗತೋಽಸ್ಯ ಜಗಚ್ಚ ಸಃ ॥' (1.1.31) ಎಂದು ತಿಳಿಸಿ, ಅದನ್ನೇ ವಿವರಿಸುತ್ತಾ 'ಪರಃ ಪರಾಣಾಂ ಪರಮಃ ಪರಮಾತ್ಮಾಽಽತ್ಮಸಂಸ್ಥಿತಃ । ರೂಪವರ್ಣಾದಿನಿರ್ದೇಶವಿಶೇಷಣವಿವರ್ಜಿತಃ ॥ ಅಪಕ್ಷಯವಿನಾ-ಶಾಭ್ಯಾಂ ಪರಿಣಾಮರ್ಧಿಜನ್ಮಭಿಃ । ವರ್ಜಿತಃ ಶಕ್ಯತೇ ವಕ್ತುಂ ಯಸ್ಸದಾಸ್ತೀತಿ ಕೇವಲಂ ॥ ಸರ್ವತ್ರಾಸೌ ಸಮಸ್ತಂ ಚ ವಸತ್ಯತ್ರೇತಿ ವೈ ಯತಃ । ತತಃ ಸ ವಾಸುದೇವೇತಿ ವಿದ್ವದ್ಭಿಃ ಪರಿಪಠ್ಯತೇ ॥ ತದ್ಬ್ರಹ್ಮ ಪರಮಂ ನಿತ್ಯಂ ಅಜಮಕ್ಷಯಂ ಅವ್ಯಯಂ । ಏಕಸ್ವರೂಪಂ ಚ ಸದಾ ಹೇಯಾಭಾವಾಚ್ಚ ನಿರ್ಮಲಂ ॥ ತದೇವ ಸರ್ವಮೇವೈತತ್ ವ್ಯಕ್ತಾವ್ಯಕ್ತ-ಸ್ವರೂಪವತ್ । ತಥಾ ಪುರುಷರೂಪೇಣ ಕಾಲರೂಪೇಣ ಚ ಸ್ಥಿತಂ ॥' (1.2.10-14) ಎಂದು ಹೇಳಿ, ಕೊನೆಯಲ್ಲಿ 'ಸ ಸರ್ವಭೂತಪ್ರಕೃತಿಂ ವಿಕಾರಾನ್ ಗುಣಾದಿ ದೋಷಾಂಶ್ಚ ಮುನೇ ವ್ಯತೀತಃ । ಅತೀತಸರ್ವಾವರಣೋಽಖಿಲಾತ್ಮಾ ತೇನಾಸ್ತೃತಂ ಯದ್ಭುವನಾಂತರಾಲೇ ॥ ಸಮಸ್ತಕಲ್ಯಾಣಗುಣಾತ್ಮಕೋಽಸೌ ಸ್ವಶಕ್ತಿಲೇಶೋದ್ಧೃತಭೂತವರ್ಗಃ । ಇಚ್ಛಾ-ಗೃಹೀತಾಭಿಮತೋರುದೇಹಃ ಸಂಸಾಧಿತಾಶೇಷಜಗದ್ಧಿತೋಽಸೌ ॥ ತೇಜೋ ಬಲೈಶ್ವರ್ಯಮಹಾವಬೋಧಃ ಸುವೀರ್ಯ-ಶಕ್ತ್ಯಾದಿಗುಣೈಕರಾಶಿಃ । ಪರಃ ಪರಾಣಾಂ ಸಕಲಾ ನ ಯತ್ರ ಕ್ಲೇಶಾದಯಸ್ಸಂತಿ ಪರಾವರೇಶೇ ॥ ಸ ಈಶ್ವರೋ ವ್ಯಷ್ಟಿ-ಸಮಷ್ಟಿರೂಪಃ ವಕ್ತಸ್ವರೂಪಃ ಪ್ರಕಟಸ್ವರೂಪಃ । ಸರ್ವೇಶ್ವರಃ ಸರ್ವದೃಕ್ ಸರ್ವವೇತ್ತಾ ಸಮಸ್ತಶಕ್ತಿಃ ಪರಮೇಶ್ವ-ರಾಖ್ಯಃ ॥ ಸಂಜ್ಞಾಯತೇ ಯೇನ ತದಸ್ತದೋಷಂ ಶುದ್ಧಂ ಪರಂ ನಿರ್ಮಲಮೇಕರೂಪಂ । ಸಂದೃಶ್ಯತೇ ವಾಪ್ಯಧಿಗಮ್ಯತೇ ವಾ ತದ್ಜ್ಞಾನಮಜ್ಞಾನಮತೋಽನ್ಯದುಕ್ತಂ ॥' (6.5.83-87) ಇತ್ಯಾದಿ ನಿರ್ಣಯಿಸಿದೆ.

ವೇದಾಂತಸಿದ್ಧವಾಗಿರುವ ಅಚಿತ್ತತ್ತ್ವದ ತ್ರಿವೃತ್ಕರಣ (ಪಂಚೀಕರಣ) ವನ್ನೂ 'ನಾನಾವೀರ್ಯಾಃ ಪೃಥಗ್ಭೂತಾಃ ತತಸ್ತೇ ಸಂಹತಿಂ ವಿನಾ । ನಾಶಕ್ನುವನ್ಪ್ರಜಾಃ ಸ್ರಷ್ಟುಮಸಮಾಗಮ್ಯ ಕೃತ್ಸ್ನಶಃ ॥ ಸಮೇತ್ಯಾನ್ಯೋನ್ಯಸಂಯೋಗಂ ಪರಸ್ಪರ-ಸಮಾಶ್ರಯಾಃ । ಏಕಸಂಘಾತಲಕ್ಷ್ಯಾಶ್ಚ ಸಂಪ್ರಾಪ್ಯೈಕ್ಯಮಶೇಷತಃ ॥ ಪುರುಷಾಧಿಷ್ಠಿತತ್ವಾಚ್ಚ ಅವ್ಯಕ್ತಾನುಗ್ರಹೇಣ ಚ । ಮಹದಾದ್ಯಾ ವಿಶೇಷಾಂತಾಃ ಅಂಡಮುತ್ಪಾದಯಂತಿ ತೇ ॥' (1.2.52-54) ಎಂದು ಹೇಳಿದೆ.

ಜೀವಾತ್ಮನ ಸ್ವರೂಪ ವಿಷಯದಲ್ಲಿ 'ಜ್ಞಾನಸ್ವರೂಪಮತ್ಯಂತನಿರ್ಮಲಂ....' (1.2.6), 'ಪರಸ್ಯ ಬ್ರಹ್ಮಣಶ್ಶಕ್ತಿಃ ತಥೇದಮಖಿಲಂ ಜಗತ್' (1.22.56), 'ವಿಷ್ಣೋರಂಶಾಃ ದ್ವಿಜೋತ್ತಮ' (1.22.17), 'ವಿಷ್ಣೋರೇತಾ ವಿಭೂತಯಃ' (1.22.32), 'ಪರಸ್ಯ ಬ್ರಹ್ಮಣೋ ರೂಪಂ' (1.2.17), 'ತತ್ಸರ್ವಂ ವೈ ಹರೇಸ್ತನುಃ' (1.22.38), 'ತಾನಿ ಸರ್ವಾಣಿ ತದ್ವಪುಃ' (1.22.87) ಮುಂದಾಗಿಯೂ, ಭಗವಂತನ ಸರ್ವಶಬ್ದವಾಚ್ಯತ್ವವನ್ನು 'ನಾಮರೂಪಂ ಚ ಭೂತಾನಾಂ ಕೃತ್ಯಾನಾಂ ಚ ಪ್ರಪಂಚನಂ । ವೇದಶಬ್ದೇಭ್ಯ ಏವಾದೌ ದೇವಾದೀನಾಂ ಚಕಾರ ಸಃ ॥' (1.5.63) ಎಂಬಲ್ಲಿ ಶಬ್ದಗಳ ಶಕ್ತಿಯು ಪರಮಾತ್ಮ ಪರ್ಯಂತ ಬೋಧಿಸಲು ಶಕ್ತವೆಂದಿದೆ.

ಭಗವತ್ಸ್ವರೂಪಾದಿ ವಿಷಯದಲ್ಲಿ, 'ಶುದ್ಧೇ ಮಹಾವಿಭೂತ್ಯಾಖ್ಯೇ ಪರೇ ಬ್ರಹ್ಮಣಿ ಶಬ್ದ್ಯತೇ । ಮೈತ್ರೇಯ ಭಗವ-

ಚಬ್ಬಬ್ದಃ ಸರ್ವಕಾರಣಕಾರಣೇ' (6.5.72), 'ಜ್ಞಾನಶಕ್ತಿಬಲೈಶ್ವರ್ಯವೀರ್ಯತೇಜಾಂಸ್ಯಶೇಷತಃ । ಭಗವಚ್ಛಬ್ದವಾಚ್ಯಾನಿ ವಿನಾ ಹೇಯೈಃ ಗುಣಾದಿಭಿಃ' (6.5.79), 'ಏವಮೇಷ ಮಹಾನ್ ಶಬ್ದಃ ಮೈತ್ರೇಯ ಭಗವಾನಿತಿ । ಪರಮಬ್ರಹ್ಮಭೂತಸ್ಯ ವಾಸುದೇವಸ್ಯ ನಾನ್ಯಗಃ ॥ ತತ್ರ ಪೂಜ್ಯಪದಾರ್ಥೋಕ್ತಿಪರಿಭಾಷಾಸಮನ್ವಿತಃ । ಶಬ್ದೋಽಯಂ ನೋಪಚಾರೇಣ ತ್ವನ್ಯತ್ರ ಹ್ಯುಪಚಾರತಃ ॥' (6.5.75,76), 'ಏವಂ ಪ್ರಕಾರಮಮಲಂ ನಿತ್ಯಂ ವ್ಯಾಪಕಮಕ್ಷಯಂ । ಸಮಸ್ತಹೇಯರಹಿತಂ ವಿಷ್ಣ್ವಾಖ್ಯಂ ಪರಮಂ ಪದಂ ॥' (1.22.53), 'ಕ್ರೀಡತೋ ಬಾಲಕಸ್ಯೇವ ಚೇಷ್ಟಾಂ ತಸ್ಯ ನಿಶಾಮಯ' (1.2.18) ಇತ್ಯಾದಿಯಾಗಿ ಹೇಳಿದೆ. ಜೀವಾತ್ಮನ ಕರ್ಮಸಂಬಂಧದಿಂದ ಜ್ಞಾನಸಂಕೋಚವನ್ನು ಪಡೆಯುವ ಬಗ್ಗೆ, 'ಅವಿದ್ಯಾಕರ್ಮ-ಸಂಜ್ಞಾಽನ್ಯಾ ತೃತೀಯಾ ಶಕ್ತಿರಿಷ್ಯತೇ । ಯಯಾ ಕ್ಷೇತ್ರಜ್ಞಶಕ್ತಿಸ್ಸಾ ವೇಷ್ಟಿತಾ ನೃಪ ಸರ್ವಗಾ ॥ ಸಂಸಾರತಾಪಾನ್ ಅಖಿಲಾನವಾಪ್ನೋತ್ಯತಿಸಂತತಾನ್ । ತಯಾ ತಿರೋಹಿತತ್ವಾಚ್ಚ ಶಕ್ತಿಃ ಕ್ಷೇತ್ರಜ್ಞಸಂಜ್ಞಿತಾ । ಸರ್ವಭೂತೇಷು ಭೂಪಾಲ ತಾರತಮ್ಯೇಣ ವರ್ತತೇ' (6.7.61-63) ಎಂದಿದೆ.

ಭಗವಂತನ ಸರ್ವಾತ್ಮಕತ್ವವನ್ನು 'ವ್ಯಕ್ತಂ ವಿಷ್ಣುಸ್ತಥಾವ್ಯಕ್ತಂ ಪುರುಷಃ ಕಾಲ ಏವ ಚ' (1.2.18), 'ಸ ಏವ ಕ್ಷೋಭಕೋ ಬ್ರಹ್ಮನ್ ಕ್ಷೋಭ್ಯಶ್ಚ ಪರಮೇಶ್ವರಃ' (1.2.31), 'ಪ್ರಧಾನಪುಂಸೋರಜಯೋಃ ಕಾರಣಂ ಕಾರ್ಯಭೂತಯೋಃ' (1.9. 37) ಎಂದೂ 'ನತಾಃ ಸ್ಮ ಸರ್ವವಚಸಾಂ ಪ್ರತಿಷ್ಠಾ ಯತ್ರ ಶಾಶ್ವತೀ' (1.14.23) ಎಂದು ಸರ್ವಶಬ್ದವಾಚ್ಯತ್ವವೂ, 'ಏಕತ್ವೇ ಸತಿ ನಾನಾತ್ವಂ ನಾನಾತ್ವೇ ಸತಿ ಚೈಕತಾ । ಅಚಿಂತ್ಯಂ ಬ್ರಹ್ಮಣೋ ರೂಪಂ ಕಸ್ತದ್ವೇದಿತುಮರ್ಹತಿ ॥' (?) ಎಂಬ ಭಗವಂತನ ವಿಚಿತ್ರ ಶಕ್ತಿಯೋಗದ ಬಗ್ಗೆ, 'ಶಕ್ತಯರ್ಸರ್ವಭಾವಾನಾಂ ಅಚಿಂತ್ಯಜ್ಞಾನಗೋಚರಾಃ । ಯತೋಽತೋ ಬ್ರಹ್ಮಣಃ ತಾಸ್ತು ಸರ್ಗಾದ್ಯಾ ಭಾವಶಕ್ತಯಃ ॥ ಭವಂತಿ ತಪತಾಂ ಶ್ರೇಷ್ಠ ಪಾವಕಸ್ಯ ಯಥೋಷ್ಣತಾ ।' (1.3.2), 'ಜಗದೇತನ್ಮಹಾಶ್ಚರ್ಯಂ ರೂಪಂ ಯಸ್ಯ ಮಹಾತ್ಮನಃ । ತೇನಾಶ್ಚರ್ಯವರೇಣಾಹಂ ಭವತಾ ಕೃಷ್ಣ ಸಂಗತಃ ॥' (5. 19.7) ಎಂಬುದಾಗಿ ವರ್ಣಿಸಿದೆ.

ಉಪಾಯ ವಿಚಾರವಾಗಿ, ಭಕ್ತಿಯೋಗದ ಬಗ್ಗೆ 'ವರ್ಣಾಶ್ರಮಾಚಾರವತಾ ಪುರುಷೇಣ ಪರಃ ಪುಮಾನ್ । ವಿಷ್ಣುಃ ಆರಾಧ್ಯತೇ ಪಂಥಾಃ ನಾನ್ಯಸ್ತತ್ತೋಷಕಾರಕಃ ॥' (3.8.9) ಎಂದು ವರ್ಣಾಶ್ರಮಧರ್ಮ ಅನುಷ್ಠಾನದ ಅಂಗತ್ವದೊಡನೆ ಹೇಳಿದೆ.

ಪರದೇವತಾ ನಿರ್ಣಯ ವಿಷಯದಲ್ಲಿ, 'ಏತತ್ಸಮಸ್ತಂ ಯದಿಹಾಸ್ತಿ ಕಿಂಚಿತ್ ತದಚ್ಯುತಃ ನಾಸ್ತಿ ಪರಂ ತತೋಽನ್ಯತ್' (2.16.23) ಎಂದೂ, 'ಪ್ರಕೃತಿರ್ಯಾ ಮಯಾಖ್ಯಾತಾ ವ್ಯಕ್ತಾವ್ಯಕ್ತಸ್ವರೂಪಿಣೀ । ಪುರುಷಶ್ಚಾಪ್ಯುಭಾವೇತೌ ಲೀಯೇತೇ ಪರಮಾತ್ಮನಿ ॥ ಪರಮಾತ್ಮಾ ಚ ಸರ್ವೇಷಾಂ ಆಧಾರಃ ಪರಮೇಶ್ವರಃ । ವಿಷ್ಣುನಾಮಾ ಸ ವೇದೇಷು ವೇದಾಂತೇಷು ಚ ಗೀಯತೇ' (6.4.39,40) ಎಂದಿದೆ.

ಈಶ್ವರನ ಸರ್ವಕರ್ಮಸಮಾರಾಧ್ಯತ್ವವು 'ಯಜ್ಞೈಸ್ತ್ವಮಿಜ್ಯಸೇ ನಿತ್ಯಂ ಸರ್ವದೇವಮಯಾಚ್ಯುತ' (5.20.97), 'ಯೈಃ ಸ್ವಧರ್ಮಪರೈರ್ನಾಥ ನರೈರಾರಾಧಿತೋ ಭವಾನ್ । ತೇ ತರಂತ್ಯಖಿಲಾಮೇತಾಂ ಮಾಯಾಮಾತ್ಮವಿಮುಕ್ತಯೇ ॥' (5.30.16) ಎಂಬಲ್ಲಿ ಹೇಳಿದೆ.

ಈ ಪರಮಾತ್ಮನ ಲಕ್ಷ್ಮೀವಿಶಿಷ್ಟತ್ವವು ಮತ್ತು ಲಕ್ಷ್ಮಿಯ ವಿಭುತ್ವವು, 'ಸಮಸ್ತಾಃ ಶಕ್ತಯಶ್ಚೈತಾಃ ನೃಪ ಯತ್ರ ಪ್ರತಿಷ್ಠಿತಾಃ । ತದ್ವಿಶ್ವರೂಪವೈರೂಪ್ಯಂ ರೂಪಮನ್ಯದ್ಧರೇರ್ಮಹತ್ ॥ (5.7.70), 'ನಿತ್ಯೈವೈಷಾ ಜಗನ್ಮಾತಾ ವಿಷ್ಣೋಃ ಶ್ರೀರನಪಾಯಿನೀ । ಯಥಾ ಸರ್ವಗತೋ ವಿಷ್ಣುಃ ತಥೈವೇಯಂ ದ್ವಿಜೋತ್ತಮ ॥' (1.8.17), 'ದೇವತ್ವೇ ದೇವದೇಹೇಯಂ ಮನುಷ್ಯತ್ವೇ ಚ ಮಾನುಷೀ । ವಿಷ್ಣೋರ್ದೇಹಾನುರೂಪಾಂ ವೈ ಕರೋತ್ಯೇಷಾತ್ಮನಸ್ತನುಂ ॥' (1.9.145) ಎಂದು ಉಕ್ತವಾಗಿದೆ.

ಹೀಗೆ ಅಶೇಷಚಿದಚಿತ್ಪ್ರಕಾರವಾದ ಬ್ರಹ್ಮದ ಸ್ವರೂಪ ಹೀಗೆ ಸಂಗ್ರಹಿಸಲ್ಪಟ್ಟಿದೆ. 'ಜ್ಯೋತೀಂಷಿ ವಿಷ್ಣುಃ ಭುವನಾನಿ ವಿಷ್ಣುಃ ವನಾನಿ ವಿಷ್ಣುರ್ಗಿರಯೋ ದಿಶಶ್ಚ । ನದಸ್ಸಮುದ್ರಾಶ್ಚ ಸ ಏವ ಸರ್ವಂ ಯದಸ್ತಿ ಯನ್ನಾಸ್ತಿ ಚ ವಿಪ್ರವರ್ಯ ॥' (2.12.38).

ಇನ್ನು ಇತಿಹಾಸಗಳಾದ ರಾಮಾಯಣ, ಮಹಾಭಾರತಗಳ ಮೂಲಕ ವಿಶಿಷ್ಟಾದ್ವೈತಾರ್ಥವನ್ನು ವಿಮರ್ಶಿಸಲಾಗುವುದು. ಅದರಲ್ಲಿ **ಶ್ರೀಮದ್ರಾಮಾಯಣವು** 'ವೇದಃ ಪ್ರಾಚೇತಸಾದಾಸೀತ್ ಸಾಕ್ಷಾದ್ರಾಮಾಯಣಾತ್ಮನಾ' ಎಂಬಂತೆ ವೇದದ ಅವತಾರವಾದರಿಂದಲೂ, ಗಾಯತ್ರೀ ಮಹಾಮಂತ್ರದ ಅರ್ಥವನ್ನು ಅದರ ಒಂದೊಂದಕ್ಷರದ ವಿವರಣವನ್ನು 1000

ಶ್ಲೋಕಗಳಲ್ಲಿ ಮಾಡಿ 24000 ಶ್ಲೋಕಗಳನ್ನುಳ್ಳದ್ದರಿಂದಲೂ ಉಪಾದೇಯವಾಗಿದ್ದು, ಅದರಲ್ಲಿ ಪ್ರಾರಂಭದಲ್ಲೇ ಪರಮಾತ್ಮನ ಸಮಸ್ತಕಲ್ಯಾಣಗುಣಾಕರತ್ವವೂ, ಸಮಸ್ತದೋಷದೂರತ್ವವೂ ಸ್ಫುರಿಸುವ ವಾಲ್ಮೀಕಿ ಮಹರ್ಷಿ ಪ್ರಶ್ನೆಯಿಂದ ತಿಳಿಯುತ್ತದೆ. ಇಲ್ಲಿ ಧರ್ಮಸ್ವರೂಪದ ವಿವರಣೆ ಅತಿ ಹೃದ್ಯವಾಗಿ ಮಾಡಲಾಗಿದೆ.

'ಕೋ ನ್ವಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್ ಕಶ್ಚ ವೀರ್ಯವಾನ್ । ಧರ್ಮಜ್ಞಶ್ಚ ಕೃತಜ್ಞಶ್ಚ ಸತ್ಯವಾಕ್ಯೋ ದೃಢವ್ರತಃ ॥ ....' (ಬಾ.ಕಾ. 1.2,3) ಇತ್ಯಾದಿಯಾಗಿ ಪ್ರಶ್ನೆ. 'ಸ ಚ ಸರ್ವಗುಣೋಪೇತಃ' (ಬಾ.ಕಾ. 1.17) ಎಂದು ಉತ್ತರ. ಹೀಗೆ ಪರತತ್ತ್ವವನ್ನು ತಿಳಿಸುವ ಪ್ರಕರಣದಿಂದ ಪ್ರಾರಂಭಿಸಿ ಆ ವಸ್ತುವಿನ ಕಾರುಣ್ಯ ಮುಂತಾದ ಗುಣಗಳಿಂದ ಭಕ್ತರ ಅನುಗ್ರಹಕ್ಕಾಗಿ ಮನುಷ್ಯನಾಗಿ ಅವತರಿಸಿ, ಧರ್ಮಸಂಸ್ಥಾಪನವನ್ನೂ, ಶರಣಾಗತಿ ತತ್ತ್ವದ ಅನುಷ್ಠಾನವನ್ನು ಮಾಡಿದ ವೃತ್ತಾಂತವನ್ನೂ ತಿಳಿಸುವುದರಿಂದ ಆದಿಕಾವ್ಯವಾದ ರಾಮಾಯಣವು ಶ್ರೇಷ್ಠ ಪ್ರಮಾಣ.

ಇಲ್ಲಿ ಪರತತ್ತ್ವ ನಿರ್ಣಯವು 'ಜೃಂಭಿತಂ ತದ್ಧನುರ್ದೃಷ್ಟ್ವಾ ಶೈವಂ ವಿಷ್ಣುಪರಾಕ್ರಮೈಃ । ಅಧಿಕಂ ಮೇನಿರೇ ವಿಷ್ಣುಂ ದೇವಾಸ್ಸರ್ಷಿಗಣಾಃ ತದಾ ॥' (ಬಾ.ಕಾ. 75.19) ಎಂಬಲ್ಲಿ ರುದ್ರನಿಗಿಂತ ಆಧಿಕ್ಯವೂ, ರಾವಣವಧಾನಂತರ ಬ್ರಹ್ಮನ ಸ್ತೋತ್ರ ಪ್ರಕರಣದಲ್ಲಿ ಚತುರ್ಮುಖ ಬ್ರಹ್ಮನಿಗಿಂತ ಪಾರಮ್ಯವನ್ನೂ ಹೇಳಿದೆ. ಅಲ್ಲಿ 'ಕರ್ತಾ ಸರ್ವಸ್ಯ ಲೋಕಸ್ಯ ಶ್ರೇಷ್ಠೋ ಜ್ಞಾನವತಾಂ ವರಃ' (ಯು.ಕಾ. 120.6), 'ಅಕ್ಷರಂ ಬ್ರಹ್ಮ ಸತ್ಯಂ ತ್ವಂ' (ಯು.ಕಾ. 120.14), 'ತ್ವಂ ತ್ರಯಾಣಾಂ ಹಿ ಲೋಕಾನಾಂ ಆದಿಕರ್ತಾ ಸ್ವಯಂ ಪ್ರಭುಃ' (ಯು.ಕಾ. 120.19), 'ಜಗತ್ಸರ್ವಂ ಶರೀರಂ ತೇ ಸ್ಥೈರ್ಯಂ ತೇ ವಸುಧಾ-ತಲಂ । ಅಗ್ನಿಃ ಕೋಪಃ ಪ್ರಸಾದಸ್ತೇ ಸೋಮಃ ಶ್ರೀವತ್ಸಲಕ್ಷಣಃ ॥' (ಯು.ಕಾ.120.26) ಎಂಬಲ್ಲಿ ಭಗವಂತನ ಸರ್ವಾತ್ಮತ್ವವನ್ನೂ ಸೇರಿಸಿ ಸ್ತುತಿಸಿ, 'ಅಹಂ ತೇ ಹೃದಯಂ ರಾಮ' (ಯು.ಕಾ. 120.24) ಎಂದು ಪುತ್ರನೆಂಬ ಅರ್ಥದ ಹೃದಯಶಬ್ದ ಪ್ರಯೋಗಿಸಿರುವುದರಿಂದ ('ಪುತ್ರೋ ಹಿ ಹೃದಯಂ' ಎಂದು ತೈ. ಬ್ರಾ. 2.2.41 ದಲ್ಲಿ ಹೇಳಿದೆ) ಬ್ರಹ್ಮನೂ ತನ್ನ ಕಾರ್ಯತ್ವವನ್ನು ಒಪ್ಪಿರುವುದರಿಂದ, ರಾಮಚಂದ್ರನಾದ ಶ್ರೀಮನ್ನಾರಾಯಣನೇ ಪರತತ್ತ್ವವೆಂಬುದು ಸಿದ್ಧ.

ಪರಮಾತ್ಮನ ಉಪಾಯತ್ವವನ್ನೂ 'ಶರಣ್ಯಂ ಶರಣಂ ಚ ತ್ವಾಮಾಹುಃ ದಿವ್ಯಾ ಮಹರ್ಷಯಃ' (ಯು.ಕಾ. 120.18) ಎಂಬಲ್ಲಿ ಹೇಳಿದೆ.

ಜೀವಾತ್ಮಸ್ವರೂಪವು ಪರಮಾತ್ಮಶೇಷವೆಂದೂ, ಪರಮಾತ್ಮನಿಂದ ರಕ್ಷಿಸಲ್ಪಡುವುದೆಂದೂ, 'ತೇ ವಯಂ ಭವತಾ ರಕ್ಷ್ಯಾ ಭವದ್ವಿಷಯವಾಸಿನಃ' (ಆ.ಕಾ. 1.20), 'ಗರ್ಭಭೂತಾಃ ತಪೋಧನಾಃ' (ಆ.ಕಾ. 1.21), 'ಗುಣೈರ್ದಾಸ್ಯಮುಪಾಗತಃ' (ಕಿ.ಕಾ. 4.12), 'ದಾಸೋಽಹಂ ಕೋಸಲೇಂದ್ರಸ್ಯ' (ಸು.ಕಾ. 42.34) ಮುಂತಾದೆಡೆಗಳಲ್ಲಿ ವ್ಯಕ್ತ.

ಅಚಿತ್ತತ್ತ್ವವೂ ಪರಮಾತ್ಮ ಶರೀರ ಮತ್ತು ಅವನಿಗಧೀನವಾದ ಪ್ರವೃತ್ತಿ ಉಳ್ಳದೆಂಬುದು 'ವಿಷಯೇ ತೇ ಮಹಾರಾಜ ರಾಮವ್ಯಸನಕರ್ಶಿತಾಃ । ಅಪಿ ವೃಕ್ಷಾಃ ಪರಿಮ್ಲಾನಾಃ ಸಪುಷ್ಪಾಂಕುರಕೋರಕಾಃ ॥ ಉಪತಪ್ತೋದಕಾ ನದ್ಯಃ ಪಲ್ವಲಾನಿ ಸರಾಂಸಿ ಚ । ಪರಿಶುಷ್ಕಪಲಾಶಾನಿ ವನಾನ್ಯುಪವನಾನಿ ಚ ॥' (ಅಯೋ.ಕಾ. 59.8,9) ಎಂದೂ ಕೊನೆಯಲ್ಲಿ, ಅಯೋಧ್ಯಾವಾಸಿಗಳಾದ ಚರಾಚರಗಳೆಲ್ಲಕ್ಕೂ ಸಾನ್ತಾನಿಕ ಲೋಕವೆಂಬ ಉತ್ತಮ ಗತಿಯನ್ನು ಅನುಗ್ರಹಿಸಿದುದು 'ಯಾನಿ ಭೂತಾನಿ ನಗರೇಽಪ್ಯನ್ತರ್ಧಾನಗತಾನಿ ಚ । ರಾಘವಂ ತಾನ್ಯನುಯಯುಃ ಸ್ವರ್ಗಾಯ ಸಮುಪಸ್ಥಿತಂ ॥ ಯಾನಿ ಪಶ್ಯಂತಿ ಕಾಕುತ್ಸ್ಥಂ ಸ್ಥಾವರಾಣಿ ಚರಾಣಿ ಚ । ಸರ್ವಾಣಿ ರಾಜಗಮನೇ ಹ್ಯನುಜಗ್ಮುರ್ಹಿ ತಾನ್ಯಪಿ ॥' (ಉ.ಕಾ. 109.20-21), 'ಲೋಕಾನ್ ಸಾನ್ತಾನಿಕಾನ್ ನಾಮ ಯಾಸ್ಯಂತೀಮೇ ಸಮಾಗತಾಃ । ಯಚ್ಚ ತಿರ್ಯಗ್ಗತಂ ಕಿಂಚಿತ್ತ್ವಾಮೇವಂ ಅನುಚಿಂತಯನ್ ॥ ಪ್ರಾಣಾಂಸ್ತ್ಯಕ್ಷ್ಯತಿ ಭಕ್ತ್ಯಾ ವೈ ತತ್ಸಂತಾನೇ ನಿವತ್ಸ್ಯತಿ । ಸರ್ವೈರ್ಬ್ರಹ್ಮಗುಣೈರ್ಯುಕ್ತೇ ಬ್ರಹ್ಮ-ಲೋಕಾದನಂತರೆ ॥' (ಉ.ಕಾ. 110.18-20) ಎಂಬಲ್ಲಿ ಹೇಳಲಾಗಿದೆ.

ಹೀಗೆ ತತ್ತ್ವಸ್ವರೂಪವನ್ನು ತಿಳಿಸಿ, ಹಿತ(ಮೋಕ್ಷೋಪಾಯ)ದ ವಿಷಯದಲ್ಲಿ ಪ್ರಪತ್ತಿತತ್ತ್ವವನ್ನು ಬಹುಮುಖವಾಗಿ ವಿಸ್ತರಿಸಿದೆ. ಅದರಲ್ಲಿ ರಾಮಾವತಾರವೇ ದೇವತೆಗಳ ಶರಣಾಗತಿಯಿಂದ ಎಂಬುದು 'ಸಿದ್ಧಗಂಧರ್ವಯಕ್ಷಾಶ್ಚ ತತಸ್ತ್ವಾಂ ಶರಣಂ ಗತಾಃ' (ಬಾ.ಕಾ. 15.24), 'ಸ ಹಿ ದೇವೈರುದೀರ್ಣಸ್ಯ ರಾವಣಸ್ಯ ವಧಾರ್ಥಿಭಿಃ । ಅರ್ಥಿತೋ ಮಾನುಷೇ ಲೋಕೇ ಜಜ್ಞೇ ವಿಷ್ಣುಃ ಸನಾತನಃ ॥' (ಅ.ಕಾ. 1.7) ಎಂದೂ, ಮುಂದೆ ಲಕ್ಷ್ಮಣನು 'ಸ ಭ್ರಾತುಶ್ಚರಣೌ ಗಾಢಂ ನಿಪೀಡ್ಯ ರಘು-ನಂದನಃ । ಸೀತಾಮುವಾಚಾತಿಯಶಾಃ ರಾಘವಂ ಚ ಮಹಾವ್ರತಂ ॥' ಎಂದು (ಅ.ಕಾ. 31.2) ದಿವ್ಯದಂಪತಿಗಳಲ್ಲಿ ಶ್ರೀಪ್ರಪತ್ತಿಪುರಸ್ಸರವಾಗಿ 'ಅಹಂ ಸರ್ವಂ ಕರಿಷ್ಯಾಮಿ ಜಾಗ್ರತಃ ಸ್ವಪತಶ್ಚ ತೇ' (ಅ.ಕಾ. 31.25) ಎಂದು ಪರಮಪುರುಷಾರ್ಥವಾದ ಭಗವತ್ಕೈಂಕರ್ಯ ಪ್ರಾರ್ಥನೆ ಹೇಳಲಾಗಿದೆ. ಹೀಗೇ ಭರತ, ಕಾಕಾಸುರ, ದಂಡಕಾರಣ್ಯವಾಸಿ ಮಹರ್ಷಿಗಳು, ಸುಗ್ರೀವ, ತ್ರಿಜಟೆ, (ಅಶೋಕವನದ) ರಾಕ್ಷಸಿಗಳು, ವಿಭೀಷಣ ಹೀಗೆ ಅನೇಕರ ಶರಣಾಗತಿ ಪ್ರಕರಣಗಳಲ್ಲಿ ಈ

ಶರಣಾಗತಿಯ ವಿಸ್ತಾರ ಕಂಡು ಬರುತ್ತದೆ.

ಅದರಲ್ಲಿ ಪರಮಾತ್ಮನ ಶರಣಾಗತ ರಕ್ಷಣವ್ರತವು ವಿಭೀಷಣ ರಕ್ಷಣದಲ್ಲಿ, 'ಮಿತ್ರಭಾವೇನ ಸಂಪ್ರಾಪ್ತಂ ನ ತ್ಯಜೇಯಂ ಕಥಂಚನ । ದೋಷೋ ಯದ್ಯಪಿ ತಸ್ಯ ಸ್ಯಾತ್ ಸತಾಮೇತದಗರ್ಹಿತಂ ॥' (ಯು.ಕಾ. 18.3), 'ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ । ಅಭಯಂ ಸರ್ವಭೂತೇಭ್ಯೋ ದದಾಮ್ಯೇತತ್ ವ್ರತಂ ಮಮ ॥' (ಯು.ಕಾ. 18.33) ಎಂದು ಹೇಳಲಾಗಿದೆ.

ಈ ಪ್ರಪತ್ತಿಯ ಐದು ಅಂಗಗಳಾದ ಆನುಕೂಲ್ಯಸಂಕಲ್ಪ, ಪ್ರಾತಿಕೂಲ್ಯವರ್ಜನ, ಮಹಾವಿಶ್ವಾಸ, ಗೋಪ್ತೃತ್ವವರಣ, ಕಾರ್ಪಣ್ಯ ಈ ಐದೂ ಸಹ ತ್ರಿಜಟೆ ಶರಣಾಗತಿಯಲ್ಲಿ ವ್ಯಕ್ತವಾಗಿದೆ. 'ತದಲಂ ಕ್ರೂರವಾಕ್ಯೈರ್ವಃ ಸಾಂತ್ವಮೇವಾಭಿಧೀಯತಾಂ । ಅಲಮೇಷಾ ಪರಿತ್ರಾತುಂ ರಾಘವಾದ್ರಾಕ್ಷಸೀಗಣಂ ॥ ಪ್ರಣಿಪಾತಪ್ರಸನ್ನಾ ಹಿ ಮೈಥಿಲೀ ಜನಕಾತ್ಮಜಾ । ಅಭಿಯಾಚಾಮ ವೈದೇಹೀಂ ಏತದ್ಧಿ ಮಮ ರೋಚತೇ ॥' (ಸು.ಕಾ. 27.41,44) ಎಂಬಲ್ಲಿ ಸೀತೆಯಲ್ಲಿ ಈ ಉಪಾಯಾನುಷ್ಠಾನ ಮುಖವಾಗಿ ವಿವೃತವಾಗಿದೆ.

ಇದಲ್ಲದೆ, ಪರಮಾತ್ಮ ವೈಭವ ಸ್ತೋತ್ರ ಪ್ರಕರಣಗಳಲ್ಲಿ ಗುಣಾಭಿರಾಮನಾದ ರಾಮಚಂದ್ರನ ಕೃಪೆ, ಶರಣಾಗತ-ವಾತ್ಸಲ್ಯ ಮುಂತಾದ ಧರ್ಮಸ್ವರೂಪತ್ವವು ಶತ್ರುಗಳ ಮುಖದಿಂದಲೂ ಪ್ರಶಂಸಿಸಲ್ಪಟ್ಟಿವೆ. ಉದಾಹರಣೆಗೆ - ಅಕಂಪನನ ಮಾತಲ್ಲಿ 'ಅಸಾಧ್ಯಃ ಕುಪಿತೋ ರಾಮೋ ವಿಕ್ರಮೇಣ ಮಹಾಯಶಾಃ । ಆಪಗಾಯಾಃ ಸುಪೂರ್ಣಾಯಾಃ ವೇಗಂ ಪರಿಹರೇತ್ ಶರೈಃ ॥ ಸತಾರಗ್ರಹನಕ್ಷತ್ರಂ ನಭಶ್ಚಾಪ್ಯವಸಾದಯೇತ್ । ಅಸೌ ರಾಮಸ್ತು ಮಜ್ಜಂತೀಂ ಶ್ರೀಮಾನಭ್ಯುದ್ಧರೇನ್ಮಹೀಂ ॥ .... ಸಂಹೃತ್ಯ ವಾ ಪುನರ್ಲೋಕಾನ್ ವಿಕ್ರಮೇಣ ಮಹಾಯಶಾಃ । ಶಕ್ತಸ್ಸ ಪುರುಷವ್ಯಾಘ್ರಃ ಸ್ರಷ್ಟುಂ ಪುನರಿಮಾಃ ಪ್ರಜಾಃ ।' (ಆ.ಕಾ. 31.23-26) ಎಂದೂ, 'ತ್ವಮಪ್ರಮೇಯಶ್ಚ ದುರಾಸದಶ್ಚ ಜಿತೇಂದ್ರಿಯಶ್ಚೋತ್ತಮಧಾರ್ಮಿಕಶ್ಚ । ಅಕ್ಷಯ್ಯಕೀರ್ತಿಶ್ಚ ವಿಚಕ್ಷಣಶ್ಚ ಕ್ಷಿತಿಕ್ಷಮಾವಾನ್ ಕ್ಷತಜೋಪಮಾಕ್ಷಃ' (ಕಿ.ಕಾ. 24.31) ಎಂದು ತಾರೆಯೂ, 'ಅಪ್ರಮೇಯಂ ಹಿ ತತ್ತೇಜೋ ಯಸ್ಯ ಸಾ ಜನಕಾತ್ಮಜಾ' (ಆ.ಕಾ. 37.18) ಎಂದೂ ಮಾರೀಚ, ಶೂರ್ಪನಖಿಯರೂ, 'ರಿಪೋಃ ಪ್ರಖ್ಯಾತವೀರ್ಯಸ್ಯ ರಂಜನೀಯಸ್ಯ ವಿಕ್ರಮೈಃ' (ಯು.ಕಾ. 106.6), 'ಯಸ್ಯ ವಿಕ್ರಮಮಾಸಾದ್ಯ ರಾಕ್ಷಸಾ ನಿಧನಂ ಗತಾಃ । ತಂ ಮನ್ಯೇ ರಾಘವಂ ವೀರಂ ನಾರಾಯಣಮನಾಮಯಂ' (ಯು.ಕಾ. 72.11) ಎಂದು ರಾವಣನೂ, 'ವ್ಯಕ್ತಮೇಷ ಮಹಾಯೋಗೀ ಪರಮಾತ್ಮಾ ಸನಾತನಃ । ಅನಾದಿಮಧ್ಯನಿಧನಃ ಮಹತಃ ಪರಮೋ ಮಹಾನ್ ॥ ತಮಸಃ ಪರಮೋ ಧಾತಾ ಶಂಖಚಕ್ರಗದಾಧರಃ । ಶ್ರೀವತ್ಸವಕ್ಷಾ ನಿತ್ಯಶ್ರೀಃ ಅಜಯ್ಯಃ ಶಾಶ್ವತೋ ಧ್ರುವಃ ॥' (ಯು.ಕಾ. 114.14,15) ಎಂದು ಮಂಡೋದರಿಯೂ 'ರಿಪೂಣಾಮಪಿ ವತ್ಸಲ' (ಯು.ಕಾ. 50.56) ಎಂಬ ಅಂಶವನ್ನು ವಿಶದಪಡಿಸಿದ್ದಾರೆ.

ಆದ್ದರಿಂದ 'ಭವಾನ್ನಾರಾಯಣೋ ದೇವಃ ಶ್ರೀಮಾನ್ ಚಕ್ರಾಯುಧೋ ವಿಭುಃ' (ಯು.ಕಾ. 120.14), 'ಸೀತಾ ಲಕ್ಷ್ಮೀಃ ಭವಾನ್ವಿಷ್ಣುಃ' (ಯು.ಕಾ. 120.29) ಎಂದು ಬ್ರಹ್ಮನು ಸ್ತುತಿಸಿದಂತೆ, ತತ್ತ್ವಪ್ರತಿಪಾದನ ರೀತಿ ಅರಿಯಲ್ಪಡುತ್ತೆ. 'ಮಯಾ ತ್ವಂ ಸಮನುಜ್ಞಾತಃ ಗಚ್ಛ ಲೋಕಾನನುತ್ತಮಾನ್' (ಆ.ಕಾ. 68.30) ಇತ್ಯಾದಿಗಳಲ್ಲಿ ಪರಮ ಪುರುಷಾರ್ಥವಾದ ಮೋಕ್ಷವೂ, ರಾಮಚಂದ್ರನ ಆ ಮೋಕ್ಷಪ್ರದತ್ವವೂ ಹೇಳಿದೆ. 'ವಿವೇಶ ವೈಷ್ಣವಂ ಧಾಮ ಸಶರೀರಃ ಸಹಾನುಗಃ' (ಉ.ಕಾ. 110.12) ಎಂದು ಅಪ್ರಾಕೃತ ಸ್ಥಾನ ಹೇಳಿದೆ.

ಇನ್ನೂ ಅನೇಕ ಅಂಶಗಳು ಗ್ರಂಥ ವಿಸ್ತಾರ ಭಯದಿಂದ ಬಿಡಲ್ಪಟ್ಟು ಈಗ **ಮಹಾಭಾರತದ ಆಧಾರ ವಾಕ್ಯ**ಗಳನ್ನು ಪರಿಶೀಲಿಸಲಾಗುತ್ತದೆ.

ಪರತತ್ತ್ವ ನಿರ್ಧಾರಣವು 'ಕೃಷ್ಣ ಏವ ಹಿ ಲೋಕಾನಾಂ ಉತ್ಪತ್ತಿರಪಿ ಚಾವ್ಯಯಃ । ಕೃಷ್ಣಸ್ಯ ಹಿ ಕೃತೇ ಭೂತಂ ಇದಂ ವಿಶಂ ಚರಾಚರಂ ॥' (2.41.23 ಕು) ಎಂಬಲ್ಲಿ ಸ್ಪಷ್ಟ. 'ಕೃಷ್ಣಸ್ಯ ಹಿ ಕೃತೇ' - ಕೃಷ್ಣನಿಗೆ ಶೇಷಭೂತವೆಂದರ್ಥ. 'ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃ ಪುನಃ । ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಃ ಸದಾ ॥' (13.186.11 ಕು), 'ತವಾಂತರಾತ್ಮಾ ಮಮ ಚ ಯೇ ಚಾನ್ಯೇ ದೇಹಿಸಂಜ್ಞಿತಾಃ' (12.361.4 ಕು) ಎಂದು ಬ್ರಹ್ಮನು ರುದ್ರನಿಗೆ ಹೇಳು-ವುದರಿಂದ ನಾರಾಯಣನ ಅಂತರ್ಯಾಮಿತ್ವ ಸಿದ್ಧ. 'ವಿಷ್ಣುರಾತ್ಮಾ ಭಗವತಃ ಭವಸ್ಯಾಮಿತತೇಜಸಃ ॥ ತಸ್ಮಾತ್ ಧನುರ್ಜ್ಯಾಸಂಸ್ಪರ್ಶಂ ಸ ವಿಷೇಹೇ ಮಹೇಶ್ವರಃ ।' (8.26.33,34 ಕು), 'ಏತೌ ದ್ವೌ ವಿಬುಧಶ್ರೇಷ್ಠೌ ಪ್ರಸಾದಕ್ರೋಧಜೌ ಸ್ಮೃತೌ । ತದಾದರ್ಶಿತಪಂಥಾನೌ ಸೃಷ್ಟಿಸಂಹಾರಕಾರಕೌ ॥' (12.350.19 ಕು) ಎಂದು ಅಂತರಾತ್ಮನಾಗಿರುವ ನಾರಾಯಣನಿಂದ ನಡೆಸಲ್ಪಟ್ಟು ಬ್ರಹ್ಮರುದ್ರರು ಸೃಷ್ಟಿಯನ್ನೂ ಸಂಹಾರವನ್ನೂ ಮಾಡುತ್ತಾರೆಂಬ ಭಾವ, ಮುಂದೆಯೂ, 'ಕುತಸ್ಸೃಷ್ಟಮಿದಂ ಸರ್ವಂ ಜಗತ್ ಸ್ಥಾವರಜಂಗಮಂ । ಪ್ರಳಯೇ ಚ ಕಮಪ್ಯೇತಿ ತನ್ನೋ ಬ್ರೂಹಿ

ಪಿತಾಮಹ ॥' (12.180.1 ಕು) ಎಂಬ ಪ್ರಶ್ನೆಗೆ 'ನಾರಾಯಣೋ ಜಗನ್ಮೂರ್ತಿಃ ಅನಂತಾತ್ಮಾ ಸನಾತನಃ ।' (12.180.11 ಕು) ಎಂದು ಉತ್ತರಿಸಿರುವದರಿಂದಲೂ 'ಋಷಯಃ ಪಿತರೋ ದೇವಾ ಮಹಾಭೂತಾನಿ ಧಾತವಃ । ಜಂಗಮಾಜಂಗಮಂ ಚೇದಂ ಜಗನ್ನಾರಾಯಣೋದ್ಭವಂ ॥' (13.254.140 ಕು) ಎಂಬುದರಿಂದಲೂ ಶ್ರೀಮನ್ನಾರಾಯಣನ ಸರ್ವಸ್ಮಾತ್ ಪರತ್ವ, ಜಗತ್ಕಾರಣತ್ವ ಮುಂತಾದವು ತಿಳಿಯುತ್ತದೆ. ಈತನ ಅಪ್ರಾಕೃತರೂಪ 'ನ ಭೂತಸಂಘಸಂಸ್ಥಾನೋ ದೇಹೋಽಸ್ಯ ಪರಮಾತ್ಮನಃ' (12.206.60 ಕು) ಎಂದು ಹೇಳಿದೆ. 'ದಿವ್ಯಂ ಸ್ಥಾನಮಜರಂ ಚಾಪ್ರಮೇಯಂ ದುರ್ವಿಜ್ಞೇಯಂ ಚಾಗಮೈರ್ಗಮ್ಯಮಾನಂ । ಗಚ್ಛ ಪ್ರಭೋ ರಕ್ಷ ಚಾಸ್ಮಾನ್ ಪ್ರಪನ್ನಾನ್ ಕಲ್ಪೇ ಕಲ್ಪೇ ಜಾಯಮಾನಃ ಸ್ವಮೂರ್ತ್ಯಾ ॥' (16.5.32 ಕು), 'ಕಾಲಂ ಸ ಪಚತೇ ತತ್ರ ನ ಕಾಲಸ್ತತ್ರ ವೈ ಪ್ರಭುಃ ।' (12.191.9 ಕು) ಎಂದು ಅಪ್ರಾಕೃತಸ್ಥಾನವು ಹೇಳಿದೆ. ಹಿತಸ್ವರೂಪವಾಗಿ, 'ಶುದ್ಧಭಾವಂ ಗತೋ ಭಕ್ತ್ಯಾ ಶಾಸ್ತ್ರಾದ್ವೇದ್ಮಿ ಜನಾರ್ದನಂ ।' (5.68.5 ಕು.), 'ನ ಸಂದೃಶೇ ತಿಷ್ಠತಿ ರೂಪಮಸ್ಯ ನ ಚಕ್ಷುಷಾ ಪಶ್ಯತಿ ಕಶ್ಚನೈನಂ । ಭಕ್ತ್ಯಾ ಚ ಧೃತ್ಯಾ ಚ ಸಮಾಹಿತಾತ್ಮಾ ಜ್ಞಾನಸ್ವರೂಪಂ ಪರಿಪಶ್ಯತೀಹ ॥' (12.229.69 ಕು) ಎಂದೂ, ಆನುಶಾಸನಿಕ ಪರ್ವದಲ್ಲಿರುವ ವಿಷ್ಣುಸಹಸ್ರನಾಮಾಧ್ಯಾಯದಲ್ಲಿ ಶ್ರೀಭೀಷ್ಮರ ವಚನವಾದ 'ಏಷ ಮೇ ಸರ್ವಧರ್ಮಾಣಾಂ ಧರ್ಮೋಽಧಿಕತಮೋ ಮತಃ । ಯದ್ಭಕ್ತ್ಯಾ ಪುಂಡರೀಕಾಕ್ಷಂ ಸ್ತವೈರರ್ಚೇನ್ನರಸ್ಸದಾ ॥ .... ಲೋಕಾಧ್ಯಕ್ಷಂ ಸ್ತುವನ್ನಿತ್ಯಂ ಸರ್ವದುಃಖಾತಿಗೋ ಭವೇತ್ ॥' (13.254.8,6 ಕು), 'ವಾಸುದೇವಾಶ್ರಯೋ ಮರ್ತ್ಯೋ ವಾಸುದೇವಪರಾಯಣಃ । ಸರ್ವಪಾಪವಿಶುದ್ಧಾತ್ಮಾ ಯಾತಿ ಬ್ರಹ್ಮ ಸನಾತನಂ ॥' (12.254.132 ಕು), 'ವಿಶ್ವೇಶ್ವರಮಜಂ ದೇವಂ ಜಗತಃ ಪ್ರಭವಾಪ್ಯಯಂ । ಭಜಂತಿ ಯೇ ಪುಷ್ಕರಾಕ್ಷಂ ನ ತೇ ಯಾಂತಿ ಪರಾಭವಂ ॥ (12.254.144 ಕು) ಮುಂತಾದುವುಗಳಿಂದ ಅಪುನರಾವೃತ್ತಿರೂಪವಾದ ಸಂಸಾರದಿಂದ ಬಿಡುಗಡೆಯಾಗಿ ಪರಮಾತ್ಮಾನುಭವವನ್ನು ಅಪ್ರಾಕೃತದೇಶದಲ್ಲಿ ಮಾಡುವುದೇ ಪರಮಪುರುಷಾರ್ಥವೆಂದಿರುವುದರಿಂದ ತತ್ತ್ವ, ಹಿತ, ಪುರುಷಾರ್ಥಗಳು ವಿಶದವಾದವು. ವಿಸ್ತರಕ್ಕೆ ಹೆದರಿ ನಿಲ್ಲಿಸಲಾಗುವುದು.

ಈಗ **ಬ್ರಹ್ಮಸೂತ್ರಗಳಿಂದ** ವಿಶಿಷ್ಟಾದ್ವೈತಸಿದ್ಧಿ ಚಿಂತಿಸಲಾಗುವುದು.

ವೇದವ್ಯಾಸಪ್ರಣೀತವಾದ ವೇದಾಂತಶಾಸ್ತ್ರದಲ್ಲಿ 545 ಸೂತ್ರಗಳು, 156 ಅಧಿಕರಣಗಳಾಗಿ, 16 ಪಾದಗಳಲ್ಲಿ ಅಡಗಿವೆ. ಶಾರೀರಕಮೀಮಾಂಸೆಯೆಂಬ ಈ ಸೂತ್ರಗಳಿಗೆ ಭಗವದ್ರಾಮಾನುಜರ ಶ್ರೀಭಾಷ್ಯದ ಅನುಸಾರವಾಗಿ ಸಂಗ್ರಹಾರ್ಥವೂ, ತತ್ತ್ವ, ಹಿತ, ಪುರುಷಾರ್ಥ ಪ್ರತಿಪಾದನೆಯೂ ಈಗ ವಿವೇಚಿಸಲ್ಪಡುವುವು.

ಬ್ರಹ್ಮಸೂತ್ರಗಳ 4 ಅಧ್ಯಾಯಗಳಲ್ಲಿ ಮೊದಲನೇಯದು ಬ್ರಹ್ಮದ ಜಗತ್ಕಾರಣತ್ವವನ್ನು ಅಯೋಗವ್ಯವಚ್ಛೇದ ಅಂಶದೊಡನೆ (ಬ್ರಹ್ಮವು ಯಾವಾಗಲೂ ಜಗತ್ಕಾರಣವೇ ಎಂದು) ಸ್ಥಾಪಿಸುತ್ತದೆ. ಎರಡನೇಯದು, ಬ್ರಹ್ಮದ ಜಗತ್ಕಾರಣಕ್ಕೆ ಇತರ ಸಿದ್ಧಾಂತಗಳಿಂದ ಬರುವ ಶಂಕಾಪರಿಹಾರದೊಡನೆ ಅನ್ಯಯೋಗವ್ಯವಚ್ಛೇದ ಅಂಶದೊಡನೆ (ಬ್ರಹ್ಮೇತರ ವಸ್ತು ಯಾವುದೂ ಕಾರಣವಲ್ಲ ಎಂದು) ಸಮರ್ಥಿಸಲಾಗುವುದು. ಈ ಎರಡು ಅಧ್ಯಾಯಗಳಿಗೆ ವಿಷಯದ್ವಿಕವೆಂದು ಹೆಸರು.

ಮೂರನೇಯ ಅಧ್ಯಾಯದಲ್ಲಿ ಬ್ರಹ್ಮಪ್ರಾಪ್ತಿಸಾಧನವು ಪೂರ್ಣವಾಗಿ ವಿವರಿಸಲ್ಪಟ್ಟಿದೆ. ನಾಲ್ಕನೇಯ ಅಧ್ಯಾಯದಲ್ಲಿ, ಮೋಕ್ಷದ ವಿಷಯ ಪೂರ್ಣವಾಗಿ ಪ್ರತಿಪಾದಿತವಾಗಿದೆ. ಈ ಎರಡು ಅಧ್ಯಾಯಗಳಿಗೆ ವಿಷಯಿದ್ವಿಕವೆಂದು ಹೆಸರು.

ಇನ್ನು ಈ ಶಾಸ್ತ್ರದಲ್ಲಿ ಆಮೂಲಾಗ್ರ ಸಗುಣಬ್ರಹ್ಮವಿಚಾರವೇ ಇದ್ದು ಪರಬ್ರಹ್ಮದ ಸಮಸ್ತಹೇಯರಹಿತತ್ವ, ಸಮಸ್ತ-ಮಂಗಳಗುಣಾಕರತ್ವ ಎಂಬ ಎರಡು ಗುರುತುಗಳು (ಉಭಯಲಿಂಗ) ಸ್ಥಾಪಿತವಾಗಿದೆ. ಒಂದೊಂದು ಪಾದದಲ್ಲೂ ನಿಷ್ಕೃಷ್ಟವಾಗಿರುವ ಬ್ರಹ್ಮಗುಣಗಳು ಹೀಗಿವೆ.

1. ಜಗತ್ಸೃಷ್ಟಿಕಾರಣತ್ವ, 2. ಚೇತನಾಚೇತನಶರೀರಿತ್ವ, 3. ತನ್ನಲ್ಲೇ ನೆಲೆಸಿರುವಿಕೆ, 4. ಎಲ್ಲೆಯಿಲ್ಲದ ಮಾಹಾತ್ಮ್ಯ, 5. ವಿರೋಧವಿಲ್ಲದಿರುವಿಕೆ, 6. ಆಶ್ರಿತರಕ್ಷಕತ್ವ, 7. ಆಕಾಶ, ಆತ್ಮ ಮುಂತಾದವುಗಳ ಕಾರಣತ್ವ, 8. ಇಂದ್ರಿಯಗಳ ಸ್ರಷ್ಟೃತ್ವ, 9. ಸಂಸಾರವನ್ನು ನಿರ್ವಹಿಸುವಿಕೆ, 10. ದೋಷರಹಿತತ್ವ ಮುಂತಾದವು, 11. ಅನೇಕವಿಧಬ್ರಹ್ಮವಿದ್ಯೆಗಳಿಂದ ಉಪಾಸಿಸಲ್ಪಡುವಿಕೆ, 12. ವರ್ಣಾಶ್ರಮಕರ್ಮಾರಾಧ್ಯತ್ವ, 13. ಪಾಪಗಳನ್ನು ಕಳೆಯುವಿಕೆ, 14. ಬ್ರಹ್ಮನಾಡಿಯಿಂದ ಉತ್ಕ್ರಮಣ ಮಾಡಿಸುವಿಕೆ, 15. ಅರ್ಚಿರಾದಿಗತಿಯಲ್ಲಿ ಆತಿವಾಹಕನಾಗುವಿಕೆ, ಮತ್ತು 16. ತನ್ನ ನಿರತಿಶಯಾನಂದವನ್ನು ಎಲ್ಲ ಮುಕ್ತ,ನಿತ್ಯರೊಡನೆ ಸಮನಾಗಿ ಹಂಚಿ ಅನುಭವಿಸುವಿಕೆ ಎಂಬುವು.

ಇನ್ನು ಈ ಸೂತ್ರಗಳ ದ್ವಾರಾ ಚಿದಚಿದೀಶ್ವರ ತತ್ತ್ವ ಮುಂತಾದ ವಿಶೇಷ ತಿಳಿಯುವ ಅಂಶವನ್ನು ಸಂಗ್ರಹಿಸಲಾಗುವುದು.

ಅದರಲ್ಲಿ ಚೇತನ, ಅಚೇತನ ಮತ್ತು ಈಶ್ವರರೆಂಬ ತತ್ತ್ವತ್ರಯಸಿದ್ಧಿಯು, 'ನೇತರೋಽನುಪಪತ್ತೇಃ' (1.1.17),

'ಭೇದವ್ಯಪದೇಶಾತ್' (1.3.4), 'ಅನುಪಪತ್ತೇಸ್ತು ನ ಶಾರೀರಃ' (1.2.3), 'ಕರ್ಮಕರ್ತೃವ್ಯಪದೇಶಾಚ್ಚ' (1.2.4), 'ಶಬ್ದವಿಶೇಷಾತ್' (1.2.5), 'ಸಂಭೋಗಪ್ರಾಪ್ತಿರಿತಿ ಚೇನ್ನ ವೈಶೇಷ್ಯಾತ್' (1.2.8), 'ನ ಚ ಸ್ಮಾರ್ತಮತದ್ಧರ್ಮಾ-ಭಿಲಾಪಾಚ್ಛಾರೀರಶ್ಚ' (1.2.19), 'ಉಭಯೇಽಪಿ ಹಿ ಭೇದೇನೈನಮಧೀಯತೇ' (1.2.20), 'ವಿಶೇಷಣಭೇದ-ವ್ಯಪದೇಶಾಭ್ಯಾಂ ಚ ನೇತರೌ' (1.2.23), 'ಮುಕ್ತೋಪಸೃಪ್ಯವ್ಯಪದೇಶಾಚ್ಚ' (1.3.2), 'ಸ್ಥಿತ್ಯದನಾಭ್ಯಾಂ ಚ' (1.3.6) 'ಇತರಪರಾಮರ್ಶಾತ್ಸ ಇತಿ ಚೇನ್ನಾಸಂಭವಾತ್' (1.3.17), 'ಉತ್ತರಾಚ್ಚೇದಾವಿರ್ಭೂತಸ್ವರೂಪಸ್ತು' (1.3.18), 'ಸುಷುಪ್ತ್ಯುತ್ಕ್ರಾನ್ತ್ಯೋಃ ಭೇದೇನ' (1.3.43), 'ಪತ್ಯಾದಿಶಬ್ದೇಭ್ಯಃ' (1.3.44), 'ಅಧಿಕಂ ತು ಭೇದನಿರ್ದೇಶಾತ್' (2.1.22), 'ಅಧಿಕೋಪದೇಶಾತ್ತು ಬಾದರಾಯಣಸ್ಯೈವಂ ತದ್ದರ್ಶನಾತ್' (3.4.8), 'ಜಗದ್ವ್ಯಾಪಾರವರ್ಜಂ ಪ್ರಕರಣಾತ್ ಅಸನ್ನಿಹಿತತ್ವಾಚ್ಚ' (4.4.17), 'ಭೋಗಮಾತ್ರಸಾಮ್ಯಲಿಂಗಾಚ್ಚ' (4.4.21) ಮುಂತಾದವುಗಳಲ್ಲಿ ಏರ್ಪಡುತ್ತದೆ.

ಅಂದರೆ, ಅವುಗಳಲ್ಲಿ ಅಚಿತ್ತಿನ ಸ್ವರೂಪ ಸ್ವಭಾವಗಳಿಗಿಂತ ಅದರ ಆತ್ಮನಾಗಿರುವ ಚಿತ್ತತ್ತ್ವವಾದ ಜೀವಾತ್ಮನು ವಿಲಕ್ಷಣನು ಮತ್ತು ಬದ್ಧ, ಮುಕ್ತ, ನಿತ್ಯರೆಂಬ ಮೂರು ವಿಧ ಜೀವಾತ್ಮರಿಗಿಂತ ಅವರ ಧಾರಕ, ನಿಯಾಮಕ ಮತ್ತು ಶೇಷಿಯಾದ್ದರಿಂದ ಆತ್ಮನಾಗಿ ವಿಲಕ್ಷಣನಾದ ಪರಮಾತ್ಮನು ಹೇಯಪ್ರತ್ಯನೀಕತ್ವ, ಕಲ್ಯಾಣಗುಣಾಕರತ್ವ ಗುಣಗಳಿಂದ ಅತ್ಯಂತ ವಿಲಕ್ಷಣನೆಂದು ಏರ್ಪಡುತ್ತದೆ. ಈ ಭೇದಗಳು ಸ್ವಾಭಾವಿಕಗಳೆಂದೂ ಸಿದ್ಧಿಸುತ್ತದೆ. ಬ್ರಹ್ಮದ ಜಗತ್ಕಾರಣತ್ವ, ಸಮಸ್ತಚೇತನಾ-ಚೇತನರೂಪವಾದ ಜಗತ್ತಿನ ಕಾರ್ಯತ್ವ, ಪರಮಾತ್ಮಶರೀರತ್ವ ಮುಂತಾದವು, 'ತದನನ್ಯತ್ವಂ ಆರಂಭಣಶಾಬ್ದಾದಿಭ್ಯಃ' (2.1.15), 'ಜನ್ಮಾದ್ಯಸ್ಯ ಯತಃ' (1.1.2) ಮುಂತಾದವು. 'ಪ್ರಕೃತಿಶ್ಚ ಪ್ರತಿಜ್ಞಾದೃಷ್ಟಾಂತಾನುಪರೋಧಾತ್' (1.4.23), 'ಅಭಿಧ್ಯೋಪದೇಶಾಚ್ಚ' (1.4.24), 'ಸಾಕ್ಷಾಚ್ಚೋಭಯಾಮ್ನಾನಾತ್' (1.4.25), 'ಆತ್ಮಕೃತೇಃ' (1.4.26) ಎಂಬಲ್ಲಿ ಅಭಿನ್ನೋಪಾದಾನನಿಮಿತ್ತತ್ವವೂ, 'ನ ತು ದೃಷ್ಟಾಂತಭಾವಾತ್' (2.1.9), 'ಅವಸ್ಥಿತೇರಿತಿ ಕಾಶಕೃತ್ಸ್ನಃ' (1.4.22) ಮುಂತಾದೆಡೆ ಶರೀರಾತ್ಮಭಾವವೂ, ಕರ್ಮಕೃತದೇಹಾದಿಭೇದ 'ನ ಕರ್ಮಾವಿಭಾಗಾದಿತಿ ಚೇತ್ ನಾನಾದಿತ್ವಾತ್ ಉಪಪದ್ಯತೇ ಚಾಪ್ಯುಪಲಭ್ಯತೇ ಚ' (2.1.35) ಎಂಬಲ್ಲೂ, ಆತ್ಮನಿತ್ಯತ್ವ, 'ನಾತ್ಮಾ ಶ್ರುತೇಃ ನಿತ್ಯತ್ವಾಚ್ಚ ತಾಭ್ಯಃ' (2.3.18) ಎಂದೂ, ಆತನ ಜ್ಞಾತೃತ್ವ ಮುಂತಾದವು 'ಜ್ಞೋಽತ ಏವ' (2.3.19) ಎಂಬ ಅಧಿಕರಣದಲ್ಲೂ, ಅವನ ಪರಮಾತ್ಮಾಧೀನ ಕರ್ತೃತ್ವ 'ಕರ್ತಾ ಶಾಸ್ತ್ರಾರ್ಥವತ್ತ್ವಾತ್' (2.3.33) ಮತ್ತು 'ಪರಾತ್ತು ತಚ್ಛ್ರುತೇಃ' (2.3.40) ಎಂಬ ಅಧಿಕರಣಗಳಲ್ಲಿಯೂ, ಜೀವನು ಪರಮಾತ್ಮನ ಅಂಶಭೂತನೆಂಬುದು 'ಅಂಶೋ ನಾನಾವ್ಯಪದೇಶಾತ್ ಅನ್ಯಥಾ ಚಾಪಿ ದಾಶಕಿತವಾದಿತ್ವಮಧೀಯತ ಏಕೇ' (2.3.42) ಎಂಬ ಅಧಿಕರಣದಲ್ಲಿ ನಿಷ್ಕೃಷ್ಟ.

ಹೀಗೆ ತತ್ತ್ವನಿರ್ಧಾರಣವಿದ್ದು, ಹಿತದ ವಿಷಯದಲ್ಲಿ ಅನೇಕ (32) ವಿಧವಾದ ಬ್ರಹ್ಮವಿದ್ಯೆಗಳನ್ನೂ, ಅವುಗಳಿಗೆ ಅಂಗವಾದ ವರ್ಣಾಶ್ರಮ ಕರ್ಮಾನುಷ್ಠಾನವನ್ನೂ ಗುಣೋಪಸಂಹಾರಪಾದ (3.3) ಮತ್ತು ಅಂಗಪಾದದಲ್ಲಿ (3.4) ವಿವರಿಸಿದೆ. ಇಲ್ಲಿ 'ನಾನಾ ಶಬ್ದಾದಿಭೇದಾತ್' (3.3.56), 'ವಿಕಲ್ಪೋಽವಿಶಿಷ್ಟಫಲತ್ವಾತ್' (3.3.57) ಎಂಬ ಸೂತ್ರಗಳಲ್ಲಿ, ಭಕ್ತಿಯೋಗ, ಪ್ರಪತ್ತಿ ಎಂಬ ಉಪಾಯಗಳು ಸೂಚಿಸಲ್ಪಟ್ಟಿವೆ. 'ವೇದ', 'ಉಪಾಸೀತ', 'ಧ್ಯಾಯೀತ' ಇತ್ಯಾದಿ ಉಪಾಸನಾ-ಪರವಾದ ವಿಧಿಗಳಂತೆ 'ಆತ್ಮಾನಂ ಯುಂಜೀತ' (ತೈ.ಆ. 6.78), 'ಶರಣಮಹಂ ಪ್ರಪದ್ಯೇ' (ಶ್ವೇ.ಉ. 6.35), 'ತಸ್ಮಾನ್ನ್ಯಾಸಮೇಷಾಂ ತಪಸಾಮತಿರಿಕ್ತಮಾಹುಃ', ಎಂದೂ 'ಏತದ್ವೈ ಮಹೋಪನಿಷದಂ ದೇವಾನಾಂ ಗುಹ್ಯಂ ಯ ಏವಂ ವೇದ ಬ್ರಹ್ಮಣೋ ಮಹಿಮಾನಮಾಪ್ನೋತಿ' (ತೈ.ಆ. 6.78) ಎಂದೂ ಪ್ರಶಂಸಿಸಲ್ಪಟ್ಟಿರುವ ಪ್ರಪತ್ತಿಯೂ ತದಧಿಕಾರಿಗೆ ವಿಹಿತವಾಗಿದೆ.

ಹೀಗೆ ಹಿತಸ್ವರೂಪ ಪ್ರತಿಪಾದನಾನಂತರ ಪುರುಷಾರ್ಥ ವಿಷಯವಾಗಿ 'ಭೋಗಮಾತ್ರಸಾಮ್ಯಲಿಂಗಾಚ್ಚ' (4.4.21), 'ಅನಾವೃತ್ತಿಶ್ಶಬ್ದಾದನಾವೃತ್ತಿಶ್ಶಬ್ದಾತ್' (4.4.22) ಎಂಬ ಸೂತ್ರಗಳಲ್ಲಿ, 'ಸಂಪದ್ಯಾವಿರ್ಭಾವಃ ಸ್ವೇನಶಬ್ದಾತ್' (4.4.1) ಮುಂತಾದೆಡೆ ನಿರ್ಣೀತವಾದ ಮುಕ್ತನ ಬ್ರಹ್ಮಾನುಭವ ಪ್ರಕಾರವು ಸಂಗೃಹೀತವಾಗಿದೆ.

ಈಗ **ಭಗವದ್ಗೀತೆಯ** ಮೂಲಕ ಈ ಸಿದ್ಧಾಂತಸಿದ್ಧಿಯನ್ನು ಪರಿಶೀಲಿಸೋಣ.

ಇದೂ ಸಹ ಮಹಾಭಾರತವೆಂಬ 'ಪಂಚಮ' ವೇದದ 'ಉಪನಿಷ'ತ್ತಾಗಿಯೂ, ಸಾಕ್ಷಾತ್ ಭಗವಂತನ ವದನಾರವಿಂದದಿಂದ ಉಂಟಾಗಿರುವುದರಿಂದಲೂ ಅಸ್ಥಾನದಲ್ಲಿ ಸ್ನೇಹ, ಕಾರುಣ್ಯಗಳು ಉಂಟಾಗಿ ವಿಷಣ್ಣನಾಗಿದ್ದ ಅರ್ಜುನನಿಗೆ ತತ್ತ್ವವನ್ನು ತಿಳಿಸಲು ಪ್ರವೃತ್ತವಾದ್ದರಿಂದ ಸ್ಮೃತಿಗಳ ಪೈಕಿ ಅಗ್ರಸ್ಥಾನವನ್ನು ಪಡೆದಿದೆ. ಬ್ರಹ್ಮಸೂತ್ರದಲ್ಲಿ ಹಲವೆಡೆ ಗೀತಾ-ವಚನಗಳು ಅಭಿಪ್ರೇತವಾಗಿವೆ.

ಇಲ್ಲಿ ತತ್ತ್ವತ್ರಯಪ್ರತಿಪಾದನವು ಅವುಗಳ ವೈಲಕ್ಷಣ್ಯಪೂರ್ವಕವಾಗಿ 'ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವ

ಚ । ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ ॥ ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ । ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ ॥ ಯಸ್ಮಾತ್ಕ್ಷರಮತೀತೋಽಹಂ ಅಕ್ಷರಾದಪಿ ಚೋತ್ತಮಃ । ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ ॥' (15.16-18) ಎಂಬಲ್ಲಿ ಹೇಳಿದೆ.

ಈ ಭೇದಗಳು ನಿರುಪಾಧಿಕವೆಂಬುದು, 'ಇದಂ ಜ್ಞಾನಮುಪಾಶ್ರಿತ್ಯ ಮಮ ಸಾಧರ್ಮ್ಯಮಾಗತಾಃ । ಸರ್ಗೇಽಪಿ ನೋಪ-ಜಾಯಂತೇ ಪ್ರಳಯೇ ನ ವ್ಯಥಂತಿ ಚ ॥' (14.2) ಎಂದು ಹೇಳಲಾಗಿದೆ. ಅಂದರೆ, ಮುಕ್ತನೂ ಪರಮಾತ್ಮಭಿನ್ನನೆಂಬುದ-ರಿಂದ, ಅವಿದ್ಯಾ ಉಪಾಧಿಗಳಿಂದ ಜನಿಸಿದ್ದಲ್ಲ ಚಿದಚಿದೀಶ್ವರಭೇದವೆಂಬುದು ಭಾವ. ಜಗದ್ಬ್ರಹ್ಮಗಳ ಅನನ್ಯತ್ವ 'ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ' (13.2) ಎಂಬಲ್ಲಿ ತಿಳಿಯುತ್ತೆ. ಜೀವನಲ್ಲಿನ ಪರಮಾತ್ಮನ ಅಂಶತ್ವವು 'ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ' (15.7) ಎಂಬುದರಿಂದ ವ್ಯಕ್ತ. ನಿತ್ಯತ್ವವು 'ಪ್ರಕೃತಿಂ ಪುರುಷಂ ಚೈವ ವಿದ್ಧ್ಯನಾದೀ ಉಭಾವಪಿ ।' (13.14) ಎಂದೂ, 'ನ ಜಾಯತೇ ಮ್ರಿಯತೇ ವಾ ಕದಾಚಿತ್ ನಾಯಂ ಭೂತ್ವಾ ಭವಿತಾ ವಾ ನ ಭೂಯಃ । ಅಜೋ ನಿತ್ಯಃ ಶಾಶ್ವತೋಽಯಂ ಪುರಾಣಃ ನ ಹನ್ಯತೇ ಹನ್ಯಮಾನೇ ಶರೀರೇ ॥' (2.20) ಎಂಬಲ್ಲಿಯೂ ಸ್ಪಷ್ಟ.

ಪರಮಾತ್ಮಾಯತ್ತವಾದ ಕರ್ತೃತ್ವವು 'ಸರ್ವಸ್ಯ ಚಾಽಹಂ ಹೃದಿ ಸನ್ನಿವಿಷ್ಟಃ ಮತ್ತಃ ಸ್ಮೃತಿಃ ಜ್ಞಾನಮಪೋಹನಂ ಚ ।' (15.15) ಎಂಬಲ್ಲಿ ತಿಳಿಯುತ್ತೆ. ಇಲ್ಲಿ ಈಶ್ವರನ ನಿತ್ಯತ್ವ, ಪಾರಮ್ಯವೂ ಅರಿಯತಕ್ಕದ್ದು. 'ಯೋ ಮಾಮಜಮನಾದಿಂ ಚ ವೇತ್ತಿ ಲೋಕಮಹೇಶ್ವರಂ' (10.9), 'ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಳಯಸ್ತಥಾ ॥ ಮತ್ತಃ ಪರತರಂ ನಾನ್ಯತ್' (7.6,7) ಎಂಬಲ್ಲಿ ಇದು ತಿಳಿಯುತ್ತೆ.

ಇಂತಹ ಈಶ್ವರನ ಕೃಪೆಯಿಂದಲೇ ಸಾಧನಸಿದ್ಧಿ ಎಂಬುದು 'ನಾಹಂ ವೇದೈರ್ನ ತಪಸಾ ನ ದಾನೇನ ನ ಚೇಜ್ಯಯಾ । ಶಕ್ಯ ಏವಂವಿಧೋ ದ್ರಷ್ಟುಂ ದೃಷ್ಟವಾನಸಿ ಮಾಂ ಯಥಾ ॥' (11.53), 'ಭಕ್ತ್ಯಾ ತ್ವನನ್ಯಯಾ ಶಕ್ಯಃ' (11.54) ಎಂಬಲ್ಲಿ ಹೇಳಿದೆ.

ಅವನೇ ಕರ್ಮಫಲಪ್ರದನೆಂಬುದು 'ಸ ತಯಾ ಶ್ರದ್ಧಯಾ ಯುಕ್ತಃ ತಸ್ಯಾರಾಧನಮೀಹತೇ । ಲಭತೇ ಚ ತತಃ ಕಾಮಾನ್ ಮಯೈವ ವಿಹಿತಾನ್ ಹಿ ತಾನ್ ॥' (7.22), 'ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ' (9.24), 'ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ' (18.46), 'ತತ್ಪ್ರಸಾದಾತ್ ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಂ' (18.62) ಮುಂತಾದರಿಂದ ಪರಮಪುರುಷನೇ ಚತುರ್ವಿಧ ಪುರುಷಾರ್ಥಗಳನ್ನೂ ಪ್ರೀತನಾಗಿ ಕೊಡುವ-ನೆಂಬುದು ತಿಳಿಯುತ್ತೆ.

ಉಪಾಸನರೂಪ ಉಪಾಯವು 'ಯೇ ತ್ವಕ್ಷರಮನಿರ್ದೇಶ್ಯಂ ಅವ್ಯಕ್ತಂ ಪರ್ಯುಪಾಸತೇ' (12.3), 'ಮಾಂ ಧ್ಯಾಯಂತ ಉಪಾಸತೇ ॥ ತೇಷಾಂ ಅಹಂ ಸಮುದ್ಧರ್ತಾ' (12.6,7), 'ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು' (18.65), 'ಸತತಂ ಕೀರ್ತಯಂತೋ ಮಾಂ' (8.5) ಎಂದೆಲ್ಲಾ ವಿಸ್ತಾರವಾಗಿ ಪ್ರೀತಿಪೂರ್ವಕವಾದ ಅನುಧ್ಯಾನವಾಗಿ ವಿಧಿಸಿದೆ.

ಶರಣಾಗತಿಯನ್ನು ವಿಶೇಷವಾಗಿ ಚರಮಶೋಕದಲ್ಲಿ, ಉಪನಿಷತ್ತು ಕೊನೆಯಲ್ಲಿ, 'ಏತದ್ವೈ ಮಹೋಪನಿಷದಂ ದೇವಾನಾಂ ಗುಹ್ಯಂ' ಎಂದೂ, 'ನ್ಯಾಸಮೇಷಾಂ ತಪಸಾಂ ಅತಿರಿಕ್ತಂ' (ತೈ.ಆ. 6.78) ಎಂದೂ ಚರಮೋಪಾಯವಾಗಿ (ಸತ್ಯ, ತಪಸ್ಸು, ದಮ, ಶಮ, ದಾನ, ಧರ್ಮ, ಪ್ರಜೆ, ಅಗ್ನಿಗಳು, ಅಗ್ನಿಹೋತ್ರ, ಯಜ್ಞ, ಮಾನಸ ಎಂಬಿವುಗಳ ನಂತರ) ನ್ಯಾಸವನ್ನು ಹೇಳಿದಂತೆ ಉಪದೇಶಿಸಿರುವುದರಿಂದ ಅತ್ಯಂತ ಗ್ರಾಹ್ಯ. 'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ । ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥' (18.66) ಎಂಬುದು ವಿಧಿ. ತದಧಿಕಾರಿಗೆ ಇಲ್ಲಿ ಭಕ್ತಿಯೋಗ (ಉಪಾಸನ)ಕ್ಕೆ ಅಂಗವಾಗಿ ಕರ್ಮಯೋಗ, ಜ್ಞಾನಯೋಗಗಳು ವಿಸ್ತಾರವಾಗಿ ಉಪದಿಷ್ಟವಾಗಿದ್ದು, ವರ್ಣಾಶ್ರಮಧರ್ಮ ಅಂಗಪುರಸ್ಸರವಾಗಿರುವ ಭಕ್ತಿಯೋಗವೆಂಬ ಜ್ಞಾನವಿಶೇಷವು ಮುಕ್ತಿಗೆ ಉಪಾಯವೆಂಬುದು ಈ ಶಾಸ್ತ್ರದಲ್ಲಿ ಸ್ಪಷ್ಟ.

ಇಂತಹ ಉಪಾಯದಿಂದ ಲಭಿಸುವ ಪರಮಪುರುಷಾರ್ಥವೂ 'ಪ್ರಿಯೋ ಹಿ ಜ್ಞಾನಿನೋಽತ್ಯರ್ಥಂ ಅಹಂ ಸ ಚ ಮಮ ಪ್ರಿಯಃ ॥ ಉದಾರಾಃ ಸರ್ವ ಏವೈತೇ ಜ್ಞಾನೀ ತ್ವಾತ್ಮೈವ ಮೇ ಮತಂ । ಆಸ್ಥಿತಃ ಸ ಹಿ ಯುಕ್ತಾತ್ಮಾ ಮಾಮೇವಾನುತ್ತಮಾಂ ಗತಿಂ ॥ ಬಹೂನಾಂ ಜನ್ಮನಾಂ ಅಂತೇ ಜ್ಞಾನವಾನ್ ಮಾಂ ಪ್ರಪದ್ಯತೇ । ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ ॥' (7.17-19), 'ಮಾಂ ಚ ಯೋಽವ್ಯಭಿಚಾರೇಣ ಭಕ್ತಿಯೋಗೇನ ಸೇವತೇ । ಸ ಗುಣಾನ್ ಸಮತೀತ್ಯೈತಾನ್ ಬ್ರಹ್ಮಭೂಯಾಯ ಕಲ್ಪತೇ ॥ ಬ್ರಹ್ಮಣೋ ಹಿ ಪ್ರತಿಷ್ಠಾಹಮಮೃತಸ್ಯಾವ್ಯಯಸ್ಯ ಚ । ಶಾಶ್ವತಸ್ಯ ಚ ಧರ್ಮಸ್ಯ

ಸುಖಸ್ಯೈಕಾಂತಿಕಸ್ಯ ಚ ॥' (14.26,27) ಎಂಬ ಕಡೆಗಳಲ್ಲಿ ವಿವೃತವಾಗಿದೆ.

ಈ ಪರಮಾತ್ಮಾನುಭವ ಅನಂತವಾದುದೆಂದು, 'ಮಾಮುಪೇತ್ಯ ಪುನರ್ಜನ್ಮ ದುಃಖಾಲಯಮಶಾಶ್ವತಂ । ನಾಪ್ನುವಂತಿ ಮಹಾತ್ಮಾನಃ ಸಂಸಿದ್ಧಿಂ ಪರಮಾಂ ಗತಾಃ ॥ ಆಬ್ರಹ್ಮಭುವನಾ ಲೋಕಾಃ ಪುನರಾವರ್ತಿನೋಽರ್ಜುನ । ಮಾಮುಪೇತ್ಯ ತು ಕೌಂತೇಯ ಪುನರ್ಜನ್ಮ ನ ವಿದ್ಯತೇ ॥ (8.15,16) ಎಂಬಲ್ಲಿ ಹೇಳಿದೆ.

ಸರ್ವಶಬ್ದವಾಚ್ಯತ್ವವನ್ನು ಅಪರ್ಯವಸಾನವೃತ್ತಿಯಿಂದ ಹೇಳಿರುವುದು ಎಲ್ಲವೂ ಬ್ರಹ್ಮಾತ್ಮಕವೆಂಬುದರಿಂದ ಸಂಗತ-ವೆಂದು 'ಭೂಮಿರಾಪೋಽನಲೋ ವಾಯುಃ ಖಂ ಮನೋ ಬುದ್ಧಿರೇವ ಚ । ಅಹಂಕಾರ ಇತೀಯಂ ಮೇ ಭಿನ್ನಾ ಪ್ರಕೃತಿರಷ್ಟಧಾ ॥ ಅಪರೇಯಮಿತಸ್ತ್ವನ್ಯಾಂ ಪ್ರಕೃತಿಂ ವಿದ್ಧಿ ಮೇ ಪರಾಂ । ಜೀವಭೂತಾಂ ಮಹಾಬಾಹೋ ಯಯೇದಂ ಧಾರ್ಯತೇ ಜಗತ್ ॥' (7.4,5), 'ಪ್ರಕೃತಿಂ ಸ್ವಾಮವಷ್ಟಭ್ಯ ವಿಸೃಜಾಮಿ ಪುನಃಪುನಃ' (9.8), 'ಮಯಾಧ್ಯಕ್ಷೇಣ ಪ್ರಕೃತಿಃ ಸೂಯತೇ ಸಚರಾಚರಂ' (9.10) ಮುಂತಾದವುಗಳಲ್ಲಿ ಪ್ರಕೃತಿಯು ಈಶ್ವರಶರೀರವಾದ್ದರಿಂದ ಅದರ ಪರಿಣಾಮಗಳ ವಾಚಕಗಳೂ ಆತ್ಮಪರ್ಯಂತವೂ ನಂತರ ಪರಮಾತ್ಮನವರೆಗೂ ಬೋಧಿಸುತ್ತವೆ. 'ವೇದೈಶ್ಚ ಸರ್ವೈರಹಮೇವ ವೇದ್ಯಃ' (15.15) ಎಂಬಲ್ಲಿಯೂ ಇದು ವಿವಕ್ಷಿತ.

ಈಶ್ವರನ ಕರ್ಮಾನುಗುಣವಾಗಿ ಸಂಸಾರಬಂಧಕತ್ವವು 'ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ । ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿ ತೇ ॥' (7.14) ಎಂದು ಹೇಳಿದೆ. ಅವನ ಸರ್ವಾಂತರಾತ್ಮವು 'ಮಯಾ ತತಮಿದಂ ಸರ್ವಂ ಜಗದವ್ಯಕ್ತಮೂರ್ತಿನಾ । ಮತ್ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ ॥' (9.4), 'ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋ ಜಗತ್' (10.42), 'ಈಶ್ವರಸ್ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ । ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ।।' (18.61) ಎಂಬಲ್ಲಿ ವಿಶದ.

ಧರ್ಮಶಾಸ್ತ್ರಗ್ರಂಥಗಳೂ ಸ್ಮೃತಿಗಳಲ್ಲಿ ಸೇರಿವೆ. ಇವಲ್ಲಿ ಮುಖ್ಯವಾದವು ಮನುಸ್ಮೃತಿ, ಯಾಜ್ಞವಲ್ಕ್ಯಸ್ಮೃತಿ ಮುಂತಾದವು. ಆಪಸ್ತಂಬ, ಬೋಧಾಯನ ಮುಂತಾದ ಮಹರ್ಷಿಗಳೂ ಧರ್ಮಸೂತ್ರಗಳನ್ನು ರಚಿಸಿದ್ದು ಅವೂ ಧರ್ಮಶಾಸ್ತ್ರಗಳೆನಿಸುವುವು. ಈಗ ಮುಖ್ಯವಾಗಿ ಮನುಸ್ಮೃತಿಯನ್ನೂ ಅಲ್ಲಲ್ಲಿ ಬೇರೆ ಉಲ್ಲೇಖಗಳನ್ನೂ ಸಿದ್ಧಾಂತಾರ್ಥದ ಸ್ಪಷ್ಟತೆಗಾಗಿ ಕೊಡಲಾಗುವುದು.

ವೇದದಲ್ಲೇ 'ಯದ್ವೈ ಕಿಂ ಚ ಮನುರವದತ್ತದ್ಭೇಷಜಂ' (ತೈ.ಸಂ. 2.2.54), 'ಯಥಾ ಮನುರ್ಮನುಷ್ಯಾಣಾಮೇವಂ ಭವತಿ' (ತೈ.ಸಂ. 7.5.41), 'ಮನುರ್ವೈ ಯತ್ಕಿಂಚಿದವದತ್ ತದ್ಭೇಷಜಂ ಭೇಷಜತಾಯಾಃ' (ತಾಂಡ್ಯಬ್ರಾಹ್ಮಣ 12.118) ಎಂದು ಮನುವಿನ ಶ್ರೈಷ್ಠ್ಯ ಹೇಳಿದ್ದು, ಸೂತ್ರಕಾರರೂ, '...ಅನ್ಯಸ್ಮೃತ್ಯನವಕಾಶದೋಷಪ್ರಸಂಗಾತ್' (2. 1.2) ಎಂಬಲ್ಲಿ, ಮನುಸ್ಮೃತಿ ಮುಂತಾದವನ್ನು ತತ್ತ್ವಾರ್ಥಜ್ಞಾನಕ್ಕೆ ಸಹಾಯಕವಾಗಿ ಹೇಳಿರುವುದರಿಂದ ಇದನ್ನು ಉದಾಹರಿಸಲಾಗುವುದು.

ತತ್ತ್ವತ್ರಯವನ್ನೂ ಪ್ರತಿಪಾದಿಸುವ ಈ ಮನುಸ್ಮೃತಿಯಲ್ಲಿ ಪ್ರಾರಂಭದಲ್ಲೇ ಜಗತ್ಸೃಷ್ಟಿ ಪ್ರಸ್ತುತವಾಗಿದ್ದು, ಜಗತ್ಕಾರಣ ನಾರಾಯಣನೆಂಬುದು 'ಆಪೋ ನಾರಾ ಇತಿ ಪ್ರೋಕ್ತಾಃ ಆಪೋ ವೈ ನರಸೂನವಃ । ತಾ ಯದಸ್ಯಾಯನಂ ಪೂರ್ವಂ ತೇನ ನಾರಾಯಣಃ ಸ್ಮೃತಃ ॥' (1.9) ಎಂಬ ಶ್ಲೋಕದಿಂದ ಅರಿಯಲ್ಪಡುತ್ತೆ. ಇಲ್ಲಿ ನಾರಾಯಣ ಶಬ್ದದಿಂದಲೇ ತತ್ತ್ವ, ಹಿತ, ಪುರುಷಾರ್ಥ ಸ್ವರೂಪವನ್ನು ತಿಳಿಯುವ ಸಾಂಪ್ರದಾಯಿಕ ಕ್ರಮವು ರಹಸ್ಯಗ್ರಂಥಗಳಲ್ಲಿ ವಿವೃತವಾಗಿದೆ. ಸದಾಚಾರ್ಯರಿಂದ ಕಾಲಕ್ಷೇಪಮುಖೇನ ಅದನ್ನು ಗ್ರಹಿಸಬೇಕು.

ಇನ್ನು ಸೃಷ್ಟಿಯನ್ನು ಪ್ರಸ್ತಾಪಿಸಿ ಮುಂದೆ 'ಸೋಽಭಿಧ್ಯಾಯ ಶರೀರಾತ್ ಸ್ವಾತ್ ಸಿಸೃಕ್ಷುಃ ವಿವಿಧಾಃ ಪ್ರಜಾಃ । ಅಪ ಏವ ಸಸರ್ಜಾದೌ ತಾಸು ವೀರ್ಯಮಪಾಸೃಜತ್ ॥ ತದಂಡಮಭವದ್ಧೈಮಂ ಸಹಸ್ರಾಂಶುಸಮಪ್ರಭಂ । ತಸ್ಮಿನ್ ಜಜ್ಞೇ ಸ್ವಯಂ ಬ್ರಹ್ಮಾ ಸರ್ವಲೋಕಪಿತಾಮಹಃ ॥' (1.8,9) ಎಂದು ಬ್ರಹ್ಮನ ಸೃಷ್ಟಿಯನ್ನು ಹೇಳುವಾಗ 'ಯತ್ತತ್ಕಾರಣಮವ್ಯಕ್ತಂ ನಿತ್ಯಂ ಸದಸದಾತ್ಮಕಂ' (1.10) ಎಂದು ಕಾರಣವನ್ನು ಹೇಳಿದೆ. ದೇವತಾವಿಶೇಷನಿರ್ಣಯವೂ ಮಾಡಿದೆ. 'ಆಸೀದಿದಂ ತಮೋಭೂತಂ ಅಪ್ರಜ್ಞಾತಮಲಕ್ಷಣಂ । ಅಪ್ರತರ್ಕ್ಯಮವಿಜ್ಞೇಯಂ ಪ್ರಸುಪ್ತಮಿವ ಸರ್ವತಃ ॥' (1.5) ಎಂದು ಅಚಿತ್ತತ್ತ್ವವಾದ ಮೂಲಪ್ರಕೃತಿಯನ್ನೂ ಅದರಿಂದ ತತ್ತ್ವಾದಿಸೃಷ್ಟಿಯನ್ನೂ ಸಮಷ್ಟಿ, ವ್ಯಷ್ಟಿ ಎಂಬ ಎರಡು ವಿಧ ಸೃಷ್ಟಿಯನ್ನೂ ಪುರುಷಸೂಕ್ತಾನುಸಾರವಾಗಿ ವಿವರಿಸಿದೆ. ಈ ಸೃಷ್ಟ ಪದಾರ್ಥಗಳ ನಾಮರೂಪವನ್ನು ವೇದಶಬ್ದಗಳಿಂದ ವಿಧಿಸಿರುವುದ-ರಿಂದ ಎಲ್ಲ ಶಬ್ದಗಳೂ ವೇದಮೂಲವಾಗಿ, 'ವೇದೈಶ್ಚ ಸರ್ವೈರಹಮೇವ ವೇದ್ಯಃ' (ಭ.ಗೀ. 15.15) ಎಂಬಂತೆ

ಪರಮಾತ್ಮವಾಚಿಗಳೆಂಬ ಸರ್ವಶಬ್ದವಾಚ್ಯತ್ವವು, 'ಸರ್ವೇಷಾಂ ತು ಸ ನಾಮಾನಿ ಕರ್ಮಾಣಿ ಚ ಪೃಥಕ್ ಪೃಥಕ್ । ವೇದಶಬ್ದೇಭ್ಯ ಏವಾದೌ ದೇವಾದೀನಾಂ ಚಕಾರ ಸಃ ॥' (1.21) ಎಂಬಲ್ಲಿ ಹೇಳಿದೆ.

ಜಗತ್ಕಾರಣನಾದ ನಾರಾಯಣನ ಈಶ್ವರತ್ವ ಮತ್ತು ವೈಭವ ನಿರಂಕುಶವೆಂದು 'ಪ್ರಶಾಸಿತಾರಂ ಸರ್ವೇಷಾಂ ಅಣೀಯಾಂಸಂ ಅಣೀಯಸಾಂ । ರುಕ್ಮಾಭಂ ಸ್ವಪ್ನಧೀಗಮ್ಯಂ ವಿದ್ಯಾತ್ತು ಪುರುಷಂ ಪರಂ ॥' (12.122) ಎಂದು ಸ್ವರೂಪ, ಗುಣಗಳೊಡನೆ ತಿಳಿಸಿದೆ. ಇಲ್ಲಿ ಈಶ್ವರನ ಉಭಯಲಿಂಗತ್ವ ಹೇಳಿದಂತಾಗುವುದು.

ಇಲ್ಲಿ ಜ್ಞಾನವಿಶೇಷವಾದ ಭಕ್ತಿಯ ಸಾಧನವೂ ವಿಹಿತ. ಇಲ್ಲಿ ಹಿತವೆನಿಸುವ ಉಪಾಯದ ವಿಷಯದಲ್ಲಿ ಕೆಳಗೆ ಹೇಳಿದ 'ಪ್ರಶಾಸಿತಾರಂ' ಎಂಬ ಶ್ಲೋಕದಲ್ಲಿನ 'ಸ್ವಪ್ನಧೀಗಮ್ಯಂ' ಎಂಬುದರಿಂದ ಸ್ವಪ್ನಸದೃಶವಾದ ಬುದ್ಧಿಯಿಂದ ಪಡೆಯ ತಕ್ಕವನು, ಅಂದರೆ ಬಹಳ ವಿಶದವಾಗಿ ಪ್ರತ್ಯಕ್ಷದಂತೆ ಸ್ಫುರಿಸುವ ಧ್ಯಾನಮಾತ್ರದಿಂದ ಪಡೆಯಬಹುದು ಎಂದು ಭಾವ.

ಇಂತಹ ಬ್ರಹ್ಮವನ್ನೇ ವೇದಶಾಖೆಗಳು ಬೇರೆ ಬೇರೆ ಶಬ್ದಗಳಿಂದ ಬೋಧಿಸುತ್ತವಾಗಿ ಪರಮಾತ್ಮ ಸರ್ವಶಬ್ದವಾಚ್ಯನೆಂದು 'ಏನಮೇಕೇ ವದಂತ್ಯಗ್ನಿಂ ಮರುತೋಽನ್ಯೇ ಪ್ರಜಾಪತಿಂ । ಇಂದ್ರಮೇಕೇ ಪರೇ ಪ್ರಾಣಂ ಅಪರೇ ಬ್ರಹ್ಮ ಶಾಶ್ವತಂ ॥' (12.123) ಎಂಬಲ್ಲಿ ಹೇಳಿದೆ. 'ಪ್ರಶಾಸಿತಾ' ಎಂಬುದರಿಂದ ಒಳಗೆ ಪ್ರವೇಶಿಸಿ ನಿಯಮಿಸುವನೆಂದು ತಿಳಿಯುತ್ತದೆ. ಆದ್ದರಿಂದ ಸರ್ವಶಬ್ದಗಳೂ ಅಂತರ್ಯಾಮಿವರೆಗೆ ಬೋಧಿಸಲು ಸಮರ್ಥವೆಂದು ತಾತ್ಪರ್ಯ.

ಹೀಗೇ ಯಾಜ್ಞವಲ್ಕ್ಯಸ್ಮೃತಿಯಲ್ಲಿ 'ಕ್ಷೇತ್ರಜ್ಞಸ್ಯೇಶರಜ್ಞಾನಾತ್ ವಿಶುದ್ಧಿಃ ಪರಮಾ ಮತಾ' (ಪ್ರಾ.ಅ. 3.34) ಎಂದಿದೆ.

ಆಪಸ್ತಂಬ ಮಹರ್ಷಿಗಳೂ ಚಿದಚಿತ್ತುಗಳು ಭಗವಚ್ಛರೀರವೆಂದು 'ಪೂಃ ಪ್ರಾಣಿನಃ ಸರ್ವ ಏವ ಗುಹಾಶಯಸ್ಯ ಅಹನ್ಯಮಾನಸ್ಯ ವಿಕಲ್ಮಷಸ್ಯ' (ಆ.ಧ.ಸೂ. 22.4) ಎಂಬಲ್ಲಿ ಹೇಳುತ್ತಾರೆ. ಪರತತ್ತ್ವನಿರ್ಣಯ ಪ್ರಕರಣಗಳಲ್ಲಿ ಪಠಿತವಾಗಿರುವ ಎಲ್ಲ ಶಬ್ದಗಳೂ ಪುರುಷಸೂಕ್ತ, ನಾರಾಯಣಾನುವಾಕಗಳಿಗನುಸಾರವಾಗಿ ವಿಮರ್ಶಿಸಲ್ಪಟ್ಟು ಶ್ರೀಮನ್ನಾರಾಯಣನೇ ಪರತತ್ತ್ವವೆಂದು ಸಿದ್ಧಿಸುವ ಬಗ್ಗೆ, ಪುರುಷಸೂಕ್ತ ಶ್ರೀಮನ್ನಾರಾಯಣವಾಚೀ ಎಂದು ಆಪಸ್ತಂಬ ಮಹರ್ಷಿಗಳು "'ಸಹಸ್ರಶೀರ್ಷಾ ಪುರುಷಃ' ಇತಿ ಉಪಹಿತಾಂ ಪುರುಷೇಣ ನಾರಾಯಣೇನ ಯಜಮಾನ ಉಪತಿಷ್ಠತೇ" (ಆ.ಶ್ರೌ.ಸೂ. 16.28.3) ಎಂಬಲ್ಲಿ ಹೇಳಿದ್ದಾರೆ.

ಪುರುಷಸೂಕ್ತದ (ತೈ.ಆ. 3.32-38) ಸಾರಾಂಶ ಹೀಗೆ ಸಂಗ್ರಹಿಸಲಾಗಿದೆ -

ಪರಮಾತ್ಮನ ವಿಶ್ವರೂಪತ್ವವೂ ಸರ್ವವ್ಯಾಪಿತ್ವವೂ ಮೊದಲನೇಯ ಋಕ್ಕಿನಲ್ಲಿ ಹೇಳಿದೆ - 'ಸಹಸ್ರಶೀರ್ಷಾ ಪುರುಷಃ । ಸಹಸ್ರಾಕ್ಷಃ ಸಹಸ್ರಪಾತ್ । ಸ ಭೂಮಿಂ ವಿಶ್ವತೋ ವೃತ್ವಾ । ಅತ್ಯತಿಷ್ಠದ್ದಶಾಂಗುಲಂ' (32). ಈ ಪುರುಷನೇ ಮೋಕ್ಷಪ್ರದನೆಂದು 'ಉತಾಮೃತತ್ವಸ್ಯೇಶಾನಃ' ಎಂಬಲ್ಲಿಯೂ, ಅವನ ಅನಂತ ಕಲ್ಯಾಣಗುಣಗಳು 'ಏತಾವಾನಸ್ಯ ಮಹಿಮಾ । ಅತೋ ಜ್ಯಾಯಾಗ್ಂಶ್ಚ ಪೂರುಷಃ' (32) ಎಂದೂ, ಅಪ್ರಾಕೃತ ದೇಶವಾದ ನಿತ್ಯವಿಭೂತಿಯು 'ತ್ರಿಪಾದಸ್ಯಾ-ಮೃತಂ ದಿವಿ' (33) ಎಂಬಲ್ಲಿಯೂ, ಆತನ ಸಮಷ್ಟಿ, ವ್ಯಷ್ಟಿ ಕಾರಣತ್ವವು ಮುಂದೆ 'ತಸ್ಮಾದ್ವಿರಾಡಜಾಯತ' ಎಂದು ಆರಂಭಿಸಿ 'ತಥಾ ಲೋಕಾಗ್ಂ ಅಕಲ್ಪಯನ್' (37) ಎಂಬ ವರೆಗೆ ವಿಸ್ತರಿಸಿದೆ. ಮುಂದೆ ನಿತ್ಯರ ಪ್ರಸ್ತಾವ 'ಸಾಧ್ಯಾ ಋಷಯಶ್ಚ ಯೇ' (35) ಮತ್ತು 'ಯತ್ರ ಪೂರ್ವೇ ಸಾಧ್ಯಾಃ ಸಂತಿ ದೇವಾಃ' ಎಂಬಲ್ಲಿಯೂ, ಪರಮಾತ್ಮನ ಸ್ಥಾನ, ರೂಪಗಳ ದಿವ್ಯತ್ವವೂ, ನಾಮರೂಪವ್ಯಾಕರಣವೂ (ಸರ್ವಶಬ್ದವಾಚ್ಯತ್ವ) 'ವೇದಾಹಮೇತಂ ಪುರುಷಂ ಮಹಾಂತಂ' ಎಂಬಲ್ಲಿಯೂ, ಈ ಪರಮಾತ್ಮ ಪ್ರಾಪ್ತಿ ಅವನ ಜ್ಞಾನ ವಿಶೇಷವಾದ ಭಕ್ತಿಯಿಂದ ಮಾತ್ರ ಸಾಧ್ಯ ಎಂಬುದು 'ತಮೇವಂ ವಿದ್ವಾನಮೃತ ಇಹ ಭವತಿ । ನಾನ್ಯಃ ಪಂಥಾ ಅಯನಾಯ ವಿದ್ಯತೇ' (38) ಎಂಬಲ್ಲಿಯೂ ಹೇಳಲಾಗಿದೆ.

ಈ ಸೂಕ್ತದ ಪ್ರತಿಯೊಂದು ಮಂತ್ರದಿಂದಲೂ ಒಂದೊಂದು ಉಪಚಾರವೆಂಬಂತೆ ಷೋಡಶೋಪಚಾರಗಳೊಡನೆ ಶ್ರೀಮನ್ನಾರಾಯಣನ ಆರಾಧನ ವಿಧಿಸಿರುವುದರಿಂದ ಈ ಮಹಾಪುರುಷ ಪ್ರಕರಣ ನಾರಾಯಣ ಪಾರಮ್ಯಸ್ಥಾಪಕವಾಗಿದೆ. ಭಗವದ್ಭಾಷ್ಯಕಾರರು ಇದನ್ನು ವೇದಾರ್ಥಸಂಗ್ರಹದಲ್ಲಿ ವಿಸ್ತರಿಸಿರುವರು. 'ಏತೇನ ಸರ್ವೇ ವ್ಯಾಖ್ಯಾತಾ ವ್ಯಾಖ್ಯಾತಾಃ' (1.4.29) ಎಂಬ ಸೂತ್ರದ ಶ್ರುತಪ್ರಕಾಶಿಕೆಯೂ ಗಮನಾರ್ಹ.

ಈ ಪರಮಾತ್ಮನ ರೂಪಸ್ಥಾನಾದಿಗಳನ್ನು ಬೃಹತ್ಪರಾಶರಸ್ಮೃತಿಯಲ್ಲಿ 'ಧ್ಯೇಯಸ್ಸದಾ ಸವಿತೃಮಂಡಲಮಧ್ಯವರ್ತೀ ನಾರಾಯಣಃ ಸರಸಿಜಾಸನಸನ್ನಿವಿಷ್ಟಃ । ಕೇಯೂರವಾನ್ ಮಕರಕುಂಡಲವಾನ್ ಕಿರೀಟೀ ಹಾರೀ ಹಿರಣ್ಮಯವಪುಃ ಧೃತಶಂಖಚಕ್ರಃ' (5) ಎಂದು ಹೇಳಲಾಗಿದೆ.

ಈ ಸ್ಮೃತಿ, ಧರ್ಮಶಾಸ್ತ್ರಗಳಲ್ಲಿ ವಿಸ್ತಾರವಾಗಿ ನಿಷೇಕಾದಿ ಷೋಡಶಸಂಸ್ಕಾರಗಳು, ವರ್ಣಾಶ್ರಮಧರ್ಮಗಳ ವಿಚಾರ, ಆಹ್ನಿಕ, ಪ್ರಾಯಶ್ಚಿತ್ತ ಮುಂತಾದವು ವಿಪುಲವಾಗಿದ್ದು ಪರಮಾತ್ಮೋಪಾಸನೆಗೆ ವರ್ಣಾಶ್ರಮಧರ್ಮಾಂಗತ್ವ ಹೇಳಿದಂ-ತಾಗುವುದು. 'ಗಾರ್ಭೈಃ ಹೋಮೈಃ ಜಾತಕರ್ಮಚೌಳಮೌಂಜೀನಿಬಂಧನೈಃ । ಮಹಾಯಜ್ಞೈಶ್ಚ ಯಜ್ಞೈಶ್ಚ ಬ್ರಾಹ್ಮೀಯಂ ಕ್ರಿಯತೇ ತನುಃ ॥' (ಮನುಸ್ಮೃತಿ 2.28) ಎಂದು ವಿಧಿಸಿದೆ. 'ಸಂಧ್ಯಾಹೀನೋऽಶುಚಿರ್ನಿತ್ಯಂ ಅನರ್ಹಸ್ಸರ್ವಕರ್ಮಸು' (ದಕ್ಷ.ಸ್ಮೃ. 2.27) ಮುಂತಾದವು ಇಲ್ಲಿ ಅನುಸಂಧೇಯ.

ಇಂತಹ ಉಪಾಯವನ್ನು ಅನುಷ್ಠಿಸಿ ದೊರೆಯುವ ಪರಮಪುರುಷಾರ್ಥವೂ, (ಯಾಜ್ಞವಲ್ಕ್ಯಸ್ಮೃತಿಯಲ್ಲಿ?) 'ಓಂಕಾರರಥಮಾರುಹ್ಯ ಮನಃ ಕೃತ್ವಾ ತು ಸಾರಥಿಂ । ಬ್ರಹ್ಮಲೋಕಪದಾನ್ವೇಷೀ ಯಾತಿ ವಿಷ್ಣೋಃ ಪರಂ ಪದಂ' ಎಂದೂ ಹೇಳಿದ್ದು ಹೀಗೆ ಧರ್ಮಶಾಸ್ತ್ರಗಳಿಂದಲೂ ಸಿದ್ಧಾಂತಾಂಶಗಳು ಉಪೋದ್ಬಲಿತವಾಗಿವೆಯೆಂದು ಲಭಿಸಿತು.

ಈಗ ವಿಶಿಷ್ಟಾದ್ವೈತಕ್ಕೆ ಅಸಾಧಾರಣವಾದ ಉಭಯವೇದಾಂತ ಸಾಮರಸ್ಯವೆಂಬ ಅಂಶವು **ದ್ರಾವಿಡ ಪ್ರಬಂಧ**ಗಳೆಂಬ ನಿತ್ಯಸೂರಿಗಳ ಅವತಾರಭೂತ ಮಹಾಮಹಿಮರಾದ ಆೞ್ವಾರ್‌ಗಳ ಶ್ರೀಸೂಕ್ತಿಗಳಿಂದ ಸಿದ್ಧಿಸುತ್ತದೆಯಾಗಿ ಈ ಆೞ್ವಾರ್‌ಗಳ ಗ್ರಂಥಗಳು ತಮಿಳು ಭಾಷೆಯಲ್ಲಿ ಭಕ್ತಿಗೀತೆಯಾಗಿರುವಾಗಲೇ ಸಕಲ ದುರೂಹವಾದ ವೇದಾಂತಾರ್ಥಗಳನ್ನೂ ಸ್ಫುಟವಾಗಿ ತಿಳಿಸುತ್ತವೆಯೆಂಬುದನ್ನು ಮುಂದೆ ನೋಡೋಣ. ಈ ಆೞ್ವಾರ್‌ಗಳು 13 ಮಂದಿ ಮತ್ತು ಅವರಿಂದ ರಚಿತವಾದ ಗ್ರಂಥಗಳ ಸಂಖ್ಯೆ 24, ಹಾಡುಗಳ ಸಂಖ್ಯೆ 4000. ಇದಲ್ಲದೆ ಶ್ರೀಮದ್ವೇದಾಂತದೇಶಿಕರೇ ಮುಂತಾದ ಆಚಾರ್ಯರೂ ಸಹ ದ್ರಾವಿಡ ಪ್ರಬಂಧಗಳನ್ನು ರಚಿಸಿರುವರು. ಇಲ್ಲಿ ನಾಲಾಯಿರದಿವ್ಯಪ್ರಬಂಧಗಳಿಂದ ಮಾತ್ರ ಸಿದ್ಧಾಂತ ವಿಶದೀಕರಣ ಮಾಡಲಾಗುವುದು.

1) ಪೊಯ್ಗೈಯಾೞ್ವಾರ್ - ಮುದಲ್ ತಿರುವಂದಾದಿ - 100;

2) ಪೂದತ್ತಾೞ್ವಾರ್ - ಇರಂಡಾಂ ತಿರುವಂದಾದಿ - 100;

3) ಪೇಯಾೞ್ವಾರ್ - ಮೂನ್ಱಾಂ ತಿರುವಂದಾದಿ - 100;

4) ತಿರುಮೞಿಶೈಯಾೞ್ವಾರ್ - ನಾನ್ಮುಹನ್ ತಿರುವಂದಾದಿ - 96 ಮತ್ತು ತಿರುಚ್ಚಂದ ವಿರುತ್ತಂ - 120 (ಒಟ್ಟು - 216);

5) ನಮ್ಮಾೞ್ವಾರ್ - ತಿರುವಿರುತ್ತಂ - 100, ತಿರುವಾಶಿರಿಯಂ - 7, ಪೆರಿಯ ತಿರುವಂದಾದಿ - 87 ಮತ್ತು ತಿರುವಾಯ್ಮೊೞಿ - 1102 (ಒಟ್ಟು - 1296);

6) ಮಧುರಕವಿ ಆೞ್ವಾರ್ - ಕಣ್ಣಿನುಣ್ ಶಿರುತ್ತಾಂಬು - 11;

7) ಕುಲಶೇಖರಾೞ್ವಾರ್ - ಪೆರುಮಾಳ್ ತಿರುಮೊೞಿ - 105;

8) ಪೆರಿಯಾೞ್ವಾರ್ - ಪೆರಿಯಾೞ್ವಾರ್ ತಿರುಮೊೞಿ - 473;

9) ಆಂಡಾಳ್ - ತಿರುಪ್ಪಾವೈ - 30 ಮತ್ತು ನಾಚ್ಚಿಯಾರ್ ತಿರುಮೊೞಿ - 143 (ಒಟ್ಟು - 173);

10) ತೊಂಡರಡಿಪ್ಪೊಡಿ ಆೞ್ವಾರ್ - ತಿರುಮಾಲೈ - 45 ಮತ್ತು ತಿರುಪ್ಪಳ್ಳಿಯೆೞುಚ್ಚಿ - 10 (ಒಟ್ಟು - 55);

11) ತಿರುಪ್ಪಾಣಾೞ್ವಾರ್ - ಅಮಲನಾದಿಪಿರಾನ್ - 10;

12) ತಿರುಮಂಗೈ ಆೞ್ವಾರ್ - ಪೆರಿಯತಿರುಮೊೞಿ - 1084, ತಿರುಕ್ಕುಱುಂದಾಂಡಕಂ - 20, ತಿರುನೆಡುಂದಾಂಡಕಂ - 30, ತಿರುವೆೞುಕೂಱ್ಱಿರುಕ್ಕೈ - 1, ಶಿರಿಯ ತಿರುಮಡಲ್ - 40 ಮತ್ತು ಪೆರಿಯ ತಿರುಮಡಲ್ - 78 (ಒಟ್ಟು - 1253);

13) (ತಿರುವರಂಗತ್ತಮುದನಾರ್) ಭಗವದ್ಭಾಷ್ಯಕಾರರು - ರಾಮಾನುಜ ನೂಱ್ಱಂದಾದಿ - 108;

ಒಟ್ಟು 13 ಆೞ್ವಾರ್‌ಗಳು, 24 ಪ್ರಬಂಧಗಳು, 4000 ಹಾಡುಗಳು.

ಈ ದ್ರಾವಿಡಪ್ರಬಂಧಗಳನ್ನು ಶ್ರುತಿಸಾರಗಳೆಂದೂ, ಭಕ್ತಶಿರೋಮಣಿಗಳಾದ ಆೞ್ವಾರ್‌ಗಳ ಭಗವದನುಭವ ಪ್ರವಾಹವೆಂದೂ

ಹೇಳುವುದರಿಂದ ಇವುಗಳ ತತ್ತ್ವಗಳನ್ನು ಬೋಧಿಸುವುದರಲ್ಲಿ ತಾತ್ಪರ್ಯವೂ, ಕೂಡಲೇ ಪರಮಾತ್ಮನಲ್ಲಿ ಮನಸ್ಸು ಲಯಿಸಲು ಸಾಕ್ಷಾತ್ ಹೇತುವಾಗುವುದೂ, 'ಪಾಠ್ಯೇ ಗೇಯೇ ಚ ಮಧುರಂ' (ವಾ.ರಾ. ಬಾ.ಕಾ. 4.8) ಎಂಬಂತೆ ಇಂಪಾಗಿ ಹಾಡುಗಳಾಗಿರುವುದೂ ಪರಾಶರಾದಿ ಗ್ರಂಥಗಳಿಗಿಂತಲೂ ವೈಶಿಷ್ಟ್ಯವನ್ನು ಹೊಂದಿರುವುದಾಗಿದೆ. ಅಲ್ಲದೆ ತ್ರೈಗುಣ್ಯ-ವಿಷಯಗಳಾದ ವೇದಗಳಲ್ಲಿ ಪರಮೈಕಾಂತಿಗಳಿಗೆ ಹೃದ್ಯವಾದ ಭಾಗಗಳನ್ನಾಯ್ದು ಭಕ್ತಿಯಲ್ಲಿ ತೊಯ್ದು ತಂದಿರುವುದು ಈ ಪ್ರಬಂಧಗಳ ಹಿರಿಮೆ.

ಇಲ್ಲಿ ತತ್ತ್ವ, ಹಿತ, ಪುರುಷಾರ್ಥಗಳನ್ನೂ, ಅರ್ಥಪಂಚಕವನ್ನೂ ಮತ್ತಿತರ ಪ್ರಧಾನ ಪ್ರತಿತಂತ್ರವಾದ ಸಿದ್ಧಾಂತಾಂಶ-ಗಳನ್ನೂ ಈಗ ಸಂಗ್ರಹಿಸುತ್ತೇವೆ.

1. ಪೊಯ್ಗೈಯಾೞ್ವಾರ **ಮುದಲ್ ತಿರುವಂದಾದಿ**ಯಲ್ಲಿ - ಪರಮಾತ್ಮನ ಜಗತ್ಕಾರಣತ್ವವು 'ಇದು ನೀ ಪಡೈತ್ತಿಡಂದುಂಡುಮಿೞ್ದ ಪಾರ್' (2) ಎಂಬಲ್ಲಿಯೂ, ಸರ್ವಕರಣಗಳಿಂದಲೂ ಭಗವದ್ವಿಷಯವೇ ಆಸ್ವಾದನೀಯ-ವೆಂದು ಪ್ರಪನ್ನವೃತ್ತಿಯೂ, ಪುರುಷಾರ್ಥ ಸೂಚನವೂ, 'ವಾಯ್ ಅವನೈಯಲ್ಲದು ವಾೞ್ತಾದು .... ಕೇಳಾ ಚೆವಿ' (11) ಎಂಬಲ್ಲಿಯೂ, ಪರತತ್ತ್ವ ನಿರ್ಣಯವನ್ನು ಬಹುವಾಗಿ 'ಆದಿಯಾಯ್ ನಿನ್ಱಾರವರ್' (13), 'ಮುದಲಾವಾರ್ ಮೂವರೇ, ಅಮ್ಮೂವರುಳ್ಳುಂ ಮುದಲಾವಾನ್ ಮೂರಿನೀರ್ವಣ್ಣನ್' (15), 'ಏಱ್ಱಾನ್ ಪುಳ್ಳೂರ್ನ್ದಾನ್ .... ಕಾಪ್ಪು' (74) ಮುಂತಾದೆಡೆಗಳಲ್ಲಿ ಸ್ಪಷ್ಟವಾಗಿಯೂ, 'ಅಡೈಯಾೞಿ ನೆಂಜೇ ಅಱಿ' (21), 'ತಿಱನುರೈಯೇ ಶಿಂದಿತ್ತಿರು' (41), 'ಎಪ್ಪೋದುಂ ತಿರುಮಾಲೈಕ್ಕೈತೊೞುವರ್ ಶೆನ್ಱು' (52), 'ಒಣ್ತಾಮರೈಯಾಳ್ ಕೇಳ್ವನ್ ಒರುವನೈಯೇ ನೋಕ್ಕುಂ ಉಣರ್ವು' (67) ಮುಂತಾದ ಅನೇಕ ಕಡೆಗಳಲ್ಲಿ ಶ್ರಿಯಃಪತಿ ಪಾದಗಳಲ್ಲಿ ಭಕ್ತಿಯೇ ಉಪಾಯವೆಂದೂ, 'ಪಹರ ಮಱೈ ಪಯಂದ ಪಣ್ಬನ್' (33) ಎಂದು ವೇದೋಪದೇಷ್ಟೃತ್ವವೂ, ಭಗವಂತನ ರೂಪಾದಿಗಳು ಭಕ್ತಾದಿಗಳ ಅಭಿಮತಕ್ಕನುಸಾರವಾಗಿವೆಯೆಂದು 'ತಮರುಹಂದದೆವ್ವುರುವಂ .... ಅವ್ವಣ್ಣಂ ಆೞಿಯಾನಾಂ' (44) ಎಂಬಲ್ಲೂ, 'ಚೆನ್ಱಾಲ್ ಕುಡೈಯಾಂ - ಅರವು' (53) ಎಂಬಲ್ಲಿ ಭಗವಂತನಿಗೆ ಸದಾ ಶೇಷವೃತ್ತಿ ಮಾಡಬೇಕೆಂಬ ಸೂಚನೆಯೂ, 'ನಮೋ ನಾರಣಾವೆನ್ನುಂ ಶೊಲ್ಮಾಲೈ ಕಱ್ಱೇನ್' (57) ಎಂದು ಶ್ರೀಮನ್ನಾರಾಯಣ ಶಬ್ದ ಮಾಹಾತ್ಮ್ಯವೂ, 'ಉಲಹುಂ - ಪುಣರ್ಪ್ಪು' (61) ಎಂಬಲ್ಲಿ ಅಭಿನ್ನನಿಮಿತ್ತೋಪಾದಾನತ್ವರೂಪ ಜಗತ್ಕಾರಣತ್ವವೂ, ಪಾರಮೈಕಾಂತ್ಯನಿಷ್ಠೆಯು 'ನಾಡಿಲುಂ ನಿನ್ನಡಿಯೇ ನಾಡುವನ್....' (88) ಎಂಬಲ್ಲಿಯೂ, 'ಮಾಯವನೈಯಲ್ಲಾಲ್ ಇಱೈಯೇನುಂ ಏತ್ತಾದು ಎನ್ನಾ' (94) ಎಂದೂ, ನಾರಾಯಣನಾಮಪ್ರಭಾವ ಪ್ರಕಾರಾಂತರದಲ್ಲಿ 'ನಾವಾಯಿಲುಂಡೇ ನಮೋ ನಾರಣಾವೆನ್ಱು....' (95) ಎಂಬಲ್ಲಿಯೂ, ಪರಮಾತ್ಮನ ಸರ್ವಾಂತರ್ಯಾಮಿತ್ವ 'ಉಳನ್ ಕಂಡಾಯ್ ನನ್ನೆಂಜೇ....' (99) ಎಂಬಲ್ಲಿಯೂ, ಭಕ್ತಿರೂಪೋಪಾಯವೂ, ಪರಮಪದಪ್ರಾಪ್ತಿಯೆಂಬ ಪುರುಷಾರ್ಥವೂ 'ಓರಡಿಯುಂ ಚಾಡುದೈತ್ತ .... ಮಾಯವನೈಯೇ ಮನತ್ತು ವೈ' (100) ಎಂದು ನಿಗಮನದಲ್ಲಿಯೂ ಪ್ರತಿಪಾದಿತವಾಗಿವೆ.

ದಿವ್ಯಪ್ರಬಂಧಗಳ ಅನೇಕ ವೈಶಿಷ್ಟ್ಯಗಳಲ್ಲಿ ಭಗವಂತನ ಪರ, ವ್ಯೂಹ, ವಿಭವ (ದಶಾವತಾರ ಮುಂತಾದವು), ಅರ್ಚಾ (108 ದಿವ್ಯದೇಶಗಳಲ್ಲಿ ಬೆಳಗುತ್ತಿರುವ ದಿವ್ಯಮೂರ್ತಿಗಳ, ದೇಶಗಳ, ಭಕ್ತಾದಿಗಳ ವರ್ಣನೆ) ಮತ್ತು ಅಂತರ್ಯಾಮಿ ಎಂಬ ಐದು ಅವಸ್ಥೆಗಳಲ್ಲೂ ಸ್ತುತಿಸುವುದು. ಇದರಂತೆ ಎಲ್ಲ ಆೞ್ವಾರ್ಗಳೂ ದಿವ್ಯದೇಶದಲ್ಲಿ ನೆಲೆಸಿರುವ ಸ್ವಾಮಿಯ ರೂಪ, ಗುಣಾದಿ ವೈಭವಗಳನ್ನು ಬಹುವಾಗಿ ಕೊಂಡಾಡಿ ನಾವು ಇಂದಿಗೂ ಅಲ್ಲಿ ಹೋಗಿ ಸೇವಿಸಿ ಆನಂದಿಸುವ ಸೌಕರ್ಯವನ್ನು ಒದಗಿಸಿರುತ್ತಾರೆ, 'ಪಿನ್ನಾನಾರ್ ವಣಂಗುಂ ಶೋದಿ' (ತಿರುನೆಡುಂದಾಂಡಕಂ 10) ಎಂಬಂತೆ.

2. ಪೂದತ್ತಾೞ್ವಾರ್ - **ಇರಂಡಾಂ ತಿರುವಂದಾದಿ**ಯಲ್ಲಿ - ಶ್ರೀಮನ್ನಾರಾಯಣನೇ ಧ್ಯೇಯನೆಂದೂ, ಭಕ್ತಿಯೇ ಸಾಧನವೆಂದೂ 'ಅನ್ಬೇ ತಹಳಿಯಾ ಆರ್ವಮೇ ನೆಯ್ಯಾಹ, ಇನ್ಬುರುಹು ಶಿಂದೈಯಿಡುತಿರಿಯಾ, ನನ್ಬುರುಹಿ ಞಾನಚ್ಚುಡರ್ವಿಳಕ್ಕೇಱ್ಱಿನೇನ್ ನಾರಣಱ್ಕು....' (1) ಎಂದು ಪ್ರಾರಂಭದಲ್ಲಿಯೂ, 'ಅಱಿಂದೈಂದುಂ ಉಳ್ಳಡಕ್ಕಿ ಆಯ್ಮಲರ್ಕೊಂಡು ಆರ್ವಂ ಶೆಱಿಂದ ಮನತ್ತರಾಯ್ಚೆವ್ವೇ ಅಱಿಂದು ಅವನ್ತನ್ ಪೇರೋದಿಯೇತ್ತುಂ ಪೆರುಂ ತವತ್ತೋರ್ ಕಾಣ್ಬರೇ ಕಾರೋದವಣ್ಣನ್ ಕೞಲ್' (6) ಎಂದೂ ಉಪಾಯ, ಪುರುಷಾರ್ಥಗಳೂ, ಪರದೇವತಾನಿರ್ಣಯ 'ಅವರಿವರೆನ್ಱಿಲ್ಲೈ ಅರವಣೈಯಾನ್ ಪಾದಂ .... ನಾಳುಂ ತೊಡರ್ನ್ದು' (2) ಎಂದೂ, 'ಮಱ್ಱು ಆರಿಯಲಾವಾರ್? .... ಕೊಂಡು' (17) ಎಂದೂ, ಭಗವಚ್ಛೇಷತ್ವ 'ತನಕ್ಕಡಿಮೈ ಪಟ್ಟದು ....' (16) ಎಂಬಲ್ಲಿಯೂ, ಭಗವತ್ಕೈಂಕರ್ಯನಿರತರಿಗೆ ಬಾಳು ಸುಗಮವೆಂದು 'ತಾಮುಳರೇ ತಮ್ಮುಳ್ಳಮುಳ್ಳುಳದೇ .... ಆರು ನರಕಂ ಶೇರ್ವದರಿದು' (21) ಎಂದೂ, ಭಗವಂತನ ಜಗನ್ಮಯತ್ವವು 'ಅವನ್ ಕಂಡಾಯ್ ನನ್ನೆಂಜೇ .... ಶೀಱ್ಱತ್ ತೀಯಾವಾನುಂ ಶೆನ್ಱು' (24) ಎಂಬಲ್ಲಿಯೂ, 'ಮಾಲ್ತೇಡಿಯೋಡುಂ ಮನಂ' (27) ಎಂದು ಭಕ್ತಿವಿಧಿಯೂ, ಶೇಷತ್ವಾನುಸಂಧಾನವೆಂಬ ಉಪಾಯಾಂಶವು

'ಅನ್ಬಾಕ್ಕಿಯೇತ್ತಿ ಅಡಿಮೈಪ್ಪಟ್ಟೇನ್ ಉನಕ್ಕು ಎನ್ಪಾಕ್ಕಿಯತ್ತಾಲ್ ಇನಿ' (34) ಎಂಬಲ್ಲಿಯೂ, ಭಗವತ್ಪಾದಾರ-ವಿಂದಗಳಲ್ಲಿ ಭಕ್ತಿಯೇ ತಾರಕವೆಂಬುದು 'ನಮಕ್ಕೆನ್ಱುಂ ಮಾಧವನೇಯೆನ್ಱುಂ ಮನಂಪಡೈತ್ತು ಮಱ್ಱವನ್ಪೇರ್ ಓದುವದೇ ನಾವಿನಾಲೋತ್ತು' (38) ಎಂಬಲ್ಲಿಯೂ, 'ಮಾಧವನ್ ಪೇರ್ ಶೊಲ್ಲುವದೇ ಓತ್ತಿನ್ ಶುರುಕ್ಕು' (39) ಎಂದು ಸರ್ವವೇದಸಾರವು ಪ್ರಣವವೇದ್ಯವಾದ ಶ್ರೀಮನ್ನಾರಾಯಣನ ಸರ್ವಶೇಷಿತ್ವವೇ ಎಂದೂ, 'ಮಣಿವಣ್ಣನ್ ಪಾದಮೇ ನೀ ಮಱವೇಲ್ ನೆಂಜೇ ನಿನ್ೈ' (41) ಎಂಬಲ್ಲಿ ಅವಿಚ್ಛಿನ್ನವಾಗಿ ಭಗವದ್ಧ್ಯಾನವೂ, 'ಮಾಲೈ ಯಱಿಯುರುವನ್ ಪಾದಮಲರಣಿಂದು .... ಉಣರ್ನ್ದು' (47) ಎಂದು ವರ್ಣಾಶ್ರಮಧರ್ಮಾನುಷ್ಠಾನ ಸಹಕೃತವಾಗಿಯೇ ಭಕ್ತಿ ಮಾಡತಕ್ಕದ್ದೆಂದೂ, ಸರ್ವಶಬ್ದವಾಚ್ಯತ್ವವು 'ಕದ್ೈಯಿನ್ ಪೆರುಂ ಪೊರುಳುಂ ಕಣ್ಣಾ! ನಿನ್ ಪೇರೇ .... ಪರುಮೊೞಿ-ಯಾಲ್ ಕಾಣಪ್ಪಣಿ' (64) ಎಂದೂ, 'ಕಂಡೇನ್ ತಿರುಮೇನಿ .... ವಲಿ' (67) ಎಂಬಲ್ಲಿ ಭಗವಂತನ ನಿರಂತರ ಅನುಧ್ಯಾನ-ದಿಂದ ಪ್ರತ್ಯಕ್ಷಸದೃಶನಾದ 'ದರ್ಶನ' ಪ್ರಾಪ್ತಿಯೂ, ಅದರಿಂದ ಕರ್ಮಕ್ಷಯವೂ, ಇದನ್ನೇ 'ಪಹಲ್ ಕಂಡೇನ್ ನಾರಣನೈಕ್ಕಂಡೇನ್ .... ವಡಿವು' (81) ಎಂಬಲ್ಲಿಯೂ, (ಸಮಸ್ತಕಲ್ಯಾಣಗುಣಾಕರವಾಗಿದೆ ಪರಮಾತ್ಮವಸ್ತು ಎಂದು ದೃಢಪಡಿಸಿ, ಉಪಾಯವನ್ನು ಹೇಳಿದ್ದಾರೆ), 'ಅತ್ತಿಯೂರಾನ್ .... ಎಂಗಳ್ಪಿರಾನ್' (96) ಎಂಬಲ್ಲಿ ಭಗವಂತನ ದೇವಾಧಿದೇವತ್ವವನ್ನೂ ಪ್ರತಿಪಾದಿಸಿದ್ದಾರೆ.

3. ಪೇಯಾೞ್ವಾರ **ಮೂನ್ಱಾಂ ತಿರುವಂದಾದಿ**ಯಲ್ಲಿ - 'ತಿರುಕ್ಕಂಡೇನ್ ಪೊನ್ಮೇನಿ ಕಂಡೇನ್ .... ಎನ್ನಾೞಿವಣ್ಣನ್ಪಾಲ್ ಇನ್ಱು' (1) ಎಂದು ಶ್ರೀಮನ್ನಾರಾಯಣನನ್ನೇ ಪರತತ್ತ್ವವಾಗಿ ದರ್ಶಿಸಿ, ಅವನ ಪಾದಗಳೇ ಉಜ್ಜೀವನೋಪಾಯವೆಂದು 'ಇನ್ಱೇ ಕೞಲ್ ಕಂಡೇನ್ ಏೞ್ಪಿರಪ್ಪುಂ ಯಾನಱುತ್ತೇನ್' (2) ಎಂಬಲ್ಲಿಯೂ, 'ಕೞಲ್ ತೊೞುದುಂ ವಾ ನೆಂಜೇ .... ನಣ್ಣಱ್ಕರಿಯಾನೈ ನಾಂ' (7) ಎಂದು ಭಕ್ತಿರೂಪೋಪಾಯವೂ, 'ನನ್ಗೋದುಂ ನಾಲ್ವೇದತ್ತುಳ್ಳಾನ್ ....' (11) ಎಂಬಲ್ಲಿ ಸರ್ವವೇದವೇದ್ಯತ್ವವೂ, ಯೋಗಾದಿಗಳಿಂದ ಮಹಾತ್ಮರು ಪರಮಾತ್ಮನನ್ನು ಅರಿವರೆಂದು 'ಅಱಿವೆನ್ನುಂ ತಾಳ್ಕೊಳುವಿ .... ಪಡಿ' (12) ಎಂಬಲ್ಲಿಯೂ, ಪರಮಾತ್ಮನ ಸಿದ್ಧೋಪಾಯತ್ವವು 'ನೆಡುಮಾಲೇ! ತಾವಿಯ ನಿನ್ನಂಜಾ ಇಣೈಯಡಿಕ್ಕೇ ಏೞ್ಪಿರಪ್ಪುಂ ಆಳಾಹಿ ಅಂಜಾದಿರುಕ್ಕ ಅರುಳ್' (18) ಎಂದೂ, 'ಸರ್ವಶಬ್ದವಾಚ್ಯತ್ವವೂ ಅನಂತ ಮಹಿಮತ್ವವೂ 'ಪೇಶುವಾರ್ ಎವ್ವಳವು ಪೇಶುವರ್ ಅವ್ವಳವೇ ವಾಶಮಲತ್ತುೞಾಯ್ ಮಾಲೈಯಾನ್' (21) ಎಂಬಲ್ಲಿಯೂ, ಪರಮಾತ್ಮನ ಜಗದಾತ್ಮಕತ್ವವು 'ವರುಂಗಾಲ್ ಇರುನಿಲನುಂ ಮಾಲ್ವಿಶುಂಬುಂ ಕಾಱ್ಱುಂ ನೆರುಂಗು ತೀ ನೀರುರುವು-ಮಾನಾನ್' (24) ಎಂದೂ, ದಂಪತಿಗಳಾದ ಶ್ರೀಮನ್ನಾರಾಯಣನೆಂಬ ತತ್ತ್ವವೇ ಶೇಷಿಯೆಂದು 'ಅವಱ್ಕಡಿಮೈಪ್ಪಟ್ಟೇನ್ .... ತಿರುಮಾರ್ಬನ್ತಾನ್' (37) ಎಂಬಲ್ಲಿಯೂ, ಸಮಾಧಿಕದರಿದ್ರನಾಗಿ ವಿಶ್ವರೂಪನು ಪರಮಾತ್ಮ ಎಂಬುದು 'ತಾನೇ ತನಕ್ಕುವಮನ್ .... ಇರುಶುಡರುಮಾಯ ಇಱೈ' (38) ಎಂಬಲ್ಲಿಯೂ, 'ಉಲಹಮುಂ ಊೞಿಯುಂ ಆೞಿಯುಂ .... ಪುರಿ' (44) ಎಂಬಲ್ಲಿ ವಿಶ್ವರೂಪನ ಧ್ಯಾನವೂ, ಮೋಕ್ಷಪ್ರದತ್ವವೂ, ಅಪ್ರಾಕೃತದಿವ್ಯದೇಶವೂ 'ಅವನೇ ಕಲಂಗಾಪ್ಪೆರು-ನಗರಂ ಕಾಟ್ಟುವಾನ್ ಕಂಡೀರ್' (51) ಎಂದೂ, ಶ್ರಿಯಃಪತಿಯಲ್ಲಿ ಭಕ್ತಿಯ ಹಿರಿಮೆ 'ಮಾದುಹಂದ ಮಾರ್ವಱ್ಕು ಪೆಣ್ಣಹಲಂ ಕಾದಲ್ ಪೆರಿದು' (54) ಎಂಬಲ್ಲಿಯೂ, 'ಪೂಲಿಂದಿರುಂಡ ಕಾರ್ವಾನಿಲ್ಮಿನ್ನೇ ಪೋಲ್ ತೋನ್ಱಿ .... ತೆಳಿ' (57) ಎಂಬಲ್ಲಿ ನೀಲಮೇಘಶ್ಯಾಮಳವರ್ಣತ್ವವೂ, ವಿದ್ಯುತ್ಪ್ರಭೆಯಾದ ಶ್ರೀನಿತ್ಯಯೋಗವೂ, 'ವಾೞುಂ ವಹೈಯಱಿಂದೇನ್ .... ಎಂಗಳ್ಪೆರುಮಾನಡಿಶೇರಪ್ಪೆಱ್ಱು' (59) ಎಂದು ಹಿತಸ್ವರೂಪವೂ, 'ಕುಡಂನಯನ್ದ ಕೂತ್ತನಾಯ್ ನಿನ್ಱಾನ್ ಕುರೈಕೞಲೇ ಕೂಱುವದೇ ನಾತ್ತನ್ನಾಲ್ ಉಳ್ಳ ನಲಂ' (73) ಎಂದು ಭಗವದ್ಗುಣಗಾನದ ಸ್ವಾದುತ್ವವೂ, 'ಅಡಿಪ್ಪೋದು ನಂಗಟ್ಕರಣ್' (77), 'ಅರಣಾಂ ನಮಕ್ಕೆನ್ಱುಂ ... ಓತ್ತು' (78) ಎಂಬಲ್ಲಿ ಪರಮಾತ್ಮನ ರಕ್ಷಕತ್ವ, ಶರಣ್ಯತ್ವವೂ, ಸರ್ವಾಂತರಾತ್ಮತ್ವ 'ಉಳನಾಯ ನಾನ್ಮಱೈಯಿನುಟ್ಪೊರುಳೈ ... ಕವಿ' (84) ಎಂದೂ, ಮುಂದೆ ಬಹುಪ್ರಕಾರವಾಗಿ ಭಕ್ತಿಯನ್ನು ಹೇಳಿ, ಕೊನೆಯಲ್ಲಿ 'ತೊಟ್ಟಪಡೈಯೆಟ್ಟುಂ ... ತಾಳ್ಮದಲೇ ನಂಗಟ್ಕುಚ್ಚಾರ್ವು' (99) ಎಂದೂ 'ಚಾರ್ವು ನಮಕ್ಕೆನ್ಱುಂ ಚಕ್ಕರತ್ತಾನ್ .... ತೇನಮರುಂ ಪೂಮೇಲ್ ತಿರು' (100) ಎಂದು ಲಕ್ಷ್ಮೀವಿಶಿಷ್ಟನಾದ ಶ್ರೀಮನ್ನಾರಾಯಣನೇ ದ್ವಯಮಂತ್ರಪೂರ್ವಖಂಡದಲ್ಲಿ ಹೇಳಿದಂತೆ ಉಪಾಯವೆಂದು ನಿಗಮಿಸಿದೆ. ದಿವ್ಯದಂಪತಿಗಳ ಉಪೇಯತ್ವವೂ ಇಲ್ಲಿ ಸ್ಪಷ್ಟ.

4. ತಿರುಮೞಿಶೈಯಾೞ್ವಾರ **ನಾನ್ಮುಹನ್ ತಿರುವಂದಾದಿ**ಯಲ್ಲಿ - ಶ್ರೀಮನ್ನಾರಾಯಣನ ಸರ್ವಸ್ಮಾತ್ಪರತ್ವವು 'ನಾನ್ಮುಹನೈ ನಾರಾಯಣನ್ ಪಡೈತ್ತಾನ್ ನಾನ್ಮುಹನುಂ ತಾನ್ಮುಹಮಾಯ್ ಶಂಕರನೈತ್ತಾನ್ ಪಡೈತ್ತಾನ್' (1) ಎಂಬಲ್ಲಿಯೂ, 'ತೇರುಂಗಾಲ್ ದೇವನ್ ಒರುವನೇ .... ಅರುಳ್ ಮುಡಿವದು ಆೞಿಯಾನ್ ಪಾಲ್' (2) 'ಇಱೈಯಾಲತ್ತೊರುಪೊರುಳೈ' (3), 'ಆಱು ಶಡೈಕ್ಕರನ್ದಾನ್ .... ಶೊಲ್ಲಾನೈಚ್ಚೊನ್ನೇನ್' (4) 'ವೀಡಾಕ್ಕುಂ ಮೆಯ್ಪ್ಪೊರುಟ್ಟಾನ್ ವೇದಮುದಱ್ಪೊರುಳ್ತಾನ್ ವಿಣ್ಣವರ್ಕು ನಱ್ಪೊರುಳ್ತಾನ್ ನಾರಾಯಣನ್' (13), ಎಂದು

ಮುಂದಾಗಿ ಒಂದೊಂದು ಪಾಶುರದಲ್ಲೂ ಅನೇಕ ಪ್ರಕಾರವಾಗಿ ಶ್ರೀಮನ್ನಾರಾಯಣನೇ ಪರದೇವತೆಯೆಂದು ಸಾರಿದ್ದಾರೆ. ಇದಕ್ಕೆಲ್ಲ ಶಿಖರಪ್ರಾಯವಾಗಿ 'ಕಲ್ಲಾದವರ್ ಇಲಂಗೈ ಕಟ್ಟೞಿತ್ತ ಕಾಕುತ್ತನಲ್ಲಾಲ್ ಒರು ದೆಯ್ವಂ ಯಾನಿಲೇನ್ - ಪೂಲ್ಲಾದ ದೇವರೈತ್ ತೇವರಲ್ಲಾರೈತ್ ತಿರುವಿಲ್ಲಾತ್ತೇವರೈತ್ ತೇರೇನ್ಮಿನ್ ತೇವು' (53) ಎಂಬಲ್ಲಿ ಸ್ಪಷ್ಟವಾಗಿ ಲಕ್ಷ್ಮೀಪತಿತ್ವಲಿಂಗದಿಂದ ಪರದೇವತೆಯನ್ನು ನಿರ್ಣಯಿಸಿದ್ದಾರೆ. ನಾರಾಯಣ ಶಬ್ದದ ನಿರ್ವಚನವನ್ನೂ ಜೀವ, ಪರಮಾತ್ಮ ಸ್ವರೂಪ ಲಕ್ಷಣದೊಡನೆ 'ನಾನುನ್ನೈ ಯನ್ಱಿ ಯಿಲೇನ್ ಕಂಡಾಯ್ ನಾರಣನೇ ನೀ ಎನ್ನೈಯನ್ಱಿ ಇಲೈ' (7) ಎಂಬಲ್ಲಿ ತಿಳಿಸಿದ್ದಾರೆ. ಹಿತದ ವಿಷಯದಲ್ಲಿ 'ವಾೞ್ತ್ತುಹ ವಾಯ್ಕ್ಕಣ್ಗ ಕಣ್ ಕೇಟ್ಕ ಶೆವಿ ಮಕುಟಂ ತಾೞ್ತ್ತಿ ವಣಂಗು-ಮಿನ್ಗಳ್ ತಣ್ಮಲರಾಲ್, ಶೂೞ್ತ್ತ ತುೞಾಯ್ ಮನ್ನು ನೀಳ್ಮುಡಿ ಎನ್ ತೊಲ್ಲೈ ಮಾಲ್ ತನ್ನೈ ವೞಾವಣ್ ಕೈಕೂಪ್ಪಿ ಮದಿತ್ತು' (11) ಎಂಬಲ್ಲಿಯೂ, ಭಾಗವತನಿಷ್ಠೆ 'ವೇೞಾಹ ಏತ್ತಿಯಿರುಪ್ಪಾರೈ ವೆಲ್ಲುಮೇ ಮಱ್ಱವರೈಚ್ಚಾತ್ತಿ-ಯಿರುಪ್ಪಾರ್ ತವಂ' (18) ಎಂದೂ, 'ಅಡೈಮಿನೋ ಆಯ್ನ್ದ ಗುಣತ್ತಾನಡಿ' (32) ಎಂಬಲ್ಲಿಯೂ, 'ಎನ್ನೆಂಜಮೇಯಾನ್ ಇರುಳ್ನೀಕ್ಕಿ ಎಂಬಿರಾನ್ .... ವೆವ್ವಿನೈ ತೀರ್ತ್ತು ಆಯಾನುಕ್ಕು ಆಕ್ಕಿನೇನ್ ಅನ್ಬು' (58) ಎಂದೂ, 'ಆಳ್ವಾಯುಕ್ಕು ಅಡಿಯೇನ್ ನಾನ್ ಆಳ್' (59), 'ನಲ್ಲಱಮಾವನವುಂ ನಾಲ್ವೇದ ಮಾತ್ತವಮುಂ ನಾರಣನೇಯಾವದು' (72) ಎಂದು ಈಶ್ವರನ ಸಿದ್ಧೋಪಾಯತ್ವವೂ, 'ತೆರಿತ್ತೆೞುದಿ ವಾಶಿತ್ತುಂ ಕೇಟ್ಟುಂ ವಣಂಗಿ ವೞಿಪಟ್ಟುಂ ಪೂಶಿತ್ತುಂ ಪೋಕ್ಕಿನೇನ್ ಪೋದು' (63) ಎಂದೂ ಅನೇಕ ಪ್ರಕಾರವಾಗಿ ಭಕ್ತಿಯನ್ನೂ, ವರ್ಣಾಶ್ರಮಧರ್ಮಾನುಷ್ಠಾನದೊಡನೆ ಪ್ರೀತಿಪೂರ್ವಕವಾಗಿ ಭಗವದನುಗ್ರಹದಿಂದ ಸಾಧ್ಯೋಪಾಯವಾಗಿ ವಿವರಿಸಿದ್ದಾರೆ. ಪರಮಾತ್ಮನ ಸರ್ವಕಾರಣತ್ವ, ಸರ್ವಶಬ್ದವಾಚ್ಯತ್ವ, ಜಗಚ್ಛರೀರಿತ್ವ ಮುಂತಾದ ಅನೇಕ ಮಂಗಳ ಗುಣಗಳನ್ನು ಈ ಪ್ರಬಂಧದುದ್ದಕ್ಕೂ ಕೊಂಡಾಡಿದ್ದಾರೆ. 'ನಾರಾಯಣನ್ ಎನ್ನೈಯಾಳಿ, ನರಕತ್ತುಚ್ಚೇರಾಮಲ್ ಕಾಕ್ಕುಂ ತಿರುಮಾಲ್' (14) ಎಂದು ಶೇಷಿತ್ವ, ಮೋಕ್ಷಪ್ರದತ್ವಗಳು ಶ್ರಿಯಃಪತಿ-ನಿಷ್ಠಗಳೆಂದೂ, 'ಉವಂದೆಮ್ಮೈಕ್ಕಾಪ್ಪಾಯ್ ನೀ ಕಾಪ್ಪದನ್ನೈಯಾವಾಯ್ ನೀ ವೈಕುಂದಂ ಈಪ್ಪಾಯುಂ ಎವ್ವುಯಿಕ್ಕುಂ ನೀ' (19) ಎಂದು ರಕ್ಷಕತ್ವ, ಮೋಕ್ಷಪ್ರದತ್ವವೂ, 'ನೀಯೇ ಉಲಹೆಲ್ಲಾಂ ನಿನ್ನರುಳೇ ನಿಱ್ಪನವುಂ ನೀಯೇ ತವತ್ತೇವ-ದೇವನುಂ, ನೀಯೇ ಎರಿಶುಡರುಂ ಮಾಲ್ವರೈಯುಂ ಎಣ್ ದಿಶೈಯುಂ ಅಂಡತ್ತು ಇರುಶುಡರುಮಾಯ ಇವೈ' (20) ಎಂದು ಸರ್ವಶರೀರಿತ್ವವೂ, 'ವಾನುಲವು .... ಅಂಡಂ ತಿರುಮಾಲಕೈಪ್ಪು' (37) ಎಂದೂ ಈ ಅಂಶ ಹೇಳಿದೆ. 'ಎನಕ್ಕಾವಾರ್ ಆರೊರುವರೇ ....' (51) ಎಂಬಲ್ಲಿ ಪರಮಾತ್ಮನೇ ಆತ್ಮಬಂಧು ಎಂಬುದೂ, 'ವಿಲೈಕ್ಕಾಟ್ಪಡುವರ್ ....' (52) ಎಂಬಲ್ಲಿ ಶೇಷತ್ವಜ್ಞಾನವಿಲ್ಲದವರ ನಿಂದೆ, ಶ್ರೀವಿಶಿಷ್ಟಪರಮಾತ್ಮನನ್ನು ಶರಣು ಹೊಂದುವುದು 'ಮನಕ್ಕೇದಂ ಶಾರಾ ಮದು-ಶೂದನ್ ತನ್ನೈತ್ ತನಕ್ಕೇ ತಾನ್ ತಂಜಮಾಕ್ಕೊಳ್ಳಿಲ್ .... ಶೆನ್ಱು ಒನ್ಱಿ ನಿನ್ಱು ತಿರು' (61) ಎಂಬಲ್ಲಿಯೂ 'ನಲಮಾಹ ನಾರಣನೈ ನಾಪತಿಯೈ ಞಾನಪ್ಪೆರುಮಾನೈ ಶೀರಣನೈ ಯೇತ್ತುಂ ತಿಱಂ' (67) ಎಂದು ಸ್ತುತ್ಯತ್ವವೂ, 'ಮಾಮೇನಿ ಮಾಯವನೈ ಅಲ್ಲಾದೊನ್ಱೇತ್ತಾದು ಎನ್ ನಾ' (74) ಎಂದು ಪಾರಮೈಕಾಂತ್ಯವೂ, 'ಪಾಟ್ಟುಂ ಮುಱೈಯುಂ ಪಡುಕದೈಯುಂ ಪಲ್ಪೊರುಳುಂ .... ತನ ಮಾಯೈಯಿಲ್ ಪಟ್ಟ ತಱ್ಪು' (76) ಎಂದೂ, 'ಎನ್ಱುಂ ಮಱಂದರಿಯೇನ್ ಎನ್ ನೆಂಜತ್ತೇ ವೈತ್ತು ನಿನ್ಱುಂ ಇರುಂದುಂ ನೆಡುಮಾಲೈ, ಎನ್ಱುಂ ತಿರುವಿರುಂದ ಮಾರ್ಪನ್ ಶಿರೀದರನುಕ್ಕಾಳಾಯ್ ಕರುವಿರುಂದ ನಾಳ್ ಮುದಲಾಕ್ಕಾಪ್ಪು' (92) ಎಂದೂ ನಿಗಮಿಸಿದ್ದಾರೆ. 'ಆಕ್ಕೈ ಕೊಡುತ್ತಳಿತ್ತ ಕೋನೇ, ಗುಣಪ್ಪರನೇ' (93) ಎಂದು ದೇಹಾದಿಗಳನ್ನು ಕೊಟ್ಟ ಸೃಷ್ಟಿಮತ್ತ್ವವೂ 'ಏನ್ಱೇನ್ ಅಡಿಮೈ ... ಇಡನಾಡು ಕಾಣ ಇನಿ' (95) ಎಂಬಲ್ಲಿ ಮೋಕ್ಷಕ್ಕಾಗಿ ಉಪಾಯಾನುಷ್ಠಾನವೂ, 'ಇನಿಯಱಿಂದೇನ್ ಕಾರಣನ್ ನೀ ಕಱ್ಱವೈ ನೀ ಕಱ್ಪವೈ ನೀ ನಱ್ಕಿರಿಶೈ ನಾರಣನ್ ನೀ' (96) ಎಂದು ಕಾರಣತ್ವ, ಫಲಪ್ರದತ್ವ, ಆರಾಧ್ಯತ್ವ ಮುಂತಾದ ಗುಣಗಳನ್ನು ಪ್ರತಿಪಾದಿಸಿದ್ದಾರೆ.

5. **ತಿರುಚ್ಚಂದ ವಿರುತ್ತ**ದಲ್ಲಿ - ಗಹನವಾದ ಉಪನಿಷದರ್ಥಗಳನ್ನು ಒಗಟುಗಳಂತೆ ಗಹನವಾಗಿಯೇ ಪ್ರತಿಪಾದಿಸಿದ್ದಾರೆ. ಇದರಲ್ಲಿ ಬ್ರಹ್ಮಸೂತ್ರಾಂತರ್ಗತ ಅಭಿನ್ನೋಪಾದಾನನಿಮಿತ್ತತ್ವ, ಜಗತ್ಪರಿಣಾಮವಾದ, ಸಮಷ್ಟಿ-ವ್ಯಷ್ಟಿ ಸೃಷ್ಟಿ, ತತ್ತ್ವಾದಿಗಳ ಗಣನೆ, ಮಂತ್ರಗಳ ಹಿರಿಮೆ ಮುಂತಾದ ಅನೇಕ ಅಂಶಗಳು ಹೇಳಲ್ಪಟ್ಟಿವೆ. ಇಲ್ಲೂ ಶ್ರಿಯಃಪತಿಯೇ ಪರದೇವತೆಯೆಂದು 'ಪೋದಿಲ್ಮಂಗೈ, ಪೂತಲಕ್ಕೞಿತ್ತಿ ದೇವಿ ಅನ್ಱಿಯುಂ ಪೋದು ತಂಗು ನಾನ್ಮುಹನ್ ಮಹನ್ ಅವನ್ ಮಹನ್ ಶೊಲಿಲ್ ಮಾದು ತಂಗು ಕೂಱನ್ ಏಱದೂರ್ದಿ ಎನ್ಱು ವೇದನೂಲ್ ಓದುಹಿನ್ಱದುಣ್ಮೈಯಲ್ಲದಿಲ್ಲೈ' (72) ಎಂಬಲ್ಲಿಯೂ, 'ಅತ್ತನಾಹಿ ಅನ್ನೈಯಾಹಿ ಆಳುಂ ಎಂಬಿರಾನುಮಾಯ್ ಒತ್ತೊವ್ವಾದ ಪಲ್ಪಿರಪ್ಪೊೞಿತ್ತು ನಮ್ಮೈ-ಯಾಟ್ಕೊಳ್ವಾನ್ ಮುತ್ತನಾರ್ ಮುಕುಂದನಾರ್ ಪುಹುಂದು ನಮ್ಮುಳ್ ಮೇವಿನಾರ್' (115) ಎಂಬಲ್ಲಿ ಪರಮಾತ್ಮನ ಸಕಲವಿಧ ಆತ್ಮಬಂಧುತ್ವ, ಶೇಷಿತ್ವ, ಕರ್ಮ ನಿವರ್ತಕತ್ವ, ಕೈಂಕರ್ಯರೂಪ ಪರಮಪುರುಷಾರ್ಥ (ಮೋಕ್ಷ)ಪ್ರದತ್ವ, ಅಂತರ್ಯಾಮಿತ್ವಾದಿಗಳು ಸೊಗಸಾಗಿ ಹೇಳಲಾಗಿವೆ. 'ಅಡೈಂದ ಮಾಲ ಪಾದಮೇ ಅಡೈಂದು ನಾಳುಂ ಉಯ್ಮ್ಮಿನೋ' (81) ಎಂಬಲ್ಲಿ ಉಪಾಯವೂ, 'ನಿನ್ನಿಲಂಗು ಪಾದಮನ್ಱಿ ಮಱ್ಱೋರ್ ಪಱ್ಱಿಲೇನ್ ಎಂ ಈಶನೇ' (90) ಎಂದು ಅನನ್ಯಗತಿಕತ್ವವೂ, 'ಪೆಱಱ್ಕರಿಯ ನಿನ್ನ ಪಾದ ಪತ್ತಿಯಾನ ಪಾಶನಂ ಪೆಱಱ್ಕರಿಯ ಮಾಯನೇ ಎನಕ್ಕು ನಲ್ಹು

ವೇಂಡುಮೇ' (100) ಎಂದು ಭಕ್ತಿ ಪ್ರಾರ್ಥನೆಯೂ, 'ಪರಂದ ಶಿಂದೈಯೊನ್ಱಿ ನಿನ್ಱು ನಿನ್ನ ಪಾದ ಪಂಗಯಂ ನಿರಂತರಂ ನಿನ್ನೈಪ್ಪದಾಹ ನೀ ನಿನ್ನೈಕ್ಕ ವೇಂಡುಮೇ' (101) ಎಂದು ಪರಮಾತ್ಮಾಯತ್ತಕರ್ತೃತ್ವ ಅನುಸಂಧಾನದೊಡನೆ ತತ್ಪ್ರೀತ್ಯರ್ಥವಾದ ಉಪಾಸನ ಅವನನುಗ್ರಹದಿಂದಲೇ ಲಭಿಸಬೇಕೆಂದೂ ತೋರಿಸಿರುವರು. ಜಗಚ್ಛರೀರಿತ್ವ, ತತ್ತ್ವ-ಪ್ರವರ್ತಕತ್ವ ಮುಂತಾದವು ವಿಸ್ತೃತವಾಗಿ ಹೇಳಲ್ಪಟ್ಟಿವೆ. ನನ್ನ ಆತ್ಮಕ್ಕೆ ನೀನೇ ಆಲಂಬನವೆಂಬುದನ್ನು 'ಎಟ್ಟೆೞುತ್ತುಂ ವಾರಮಾಹ ಓದುವಾರ್ಗಳ್ ವಲ್ಲರ್ ವಾನಮಾಳವೇ' (78) ಎಂದೂ, 'ಎನ್ನದಾವಿಯೆನ್ನುಂ ವಲ್ವಿನೈಯಿ-ನುಟ್ಕೊೞುಂದೆೞುಂದು ಉನ್ನಪಾದಮೆನ್ನ ನಿನ್ಱ ಒಣ್ಮುಡಕ್ಕೊೞುಮಲರ್ ಮನ್ನ ವಂದು ಪೂಂಡು ವಾಟ್ಪಮಿನ್ಱಿ ಎಂಗುಂ ನಿನ್ಱದೇ' (119) ಎಂದೂ, ನಿಗಮನದಲ್ಲಿ 'ಆದಲಾಲ್ ಎನ್ನಾವಿ ತಾನ್ ಇಯಕ್ಕೆಲಾಂ ಅಱುತ್ತಱಾದ ಇನ್ಬವೀಡು ಪೆಱ್ಱದೆ' (120) ಎಂದು ಪರಮಪದದಲ್ಲಿ ನಿರತಿಶಯಾನಂದರೂಪಬ್ರಹ್ಮಾನುಭವವೆಂಬ ಪುರುಷಾರ್ಥವನ್ನು ವಿವರಿಸಿದ್ದಾರೆ. 'ತನ್ನುಳೇ ತಿರೈತ್ತೆೞುಂ ....' (10) ಎಂಬಲ್ಲಿ ಜಗತ್ಕಾರಣವನ್ನು ಸೊಗಸಾಗಿ ವಿವರಿಸಿದ್ದಾರೆ.

ಪ್ರಪನ್ನಜನಕೂಟಸ್ಥರೆಂದು ಪ್ರಸಿದ್ಧರೂ, ವೇದಂ ತಮಿೞ್ಸೆಯ್ದ ಮಾಱನ್ ಎಂಬಂತೆ ನಾಲ್ಕು ವೇದಗಳನ್ನು ನಾಲ್ಕು ಗ್ರಂಥಗಳಾಗಿ ಪರಿವರ್ತಿಸಿದ ದ್ರಾಮಿಡ ಬ್ರಹ್ಮದರ್ಶೀ (ಮಹರ್ಷಿ) ಎಂದೂ ಕೊಂಡಾಡಲ್ಪಡುವ ಭಗವಂತನ ಶಠಾರಿ (ಪಾದ ಕಮಲಗಳು) ಅವತಾರವಾದ, ಆಚಾರ್ಯ, ಆೞ್ವಾರ್ ಉಭಯಗೋಷ್ಠೀ ಪ್ರವಿಷ್ಟರಾದ ನಮ್ಮಾೞ್ವಾರವರ ಗ್ರಂಥಗಳೇ ವಿಶಿಷ್ಟಾದ್ವೈತಪ್ರವರ್ತಕರುಗಳಾದ ಶ್ರೀಮನ್ನಾಥಮುನಿ, ಶ್ರೀಮದ್ಯಾಮುನಾಚಾರ್ಯ ಹಾಗೂ ಭಗವದ್ರಾಮಾನುಜರಿಗೆ ಅತ್ಯಂತ ಉತ್ತೇಜನವಾಗಿದ್ದವು.

6. ಇವರ ಕೃತಿಗಳಲ್ಲಿ ಋಗ್ವೇದಸಾರವಾದ **ತಿರುವಿರುತ್ತ**ದಲ್ಲಿ - ತಿರುವಾಯ್ಮೊೞಿಯ ಒಂದೊಂದು ದಶಕಕ್ಕೆ ಒಂದು ಹಾಡಿನಂತೆ ಹಿರಿಯರು ಗುರುತಿಸಿರುವುದರಿಂದ ಆಯಾ ಅರ್ಥಗಳೂ ದ್ಯೋತಿತ. ಅಲ್ಲದೆ, ಅವಿದ್ಯೆಯಾದ ಕರ್ಮಸಂಬಂಧ, ಅದರಿಂದ ಶರೀರಾದಿ ಪರಿಗ್ರಹ, ಸಂಸಾರ, ಇಂತಹ ಹೇಯ ಅಂಶವಿಲ್ಲದೆ ಸ್ವೇಚ್ಛೆಯಿಂದ ಭಗವಂತ ಚೇತನೋದ್ಧಾರಕ್ಕಾಗಿ ಅವತರಿಸುವಿಕೆ ಎಲ್ಲ 'ಪೊಯ್ನ್ನಿನ್ಱ ಞಾನಮುಂ ಪೊಲ್ಲಾವೊೞುಕ್ಕುಂ ಅೞುಕ್ಕುಡಂಬುಂ .... ಇಮ್ಮೈಯೋರ್ ತಲೈವಾ' (1) ಎಂಬಲ್ಲಿ ಹೇಳಿವೆ. ಇಲ್ಲಿ ನಿತ್ಯರನ್ನೂ ಇಮ್ಮೈಯೋರ್ ಎಂಬುದರಿಂದ ಸೂಚಿಸಬಹುದು. ನಾಯಕಿಭಾವದಿಂದ ಭಗವದ್ವಿಶ್ಲೇಷವನ್ನು ತಡೆಯಲಾರದೆ ಭಾವಬಂಧದ ದಾರ್ಢ್ಯದಿಂದ ಚಿಮ್ಮಿರುವ ಆೞ್ವಾರ್ರ ಹಾಡುಗಳಲ್ಲಿ ಆ ಭಕ್ತಿ ಸೀಮೆ ಬಹುವ್ಯಕ್ತವಾಗಿದೆ. ದೂತ್ಯಕ್ಕಾಗಿ ಪಕ್ಷಿಗಳನ್ನೆಲ್ಲ ವರಿಸಿ ಅವುಗಳ ಮೂಲಕ ಸಂದೇಶ ಕಳುಹಿಸುವ ಪಂಥವೂ ಅನುಸರಿಸಿದೆ. ಪರಮಾತ್ಮ ಶೇಷತ್ವಾನುಸಂಧಾನದೊಡನೆ ಕೈಂಕರ್ಯವೃತ್ತಿಯನ್ನು 'ಶೂಟ್ಟುನನ್ಮಾಲೈಹಳ್ ತೂಯನವೇಂದಿ .... ಅಡಲಾಯರ್ ತಂ ಕೊಂಬಿನುಕ್ಕೇ' (21) ಎಂಬಲ್ಲಿ ಹೇಳಿದೆ. ಶ್ರೀಮನ್ನಾರಾಯಣನ ಸರ್ವಾಧಿಕತ್ವ 'ತಿಱಲ್ರೋರಮರರ್ ತಂಕೋನುಡೈಯ ತಂಕೋನ್ ಉಂಬರೆಲ್ಲಾಯವರ್ಕ್ಕುಂ ತಂಕೋನ್ ನಂಕೋನ್' (25) ಎಂಬಲ್ಲಿಯೂ, 'ನೀಲತ್ತಡವರೈ ಮೇಲ್ ಪುಂಡರೀಕ ನೆಡುಂತಡಂಗಳ್ ಪೋಲಪ್ಪೊಲಿಂದು .... ಎಂಬಿರಾನ್ ಕಣ್ಣಿನ್ ಕೋಲಂಗಳೇ' (39) ಎಂಬಲ್ಲಿ ಪುಂಡರೀಕಾಕ್ಷತ್ವ-ಲಿಂಗದಿಂದಲೂ, 'ನೀಂಡ ಅಂಡತ್ತು ಉೞಱಲರ್ ಞಾನಚ್ಚುಡರ್ ವಿಳಕ್ಕಾಯ್ ಉಯರ್ನ್ದೋರೈ-ಯಿಲ್ಲಾ ಅೞಱಲರ್ ತಾಮರೈಕ್ಕಣ್ಣನ್' (58) ಎಂದೂ, 'ವೇದನೈ ವೆಣ್ಪುರಿನೂಲನೈ, ವಿಣ್ಣೋರ್ ಪರವ ನಿನ್ಱ ನಾದನೈ, ಞಾಲಂ ವಿೞುಂಗುಂ ಅನಾದನೈ .... ಶೀರಿಯರೇ' (79) ಎಂಬಲ್ಲಿ ಇಂತಹ ಪರಾತ್ಪರನ ಭಕ್ತಿಪೂರ್ವಕಸೇವೆಯೇ ಉತ್ತಮಹಿತವೆಂದೂ, 'ಕಾಲೈವೆಯ್ಯೋಱ್ಕು ಮುನ್ನೋಟ್ಟುಕ್ .... ನಿನ್ನೈಯಾರ್ ಅವನ್ ಮೈಪ್ಪಡಿಯೆ' (93) ಎಂದೂ ಈ ಅಂಶವನ್ನು ವಿವರಿಸಿ 'ತಿರುಮಾಲೈ ವಣಂಗುಮಿನೇ' (95) ಎಂದು ಸರ್ವವಿಧ ಆತ್ಮಬಂಧುವಾದ ಪರಮಾತ್ಮನ ಪ್ರಪತ್ತಿಯೇ ಪರಮ ಹಿತವೆಂದು ಉಪದೇಶಿಸಿದ್ದಾರೆ. 'ತುಂಜಾ ಮುನಿವರುಂ ....' (98) ಎಂಬಲ್ಲಿ ಸರ್ವಸೇವ್ಯತ್ವ, ಮೋಕ್ಷಪ್ರದತ್ವಗಳೂ, ಇದನ್ನೇ 'ಈನಚ್ಚೊಲ್' (99) ಎಂಬಲ್ಲಿ ದೃಢಪಡಿಸಿ ನಿಗಮನದಲ್ಲಿ (100) ಈ ಸೂಕ್ತಿಗಳಿಂದ ಭಗವದ್ಭಕ್ತಿ, ಪ್ರಾವಣ್ಯ ಉಂಟಾದರೆ ಕರ್ಮಾತ್ಯಂತಕ್ಷಯವೇರ್ಪಡುವುದೆಂದೂ ತಿಳಿಸಿದ್ದಾರೆ.

7. ಯಜುರ್ವೇದ ಸಾರವಾದ **ತಿರುವಾಶಿರಿಯ**ದಲ್ಲಿ - 'ವೇದಾಹಮೇತಂ ಪುರುಷಂ ಮಹಾನ್ತಂ ಆದಿತ್ಯವರ್ಣಂ ತಮಸಸ್ತು ಪಾರೇ' (ತೈ.ಆ. 3.38) ಎಂಬಂತೆ ಪರಮಾತ್ಮನ ದಿವ್ಯಮಂಗಳವಿಗ್ರಹವನ್ನೂ, ಗುಣಗಣಗಳನ್ನೂ ಸ್ತುತಿಸಿ, 'ಶಿವನಯನಿಂದಿರನಿವರ್ ಮುದಲನೈತ್ತೋರ್ ದೆಯ್ವಕ್ಕುೞಾಂಗಳ್ ಕೈ ತೊೞಕ್ಕಿಡಂದ ತಾಮರೈಯುಂದಿತ್ ತನಿಪ್ಪೆರು-ನಾಯಕ' (1) ಎಂದು 'ಯೋ ದೇವೇಷ್ವಧಿ ದೇವ ಏಕ ಆಸೀತ್ ಕಸ್ಮೈ ದೇವಾಯ ಹವಿಷಾ ವಿಧೇಮ' (ತೈ.ಸಂ. 4.1.34) ಎಂಬರ್ಥವನ್ನೂ, 'ಉಲಹು ಪಡೈತ್ತುಂಡ ಎಂದೈ' (2) ಎಂದು ಜಗತ್ಕಾರಣತ್ವವನ್ನೂ 'ಯತೋ ವಾ ಇಮಾನಿ ಭೂತಾನಿ ಜಾಯಂತೇ .... ತದ್ಬ್ರಹ್ಮ' (ತೈ.ಆ. 5.33) ಎಂಬಂತೆಯೂ, ಪರಮಾತ್ಮಶೇಷತ್ವವನ್ನು 'ತನಿಮಾತ್ತೈಯ್ವತ್ತಡಿಯವರ್ಕ್ಕಿನಿ ನಾಮಾಳಾಹವೇ ಇಶೈಯುಂ ಕೊಲ್' (3) ಎಂದು ಭಾಗವತನಿಷ್ಠೆಪರ್ಯನ್ತ ಹೇಳಿ, 'ಇರುಂ ಪೊರುಟ್ಕೆಲ್ಲಾಂ ಅರುಂಪೆಱಲ್ ತನಿ ವಿತ್ತು ಒರು ತಾನಾಹಿತ್ ತೆಯ್ವ ನಾನ್ಮುಕಕ್ಕೊೞುಮುಳೈಯೀನ್ಱ .... ಮೂವುಲಹಂ ವಿಳೈತ್ತ ಉಂದಿ ಮಾಯಕ್-

ಕಡವುಳ್ ಮಾಮುದಲಡಿಯೇ' (4) ಎಂದು 'ಬ್ರಹ್ಮ ವನಂ ಬ್ರಹ್ಮ ಸ ವೃಕ್ಷ ಆಸಿದ್ಯತೋ ದ್ಯಾವಾಪೃಥಿವೀ ನಿಶ್ಟತಕ್ಷುಃ' (ತೈ.ಬ್ರಾ. 2.8.76,77) ಎಂಬ ಅಭಿನ್ನೋಪಾದಾನನಿಮಿತ್ತಕಾರಣತ್ವವನ್ನೂ, 'ನೆಡಿಯೋಯ್ಕ್ಕಲ್ಲದಡಿಯದೋ ಉಲಹೇ?' (5) ಎಂಬಲ್ಲಿ ಶೇಷತ್ವಾನುಸಂಧಾನದೊಡನೆ ಸೇವ್ಯ ಶ್ರೀಮನ್ನಾರಾಯಣನಲ್ಲದೇ ಬೇರೆ ಯಾರಾದಾರು? ಎಂದಿದ್ದಾರೆ. ಸರ್ವಜಗಚ್ಛರೀರಿತ್ವವನ್ನು 'ನಳಿರ್ಮದಿಚ್ಚಡೈಯನುಂ ನಾನ್ಮುಕಕ್ಕಡವುಳುಂ .... ಒರುಪೊರುಳ್ ಪುರಪ್ಪಾಡಿನ್ಱಿ ಮುಟುವದುಂ ಅಹಪ್ಪಡಕ್ಕರಂದು ....' (7) ಎಂಬಲ್ಲಿ 'ಯಚ್ಚ ಕಿಂಚಿಜ್ಜಗತ್ಯಸ್ಮಿನ್ ದೃಶ್ಯತೇ ಶ್ರೂಯತೇಽಪಿ ವಾ । ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ' (ತೈ.ಆ. 6.25) ಎಂಬರ್ಥವನ್ನು ವಿವರಿಸಿದ್ದಾರೆ.

8. ಸಾಮವೇದ ಸಾರವಾದ **ತಿರುವಾಯ್ಮೊೞಿ**ಯಲ್ಲಿ ಹೇಳಿರುವ ಅಂಶಗಳನ್ನು ವಾಙ್ಮನಸಗಳಿಂದ ಪೂರ್ಣವಾಗಿ ಅರಿಯಲಶಕ್ಯ. ಅಂತಹ ವೇದಾಂತವಿಷಯಗಳ ಗಣಿಯಾಗಿದೆ ಈ ಉತ್ತಮಪ್ರಬಂಧ. ಇದರಲ್ಲಿನ 1113 ಗುಣವಿಶೇಷ-ಗಳನ್ನು ದ್ರಮಿಡೋಪನಿಷತ್ತಾತ್ಪರ್ಯರತ್ನಾವಳಿಯಲ್ಲಿ ಶ್ರೀಮನ್ನಿಗಮಾಂತಮಹಾದೇಶಿಕರು ಅನುಭವಿಸಿದ್ದಾರೆ. ನಾವೂ ಜನ್ಮಸಾಫಲ್ಯಾರ್ಥವಾಗಿ ವಿಶಿಷ್ಟಾದ್ವೈತತತ್ತ್ವಗಳ ಪೂರ್ಣವಿವೇಚನೆಯನ್ನು ಈ ಪ್ರಬಂಧದಲ್ಲಿ ಮಾಡ ಬಯಸುವೆವು. ಅಂತೆಯೇ ಇಲ್ಲಿ ಹೇಳಲ್ಪಡುವ ಮುಖ್ಯವಿಷಯವೆಂದರೆ ಶ್ರೀಮನ್ನಾರಾಯಣನು ತನ್ನನ್ನು ಚೇತನರು ಪಡೆಯಲು ತಾನೇ ಉಪಾಯವಾಗಿರುವನು ಎಂಬುದು. ಅಂದರೆ ಪರಮಾತ್ಮನ ಸಿದ್ಧೋಪಾಯತ್ವ, ಸಾಧ್ಯೋಪಾಯ ಪ್ರವರ್ತಕತ್ವ ಎಂಬ ಅಂಶಗಳು ಪ್ರಧಾನ.

ಇಲ್ಲಿಯ ಹತ್ತು ಶತಕಗಳಲ್ಲಿ ಈ ಅಂಶದ ವಿಸ್ತಾರವಾಗಿ, (ಕಲ್ಯಾಣಗುಣ ನಿಧಿಯಾಗಿರುವುದರಿಂದ) ಸೇವಿಸಲು ಅರ್ಹನಾಗಿರುವಿಕೆ, ಅತ್ಯಂತ ಭೋಗ್ಯತ್ವ (ನಿರತಿಶಯ ಆನಂದಮಯತ್ವ, ತತ್ಪ್ರದತ್ವ), ಶುಭಾಶ್ರಯವಾದ ದಿವ್ಯಮಂಗಳ ವಿಗ್ರಹದೊಡನಿರುವಿಕೆ, ಪರಮಪುರುಷಾರ್ಥವಾದ ತನ್ನ ಅನುಭವವೇ ಅತ್ಯಂತ ಆಸೆಪಡತಕ್ಕದ್ದಾಗಿರುವಿಕೆ, ಪರಮ ಶ್ರೇಯಸ್ಸನ್ನೂ, ಅದಕ್ಕೆ ಸಾಧನವನ್ನೂ ಅನುಗ್ರಹಿಸುವುದು, ಶರಣಾಗತರಿಗೆ ವತ್ಸಲನಾಗಿರುವಿಕೆ, ಆಶ್ರಿತರ ಕರ್ಮಾದಿ ವಿರೋಧಿವರ್ಗಗಳನ್ನು ಹೋಗಲಾಡಿಸುವುದು, ಭಕ್ತರಿಗೆ ಪರಾಧೀನನಾಗಿ ನಡೆಯುವಿಕೆ, ಸಹಜವಾಗಿಯೇ ಸರ್ವವಿಧವಾದ ಆತ್ಮಬಂಧುತ್ವ ಮತ್ತು ಮುಕ್ತಿಮಾರ್ಗಕ್ಕೆ ನೇತೃವಾಗಿರುವಿಕೆ ಎಂಬ ಹತ್ತು ವಿಶೇಷಗಳು ಪ್ರತಿಪಾದಿತವಾಗಿವೆ. ಇವು ಮುಂದೆ ಒಂದೊಂದು ದಶಕಗಳಲ್ಲೂ ಮತ್ತು ಒಂದೊಂದು ಹಾಡಿನಲ್ಲೂ ವಿಸ್ತರಿಸಲಾಗಿದೆ.

ಶ್ರೀಯೊಡನೆ ಸರ್ವಕಾಲಗಳಲ್ಲೂ ಕೂಡಿರುವ ನಾರಾಯಣನೇ ಉಪಾಯವೆಂಬರ್ಥ 'ಒಂಡೊಡಿಯಾಳ್ ತಿರುಮಹಳುಂ ನೀಯುಮೇ ನಿಲಾ ನಿಱ್ಪ' (4.9.10), 'ವೇರಿಮಾಱಾದ ಪೂಮೇಲಿರುಪ್ಪಾಳ್ ವಿನೈ ತೀರ್ಕ್ಕುಮೇ' (4.5.11) ಎಂಬಲ್ಲಿ ಸ್ಪಷ್ಟವಾಗಿ ಮಹಾಲಕ್ಷ್ಮಿಯ ಕರ್ಮಬಂಧಕ್ಷಯಪೂರ್ವಕ ಮೋಕ್ಷಪ್ರದತ್ವವೂ, 'ಕೋಲತ್ತಿರುಮಾಮಹಳೋಡು ಉನ್ನೈಕ್ ಕೂಡಾದೇ' (6.9.3), 'ನಿನ್ ತಿರುವರುಳುಂ ಪಂಗಯತ್ತಾಳ್ ತಿರುವರುಳುಂ ಕೊಂಡು' (9.2.1), 'ಉನ್ ತಾಮರೈ ಮಂಗೈಯುಂ ನೀಯುಂ' (9.2.3), 'ಅಹಲಹಿಲ್ಲೇನಿಱೈಯುಂ ಎನ್ಱಲರ್ಮೇಲ್ಮಂಗೈ ಉಱೈ ಮಾರ್ಪಾ' (6.10.10) 'ತಿರುಮಾಮಹಳ್ ಕೇಳ್ವಾ! ದೇವಾ!' (6.10.4) ಮುಂತಾದ ಅನೇಕ ಕಡೆಗಳಲ್ಲಿ 'ಶ್ರದ್ಧಯಾ ದೇವೋ ದೇವತ್ವಂ ಅಶ್ನುತೇ' (ತೈ.ಕಾ. 3.11) ಎಂದು ಶ್ರುತಿ ಶ್ರೀನಿತ್ಯಯೋಗದಿಂದ ಪರದೇವತಾನಿಷ್ಕರ್ಷ ಮಾಡಿರುವುದರ ಅನುವಾದವಾಗಿದೆ. 'ನಾಹನ್ನೈ ಮಿಶೈ ನಂಬಿರಾನ್ ಶರಣೇ ಶರಣ್ ನಮಕ್ಕೆನ್ಱು' (5.10.11), 'ಕಣ್ಣನಲ್ಲಾಲ್ ಇಲ್ಲೈ ಕಂಡೀರ್ ಶರಣ್' (9.1.10), 'ತಿರುವೇಂಗಡತ್ತಾನೇ! ಪುಹಲೊನ್ಱಿಲ್ಲಾ ಅಡಿಯೇನ್ ಉನ್ನಡಿಕ್ಕೀೞ್ ಅಮರ್ನ್ದು ಪುಹುಂದೇನೇ' (6.10. 10) ಇತ್ಯಾದಿಗಳಲ್ಲಿ ಅನನ್ಯಗತಿಕತ್ವವನ್ನು ಸ್ಪಷ್ಟಪಡಿಸಿ ಅನುಷ್ಠಾನದಲ್ಲಿಯೂ ತೋರಿಸಿದೆ.

ಹೀಗೆ ಸಂಗೃಹೀತವಾದ ಪ್ರಬಂಧಾರ್ಥವು ಶಾರೀರಕಶಾಸ್ತ್ರವಾದ ಬ್ರಹ್ಮಸೂತ್ರಗಳ ಅಭಿಪ್ರಾಯವನ್ನೂ ತಿಳಿಸುವುದೆಂಬುದನ್ನು ನೋಡೋಣ. ಅಲ್ಲಿಯ 16 ಪಾದಗಳ ಪ್ರತಿಪಾದ್ಯ ವಿಷಯಗಳನ್ನು ಕೆಳಗೆ ನಿರೂಪಿಸಿದೆ. ಅದರಂತೆ -

1) ಸ್ರಷ್ಟೃತ್ವಗುಣವು ಚೇತನಾಚೇತನಗಳಿಗಿಂತ ಅತ್ಯಂತವಿಲಕ್ಷಣನೆಂಬುದರೊಡನೆ 'ಉಯರ್ವಱ' (1.1) ದಶಕದಲ್ಲಿ 'ಮನನುಣರ್ವು ಅಳವಿಲನ್' (1.1.2) ಎಂದು ಚೇತನವೈಲಕ್ಷಣ್ಯವೂ, 'ಪೊರಿ ಉಣರ್ವು ಅವೈಯಿಲನ್' (1.1.2) ಎಂದು ಅಚೇತನವೈಲಕ್ಷಣ್ಯವೂ ಹೇಳಿ ತಿಳಿಸಲ್ಪಟ್ಟಿದೆ.

2) ದೇಹಿತ್ವ ಅಂದರೆ ಆತ್ಮನಾಗಿರುವಿಕೆ 'ಇಲನದು ಉಡೈಯನಿದು ಎನ ನಿನೈವರಿಯವನ್ ನಿಲನಿಡೈ ವಿಶುಂಬಿಡೈ ಉರುವಿನನ್ ಅರುವಿನನ್ ಪುಲನೊಡು ಪುಲನಲನ್' (1.1.3) ಎಂದು ಸಂಗೃಹೀತ.

3) ಸ್ವನಿಷ್ಠತ್ವ, ಅಂದರೆ ತನಗೆ ಬೇರೆ ಆಧಾರ, ಕಾರಣಾದಿಗಳಿಲ್ಲದಿರುವಿಕೆ 'ಅನ್ನಲನುಡೈ ಒರುವನೈ' (1.1.3) ಎಂದೂ

4) ನಿರವಧಿಕಮಾಹಾತ್ಮ್ಯವು 'ಉಯರ್ವಱ ಉಯರ್ನಲಂ ಉಡೈಯವನ್' (1.1.1) ಇತ್ಯಾದಿ ಅನೇಕವೆಡೆಗಳಲ್ಲಿಯೂ ಹೇಳಿದೆ. ಹೀಗೆ ಮೊದಲು ಅಧ್ಯಾಯದ ಅರ್ಥವಾದ ಜಗತ್ಕಾರಣತ್ವ ಹೇಳಿದ್ದು, ಶರೀರಾತ್ಮಭಾವಸಂಬಂಧವು ಸ್ಪಷ್ಟವಾಗಿ 'ನಾಮವನ್' (1.1.4), 'ಅವರವರ್' (1.1.5), 'ನಿನ್ಱನರ್' (1.1.6), 'ತಿಡವಿಶುಂಬು' (1.1.7) ಎಂಬ ಹಾಡುಗಳಲ್ಲಿ ಹೇಳಿದೆ. 'ಉಡಲ್ ಮಿಶೈ ಉಯಿರೆನಕ್ಕರಂದು ಎಂಗುಂ ಪರಂದುಳನ್' (1.1.7) ಎಂದು ವ್ಯಕ್ತ.

5) ಅಪಾಸ್ತಬಾಧಃ - ಪ್ರಮಾಣಾಂತರಗಳಿಂದ ಅಲ್ಲಗಳೆಯಲಾರದ ಮಹಿಮೆಯು 'ಶುಡರ್ ಮಿಹು ಶುರುದಿಯುಳ್' (1.1.7), 'ಉಳನೆನಿಲ್ ಉಳನ್ .... ಒಟಿವಿಲನ್ ಪರಂದೇ' (1.1.9) ಎಂಬಲ್ಲಿಯೂ ಹೇಳಲಾಗಿದೆ.

6) ಶ್ರಿತಾಪ್ತಃ ಎಂಬ ಭಕ್ತರಕ್ಷಕತ್ವ 'ಶುರರಱಿವರುನಿಲೈ' (1.1.8) ಮತ್ತು 'ಉಳನ್ ಎನಿಲ್ ಉಳನ್' (1.1.9) ಎಂಬಲ್ಲಿ ಪ್ರತಿಪಾದಿತ.

7) ಖಾತ್ಮಾದೇಃ 8) ಇಂದ್ರಿಯಾದೇಃ ಉಚಿತಜನನಕೃತ್ - ಆಕಾಶ, ಪ್ರಾಣವಾಯು, ಜೀವಾತ್ಮ, ಇಂದ್ರಿಯಗಳು ಮುಂತಾದವಕ್ಕೆ ಸೃಷ್ಟಿಕಾರಣನಾಗುವಿಕೆ 'ಶುರರಱಿವರುನಿಲೈ' (1.1.8) ಮತ್ತು 'ಶುಡರ್ ಮಿಹು ಶುರುದಿಯುಳ್' (1.1.7) ಎಂಬಲ್ಲಿಯೂ ಸೂಚಿತ. ಹೀಗೆ ಎರಡು ಅಧ್ಯಾಯಗಳ ಸಂಗ್ರಹ ಆಯಿತು.

9) ಸಂಸ್ಕೃತೌ ತಂತ್ರವಾಹೀ - ಸಂಸಾರ ನಿರ್ವಾಹಕತ್ವ, ಭಗವಂತನನ್ನುಳಿದ ಇತರ ವಸ್ತುಗಳ ದೋಷ ಪೂರ್ಣತೆ, ಜೀವಾತ್ಮನ ಅಹಂಕಾರ, ಮಮಕಾರಾದಿ ದೋಷಗಳು ಮುಂತಾದವು 'ವೀಡುಮಿನ್ ಮುಱ್ಱವುಂ' (1.2.1), 'ಮಿನ್ನಿನ್ನಿಲೈಯಿಲ' (1.2.2), 'ನೀರ್ ನುಮದೆನ್ಱಿವೈ ....' (1.2.3) ಮುಂತಾದೆಡೆ ಹೇಳಿದೆ.

10) ನಿರ್ದೋಷತ್ವಾದಿ ರಮ್ಯಃ - ಅಖಿಲಹೇಯಪ್ರತ್ಯನೀಕತ್ವ ಹಾಗೂ ಕಲ್ಯಾಣಗುಣಾಕರತ್ವವೆಂಬ ಉಭಯಲಿಂಗಗಳು 'ಇಲ್ಲದುಂ ಉಳ್ಳದುಂ .... ಎಲ್ಲೈಯಿಲ್ ಅನ್ನಲಂ' (1.2.4) ಎಂಬಲ್ಲಿ ಹೇಳಿದೆ.

11) ಇನ್ನು ಭಕ್ತಿಯ ಪ್ರಕಾರಗಳನ್ನು (ಬ್ರಹ್ಮವಿದ್ಯಾ ಭೇದಗಳನ್ನು) ಮುಂದಿನ ಹಾಡುಗಳಲ್ಲಿ ಪ್ರಸ್ತಾಪಿಸಿ ಅದಕ್ಕೆ ಅಪೇಕ್ಷಿತವಾದ ಭಕ್ತವತ್ಸಲತ್ವ ಮುಂದೆ ವಿವರಿಸುತ್ತಾ ಪ್ರಸಂಗತಃ ಅನೇಕ ಭಗವದ್ಗುಣಗಣಗಳನ್ನು ಅನುಭವಿಸಿ ಹತ್ತನೇ ಶತಕದಲ್ಲಿ ಮತ್ತೆ 'ಶಾರ್ವೇ ತವನೆಱಿಕ್ಕು ದಾಮೋದರನ್ ತಾಳ್ಗಳ್' (10.4) ಮತ್ತು 'ಕಣ್ಣನ್ ಕಟಲಿಣೈ' (10.5) ಎಂಬ ದಶಕಗಳಲ್ಲಿ ವಿಸ್ತರಿಸಿದೆ. ಇದರಿಂದ ಬಹುಭಜನಪದತ್ವ ಹೇಳಲಾಯಿತು.

12) ಸ್ವಾರ್ಹಕರ್ಮಪ್ರಸಾದ್ಯಃ ಎಂಬ ಅಂಶ ಭಕ್ತಿಯೋಗ ವಿದ್ಯೆಗಳ ಅನುಷ್ಠಾನಕ್ಕೆ ಕರ್ಮಾನುಷ್ಠಾನ ಅಂಗವಾಗಿರುವ ಕಾರಣ 'ಶಾರ್ವೇ ತವನೆಱಿಕ್ಕು' (10.4) ದಶಕದಲ್ಲಿ ಹೇಳಿದ ಭಕ್ತಿಭೇದಗಳಿಗೆ 'ಕಣ್ಣನ್ ಕಟಲಿಣೈ' (10.5) ದಶಕದಲ್ಲಿ ಹೇಳಿರುವ ಕರ್ಮಾದ್ಯಂಗತ್ವಪ್ರತಿಪಾದನೆಯಿಂದ ವಿವರಿಸಲ್ಪಟ್ಟಿದೆ.

13) ಪಾಪಮೋಚಕತ್ವವು 'ತೀದೊನ್ಱುಮಡೈಯಾ ಏದಂ ಶಾರಾವೇ' (10.5.7), 'ಅಮರಾ ವಿನೈಹಳೇ' (10.5.9), 'ವಿನೈವಲ್ಲಿರುಳೆನ್ನುಂ ಮುನೈಹಳ್ ವೆರುವಿಪ್ಪೋಂ' (10.5.10) ಇತ್ಯಾದಿಗಳಲ್ಲಿ ದರ್ಶಿತ.

14) ಬ್ರಹ್ಮನಾಡೀಗತಿಕೃತ್ ಎಂಬ ವಿಷಯ - 'ವಾನೇರ ವಟಿ ತಂದ ವಾಟ್ಟಾಱ್ಱಾನ್ ಪಣಿವಹೈಯೇ ನಾನೇಱಪ್ಪೆಱು-ಹಿನ್ಱೇನ್' (10.6.5) ಎಂಬಲ್ಲಿ ಹೇಳಿದೆ.

15) ಅತಿವಹನ್ - ಅರ್ಚಿರಾದಿಮಾರ್ಗದ ಮೂಲಕ ಆತಿವಾಹಿಕನಾಗಿ ಮುಕ್ತಿಗೆ ಕರೆದೊಯ್ಯುವುದು 'ಶೂಟ್ಪ್ವಿಶುಂಬಣಿ-ಮುಹಿಲ್' (10.9) ಎಂಬ ದಶಕದಲ್ಲಿ ವಿಶದವಾಗಿ ನಿರೂಪಿಸಿದೆ.

16) ಸಾಮ್ಯವನ್ನು ಕರುಣಿಸಿ ಬ್ರಹ್ಮಾನುಭವವನ್ನುಂಟುಮಾಡುವುದು 'ಅಂದಮಿಲ್ಪೇರಿನ್ಪತ್ತು ಅಡಿಯರೋಡಿರುಂದಮೈ' (10.9.11) ಎಂಬಲ್ಲಿಯೂ, 'ಪೆಱ್ಱು ಇನಿಪ್ಪೋಕ್ಕುವನೋ' (10.10.8) ಎಂದು ಅಪುನರಾವೃತ್ತಿಯೂ ಹೇಳಿದೆ.

ಹೀಗೆ ಶಾರೀರಿಕ ಶಾಸ್ತ್ರಾರ್ಥಕ್ರಮವನ್ನು ಇಲ್ಲಿ ಸೂಚಿಸಿದೆ. ಇಲ್ಲಿ ತತ್ತ್ವ, ಹಿತ, ಪುರುಷಾರ್ಥಗಳೂ, ಅರ್ಥಪಂಚಕವೂ, ದ್ರವ್ಯಾದ್ರವ್ಯಾದಿ ವಿಭಾಗಗಳೂ, ಸ್ವರೂಪ, ಸ್ವಭಾವ ವಿವೇಚನೆಯೊಡನೆ ಬಹು ಸುಂದರವಾಗಿ ಮಾಡಿದ್ದು ಅದನ್ನು ವಿವರಿಸಲು ಪ್ರತ್ಯೇಕ ಲೇಖನವೇ ಬೇಕಾಗುವುದು. ಆದ್ದರಿಂದ ಇಷ್ಟಕ್ಕೆ ಇಲ್ಲಿ ವಿರಮಿಸಲಾಗುವುದು.

'ಉಯರ್ವಱ ಉಯರ್ನಲಂ' (1.1.1) ಎಂಬಲ್ಲಿಯೇ ಪರಮಾತ್ಮನ ಸರ್ವಸ್ಮಾತ್ ಪರತ್ವ, ಅಸಂಖ್ಯೆಯಕಲ್ಯಾಣಗುಣ-ನಿಧಿತ್ವ, ದೋಷರಾಹಿತ್ಯ ಇತ್ಯಾದಿಗಳು ಪ್ರಸ್ತುತವಾಗಿವೆ. ಅವನ ಸರ್ವಶರೀರಿತ್ವದ ಸ್ಪಷ್ಟ ಪ್ರತಿಪಾದನೆಯನ್ನು ಕೆಳಗೆ

ವಿವರಿಸಿದೆ. ಇನ್ನು 'ಶೆಲಕ್ಕಾಣ್ಗಿಱ್ಪಾರ್ ಕಾಣುಮಳವುಂ ಶೆಲ್ಲುಂ ಕೀರ್ತಿಯಾಯ್' (5.8.4), 'ಪಲಪಲವೇ ಆಭರಣಂ ....' (2.5.6), 'ಕಣಕ್ಕಱು ನಲತ್ತನನ್' (1.3.5) ಎಂದು ಬಹುವಾಗಿ ಗುಣವರ್ಣನೆಯೂ 'ಎಙ್ಙನೇಯೋ' (5.5), 'ಕರುಮಾಣಿಕ್ಕಮಲೈ' (8.9) ಇತ್ಯಾದಿಗಳಲ್ಲಿ ರೂಪೌದಾರ್ಯವೂ, 'ಉಡಲಾೞಿಪ್ಪಿಱಪ್ಪು ವೀಡು ಉಯಿರ್ ಮುದಲಾ ಮುಱ್ಱುಮಾಯ್ಕ್ ಕಡಲಾೞಿ ನೀರ್ ತೋಱ್ಱಿ' (1.4.10) 'ತಾನೋರುರುವೇ ತನಿವಿತ್ತಾಯ್' (1.5.4) ಇತ್ಯಾದಿಗಳಲ್ಲಿ ಅನೇಕವಾಗಿ ಜಗತ್ಕಾರಣತ್ವವೂ ಮುಂತಾದ ಅನೇಕ ಅಂಶಗಳು ಪ್ರತಿಪಾದಿತವಾಗಿವೆ.

ಜೀವಾತ್ಮ ಸ್ವರೂಪವನ್ನು 'ಅಡಿಯೇನ್ ಶಿಱಿಯ ಞಾನತ್ತನ್' (1.5.7), 'ನೋಱ್ಱನೋನ್ಬಿಲೇನ್ ನುಣ್ಣಱಿವಿಲೇನ್ ....' (5.7.1) ಇತ್ಯಾದಿ ಆಕಿಂಚನ್ಯ, ಅನನ್ಯಗತಿತ್ವಗಳೊಡನೆ ಬಹುವಾಗಿ ವಿವರಿಸಿ, ಪರಮಾತ್ಮಪ್ರಾಪ್ತಿಗೆ ಆತನ ಅನುಗ್ರಹದಿಂದ ದೊರೆತ ಕರಣಕಳೇಬರಗಳಿಂದ ಅವನನ್ನೇ ಸಿದ್ಧೋಪಾಯವಾಗಿ ವರಿಸುವ ಶರಣಾಗತಿಯನ್ನೇ ಉಪಾಯವಾಗಿ ವಿಧಿಸಿ ಅನುಷ್ಠಿಸಿಯೂ ತೋರಿಸಿದ್ದಾರೆ. ಇಲ್ಲಿ 'ಕಳೈಹಣ್ ಮಱ್ಱಿಲೇನ್' (5.8.8), 'ಉನ್ನಾಲಲ್ಲಾಲ್ ಯಾವರಾಲುಂ ಒನ್ಱುಂ ಕುಱೈ ವೇಂಡೇನ್' (5.8.3), 'ಎನ್ನಾವಿಲಿನ್ ಕವಿ ಯಾನೊರುವರ್ಕ್ಕುಂ ಕೊಡುಕ್ಕಿಲೇನ್' (3.9.1) ಮುಂತಾದೆಡೆ ಪರಮೈಕಾಂತಿಧರ್ಮದೊಡನೆ ಉಪಾಯವನ್ನು ಅನುಷ್ಠಿಸಬೇಕೆಂಬುದು ವ್ಯಕ್ತ.

ಪುರುಷಾರ್ಥವಿಷಯವಾಗಿ 'ಒೞಿವಿಲ್ ಕಾಲಮೆಲ್ಲಾಂ ಉಡನಾಯ್ ಮನ್ನಿ ವೞುವಿಲಾ ಅಡಿಮೈ ಶೆಯ್ಯವೇಂಡುಂ ನಾಂ' (3.3 ದಶಕ) ಪೂರ್ಣವಾಗಿಯೂ, 'ಮೊಯ್ಯಾಮ್ರಂ ಪೂಂಪೊೞಿಲ್ ....' (3.5), 'ಮಾಲೈ ನಣ್ಣಿ' (9.10) ಮುಂತಾದೆಡೆ ಸ್ಪಷ್ಟವಾಗಿ ಭಗವತ್ಕೈಂಕರ್ಯವನ್ನೂ, ದೂತರಾಗಿ ಪಕ್ಷಿಗಳನ್ನು ವರಿಸುವ ವ್ಯಾಜದಲ್ಲಿ ಆಚಾರ್ಯರ, ಭಾಗವತರ ಕೈಂಕರ್ಯವನ್ನೂ, ಪ್ರಭಾವವನ್ನೂ ಅದನ್ನೂ ಭಗವತ್ಪ್ರೀತಿಗಾಗಿ ಮಾಡಬೇಕೆಂದು 'ತನಕ್ಕೇಯಾಹ ಎನ್ನೈಕ್ಕೊಳ್ಳುಮೀದೇ ಎನಕ್ಕೇ ಕಣ್ಣನ್ನೈ ಯಾನ್ ಕೊಳ್ಳುಶಿರಪ್ಪೇ' (2.9.4) ಎಂದೂ, 'ಅಂಜಿಱೈಯ' (1.4), 'ಪೊನ್ನುಲಹಾಳೀರೋ' (6.8), 'ವೈಹಲ್ ಪೂಂಗೞಿವಾಯ್' (6.1), 'ಎಂಗಾನಲಹಂ ಕೞಿವಾಯ್' (9.7) ಮತ್ತು 'ಪಯಿಲುಮ್ ಶುಡರೊಳಿ' (3.7), 'ನೆಡುಮಾಱ್ಕಡಿಮೈ' (8.10) ದಶಕಗಳಲ್ಲಿ ವಿವರಿಸಿದ್ದಾರೆ. ಹೀಗೆ ದ್ರಮಿಡೋಪನಿಷತ್ತೆಂಬ ತಿರುವಾಯ್ಮೊೞಿಯ ಪ್ರತಿಪಾದ್ಯಾಂಶದ ಸೂಚನೆ ಮಾಡಿದೆವು.

9. ಅಥರ್ವವೇದಸಾರವಾದ **ಪೆರಿಯತಿರುವಂದಾದಿ**ಯಲ್ಲಿ - 'ಪೆಱ್ಱ ತಾಯ್ ನೀಯೇ ಪಿಱಪ್ಪಿತ್ತ ತಂದೈ ನೀ ....' (5) ಎಂಬಲ್ಲಿ ಪರಮಾತ್ಮನ ಸರ್ವವಿಧ ಆತ್ಮಬಂಧುತ್ವ, ಜ್ಞಾನಪ್ರದತ್ವವೂ, ಶ್ರೀವಿಶಿಷ್ಟನಾದ ನಾರಾಯಣನ ಪಾದದಲ್ಲಿ ಪ್ರಪತ್ತಿಯೇ ಉಪಾಯವೆಂಬುದನ್ನು 'ಯಾಮೇ ಅರುವಿನ್ನೈಯೋಂ ಶೇಯೋಂ .... ಅಣುಕ್ಕರಾಯ್ಚ್ ಚಾರ್ನ್ದೊೞಿಂದಾರ್, ಪೊಮೇಯ ಶೆಮ್ಮಾದ್ರೈ ನಿನ್ ಮಾರ್ವಿಲ್ ಶೇರ್ವಿತ್ತು ಪಾರಿಡಂದ ಅಮ್ಮಾ ನಿನ್ ಪಾದತ್ತರುಹು' (7) ಇತ್ಯಾದಿ ಅನೇಕ ಕಡೆ ಭಗವಚ್ಛೇಷತ್ವದೊಡನೆ ವರ್ಣಿಸಿದ್ದಾರೆ. 'ಆೞಾದ ಪಾರುಂ ನೀ ವಾನುಂ ನೀ ಕಾಲುಂ ನೀ ತೀಯುಂ ನೀ ನೀರುಂ ನೀಯಾಯ್ ನಿನ್ಱ ನೀ' (11) ಎಂದು ಸರ್ವಾತ್ಮಕತ್ವವೂ, 'ವಾನೋರ್ ಇನತ್ತಲೈವನ್ ಕಣ್ಣನ್' (25) ಎಂದು ದೇವಾಧಿದೇವತ್ವವೂ, 'ಅನ್ಪುಡೈಯನನ್ಱೇ ಅವನ್' (35) ಎಂಬಲ್ಲಿ ಆತನ ಅನುಗ್ರಹಮಯತ್ವವನ್ನೂ, ಪರದೇವತಾನಿಷ್ಕರ್ಷ, ಶರೀರಾತ್ಮ ಭಾವದಿಂದ 'ಅವನಾಂ ಇವನಾಂ ಉವನಾಂ .... ಅವನೇ ಎವನೇಲುಮಾಂ' (36) ಎಂದೂ, ಕರ್ಮಬಂಧನಿವೃತ್ತಿಗೆ ಭಗವದ್ಭಕ್ತಿಯೇ ಉಪಾಯವೆಂದು 'ನೀಂಗಾದ ಮಾಗತಿಯಾಂ ವೆನ್ನರಹಿಲ್ ಶೇರಾಮಲ್ ಕಾಪ್ಪದಱ್ಕು ನೀ ಗತಿಯಾಂ ನೆಂಜೇ ನಿನ್ನೈ' (46), 'ಇಲ್ಲೈ ಕಾಣ್ ಮಱ್ಱೊರಿಱೈ' (60) ಎಂಬಲ್ಲಿಯೂ, 'ಒನ್ಱುಂಡು ಶೆಂಗಣ್ಮಾಲ್ ಯಾನು-ರೈಪ್ಪದು .... ನಿನ್ಪುಹೞಿಲ್ ವೈಹುಂ ತಂ ಶಿಂದೈಯಿಲುಂ ಮಱ್ಱಿನಿದೋ ನೀಯವರ್ಕ್ಕ ವೈಹುಂದಮೆನ್ಱರುಳುಂ ವಾನ್' (53) ಎಂಬಲ್ಲಿ ಭಕ್ತಿಯ ಉತ್ಕರ್ಷವೂ, ಅಪ್ರಾಕೃತಲೋಕವಿಶೇಷವೂ, ಹೇಳಲ್ಪಟ್ಟಿದೆ.

ಹಿತ(ಉಪಾಯ)ದ ವಿಷಯದಲ್ಲಿ 'ವಾೞ್ತ್ತಿ ಅವನಡಿಯೈಪ್ ಪೂಪ್ಪುನೈಂದು, ನಿನ್ ತಲೈಯೈತ್ ತಾೞ್ತ್ತಿ ಇರು ಕೈ ಕೂಪ್ಪು ....' (84) ಎಂದೂ 'ಶೀರ್ ಕಲಂದ ಶೊಲ್ನಿನೈಂದು ಪೋಕ್ಕಾರೇಲ್ಚ್ಚೂೞ್ವಿನೈಯಿನಾೞ್ತುಯರೈ ಎನ್ ನಿನೈಂದು ಪೋಕ್ಕುವರ್?' (86) ಎಂದೂ 'ಎಪ್ಪೋದುಂ ಕೈ ಕೞಲಾ ನೇಮಿಯಾನ್ ನಮ್ಮೇಲ್ ವಿನೈ ಕಡಿವಾನ್ ಮೊಯ್ಕೞಲೇ ಏತ್ತ ಮುಯಲ್' (87) ಎಂದೆಲ್ಲ ಬಹು ಪ್ರಕಾರವಾಗಿ ಪ್ರತಿಪಾದಿಸಿದ್ದಾರೆ. ಪುರುಷಾರ್ಥವೂ ಭಗವದ್ಗುಣಾನುಭವವೇ ಎಂಬುದೂ 'ನಿನ್ ಪುಹೞಿಲ್ ವೈಕುಂ ತಂ ಶಿಂದೈ' (53) ಎಂದೂ 'ಇಪ್ಪೋದುಂ ಇನ್ನುಂ ಇನಿಚ್ಚಿಱಿದು ನಿನ್ಱಾಲುಂ ಎಪ್ಪೋದುಂ ಈದೇ ಶೊಲ್ ಎನ್ನೆಂಜೇ' (87) ಮುಂತಾದೆಡೆಗಳಲ್ಲಿ ವ್ಯಕ್ತವಾಗಿದೆ. ಭಾಗವತರ ಪ್ರಭಾವ ಭಗವಂತನಿಗಿಂತಲೂ ಹೆಚ್ಚು ಎಂಬುದನ್ನು 'ಪುವಿಯುಂ ಇರುವಿಶುಂಬುಂ .... ಯಾನ್ ಪೆರಿಯ್ ನೀ ಪೆರಿಯೈ ಎನ್ಬದನೈ ಯಾರ್ ಅಱಿವಾರ್ .... ಉಳ್ಳು' (75) ಎಂಬಲ್ಲಿ ವರ್ಣಿಸಿದ್ದಾರೆ. (ಈ ಪ್ರಬಂಧಕ್ಕೆ ಪೆರಿಯ ತಿರುವಂದಾದಿ ಎಂದು ಹೆಸರು ಬರಲು ಈ ಹಾಡೇ ಕಾರಣವೆಂಬ ಅಭಿಪ್ರಾಯವೂ ಇದೆ.)

10. ಮಧುರಕವಿ ಆೞ್ವಾರ್ರ **ಕಣ್ಣಿನುಣ್ ಶಿರುತ್ತಾಂಬು** ಆಚಾರ್ಯ ವೈಭವವನ್ನು ಪ್ರತಿಪಾದಿಸುತ್ತೆ. ಇಲ್ಲಿ ಭಗವಂತನ ಸಾಮ್ಯ ಆಚಾರ್ಯನಿಗೂ ಹೇಳಲಾಗಿದೆ. ನಮ್ಮಾೞ್ವಾರ್ರನ್ನೇ ಪರದೇವತೆಯಾಗಿ ಹಾಡಿದ್ದಾರೆ ಮಧುರಕವಿಗಳು. ಆನಂದಮಯವಾಗಿ (ಭೋಗ್ಯವಾಗಿ)ರುವಿಕೆ, ಸ್ತೋತ್ರಕ್ಕೆ ಅರ್ಹವಾಗುವಿಕೆ, ಅಭಿಲಷಿಸತಕ್ಕ ಪುರುಷಾರ್ಥವಾಗಿರುವಿಕೆ, ಪ್ರಶಸ್ತವಾದ ಆತ್ಮಬಾಂಧವ್ಯ, ವಿಷಯ ರುಚಿಯನ್ನು ಹೋಗಿಸುವುದು, ಪರಮಾತ್ಮ ವಿಷಯದಲ್ಲಿ ಪ್ರಾವಣ್ಯವನ್ನುಂಟು-ಮಾಡುವಿಕೆ, ಪಾಪ (ಕರ್ಮ) ನಾಶಕತ್ವ, ದಯಾಪೂರ್ಣತ್ವ, ಜ್ಞಾನಪ್ರದತ್ವ, ತನ್ನ ಸಾಮ್ಯವನ್ನು ಕರುಣಿಸುವದೆಂಬ ಹತ್ತು ಅಂಶಗಳಿಂದ ಆಚಾರ್ಯನು ಈಶ್ವರಸಮನೆಂದು ಉಪದಿಷ್ಟವಾಗಿದೆ. ಇಲ್ಲಿಯೂ 'ಆಚಾರ್ಯವಾನ್ ಪುರುಷೋ ವೇದ' (ಛಾ.ಉ. 6.14.2), 'ಆಚಾರ್ಯಾದ್ಧ್ಯೈವ ವಿದ್ಯಾ ವಿದಿತಾ ಸಾಧಿಷ್ಠಂ ಪ್ರಾಪತ್' (ಛಾ.ಉ. 4.9.3) ಮತ್ತು 'ಯಸ್ಯ ದೇವೇ ಪರಾ ಭಕ್ತಿಃ ಯಥಾ ದೇವೇ ತಥಾ ಗುರೌ । ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶನ್ತೇ ಮಹಾತ್ಮನಃ' (ಶ್ವೇ.ಉ. 6.23), 'ಆಚಾರ್ಯದೇವೋ ಭವ' (ತೈ.ಆ. 5.19) ಮುಂತಾದ ಶ್ರುತಿಗಳಿಗನುಸಾರವಾಗಿ ವೇದಾಂತಾರ್ಥವನ್ನು ವಿಶದೀಕರಿಸಿದೆ.

11. ಕುಲಶೇಖರಾೞ್ವಾರ್ರ **ಪೆರುಮಾಳ್ ತಿರುಮೊೞಿ**ಯಲ್ಲಿ - 'ಅಮರರ್ಗಳ್ ತಂತಲೈವನೈ' (1.4) ಎಂದು ಪರತತ್ತ್ವವಾಗಿ ಶ್ರೀಮನ್ನಾರಾಯಣನನ್ನು ಸಾರಿದ್ದಾರೆ. 'ಇರುಳಿರಿಯ' (1.1) ದಶಕದುದ್ದಕ್ಕೂ ಸರ್ವದೇವತೆಗಳಿಂದಲೂ ವಂದ್ಯನಾದ ಈ ಪರಮಾತ್ಮನಲ್ಲಿ ಸರ್ವದೇಶ-ಸರ್ವಕಾಲ-ಸರ್ವಾವಸ್ಥೋಚಿತವಾದ ಸರ್ವವಿಧಕೈಂಕರ್ಯವನ್ನೂ ಮಾಡುವುದೇ ಪರಮ ಪುರುಷಾರ್ಥವೆಂದು ಪ್ರತಿಪಾದಿಸಿದ್ದಾರೆ. ಉಪಾಯವೂ ಸಹ ಭಕ್ತಿಭೇದಗಳೆಂಬುದೂ ವಿವೃತವಾಗಿದೆ ಎಂದೂ 'ಉನ್ ಅನ್ಬಮಿಲ್ ಶೀರ್ಕ್ಕಲ್ಲಾಲ್ ಅಹಂ ಕುೞೈಯ ಮಾಟ್ಟೇನೇ' (5.6), 'ಎನ್ ಚಿತ್ತಂ ಮಿಹ ಉನ್ ಪಾಲೇ ವೈಪ್ಪನ್ ಅಡಿಯೇನೇ' (5.7), 'ತಿರುಮಾದುವಾಳ್ ವಾಟ್ಟಮಿಲ್ ವನಮಾಲೈ ಮಾರ್ಪನೈ ವಾೞ್ತ್ತಿ' (2.1) ಎಂಬಲ್ಲಿ ಇದು ಸ್ಪಷ್ಟ. 'ಉನದರುಳೇ ಪಾರ್ಪ್ಪನ್ ಅಡಿಯೇನೇ' (5.4) ಮುಂತಾದೆಡೆಗಳಲ್ಲಿ ಅನನ್ಯಗತಿಕತ್ವ ಮುಂತಾದವುಗಳೊಡನೆ ಭಗವದನು-ಗ್ರಹಪ್ರಾರ್ಥನೆ ಮಾಡಿದೆ. ಇಲ್ಲಿ ಭಾಗವತ ನಿಷ್ಠೆಯು ಸೊಗಸಾಗಿ 'ತೇಟ್ಟರುಂತಿಱಲ್ ತೇನಿನೈ ತೆನ್ನರಂಗನೈ .... ಮೆಯ್ಯಡಿಯಾರ್ಗಳ್ ತಂ ಈಟ್ಟಂ ಕಂಡಿಡಕ್ಕೂಡುಮೇಲ್ ಅದು ಕಾಣುಂ ಕಣ್ ಪಯನಾವದೇ' (2.1) ಎಂದು ವರ್ಣಿಸಿದೆ. ಈ ದಶಕ ಪೂರ್ತಿ ಈ ಅಂಶ ವಿಶದಪಡಿಸಲಾಗಿದೆ. 'ತೊಂಡರ್ ತೋಂಡರ್ಹಳಾವರೇ' (2.10) ಎಂದೂ ಫಲ ಹೇಳಿರುವುದು ಗಮನಾರ್ಹ. 'ನಿನ್ನೈಯೇ ತಾನ್ ವೇಂಡಿ' (5.9) ಎಂದೂ ಭಗವದ್ವಿಷಯದಲ್ಲಿ ವೈಷಯಿಕಸುಖವನ್ನು ತ್ಯಜಿಸಿ ಮಗ್ನ-ನಾಗುವ ಹಂಬಲ ವ್ಯಕ್ತವಾಗಿದೆ. ಇಲ್ಲಿ ಭಕ್ತಿಗೆ ಅಂಗವಾದ ನಿತ್ಯಕರ್ಮಾನುಷ್ಠಾನ ವರ್ಣಾಶ್ರಮಕ್ಕೆ ತಕ್ಕ ಹಾಗೆ ಅಪೇಕ್ಷಿತ ಎಂಬುದು 'ಇರುಮುಪ್ಪೊೞುದೇತ್ತಿ' (1.7) ಎಂಬಲ್ಲಿ ವ್ಯಕ್ತ. ಭಗವದವತಾರಗಳ ಪ್ರಯೋಜನ ಗೀತೆಯಲ್ಲಿ ಹೇಳಿದಂತೆ 'ವನ್ಪೆರು ವಾನಹಮುಯ್ಯ ಅಮರರುಯ್ಯ ಮಣ್ಣುಯ್ಯ ಮಣ್ಣುಲಹಿಲ್ ಮನಿಶರುಯ್ಯ ತುನ್ಬಮಿಹು ತುಯರಹಲ ಅಯರ್ವೊನ್ಱಿಲ್ಲಾಚ್ ಚುಕಂ ವಳರ ಅಹಮಹಿೞುಂ ತೊಂಡರ್ ವಾೞ' (1.10) ಎಂಬಲ್ಲಿ ವಿಶದವಾಗಿದೆ. 'ಅಱಂ ತಿಹಳುಂ ಮನತ್ತವರ್ ತಂ ಗತಿಯೈ' (1.7) ಎಂದೂ, 'ಎಂಗುಪ್ ಪೋಯ್ ಉಯ್ಗೇನ್ ಉನ್ ಇಣೈಯಡಿಯೇ ಅಡೈಯಲಲ್ಲಾಲ್' (5.5) ಎಂದೂ, ಪರಮಾತ್ಮನ ಪರಾಯಣತ್ವವೂ, 'ಆದಿಅನ್ತಮನನ್ತಮಱ್ಪುದಮಾನ ವಾನವರ್ ತಂ ಪಿರಾನ್' (2.6) ಎಂದು ಸರ್ವಾಧಿಕತ್ವವೂ, 'ಅಲ್ಲಿಮಾಮಲರ್ ಮಂಗೈ ನಾದನ್ ಅರಂಗನ್ ಮೆಯ್ಯಡಿಯಾರ್ಹಳ್ ತಂ ಎಲ್ಲೈಯಿಲ್ ಅಡಿಮೈತ್ ತಿರತ್ತಿನಿಲ್ ಎನ್ಱುಂ ಮೇವುಮನತ್ತನ್' (2.10) ಎಂದು ದಿವ್ಯದಂಪತಿಗಳಾದ ಲಕ್ಷ್ಮೀನಾರಾಯಣರ ದಾಸ-ಭೂತರ ಸೇವೆ ಪರಮಭೋಗ್ಯವೆಂಬುದೂ, ಸಂಸಾರದ ಭೋಗಗಳ ಕ್ಷುದ್ರತ್ವ 'ಮೆಯ್ಯಿಲ್ ವಾೞ್ಕ್ಕೈಯೈ' (3.1) ಎಂಬ ದಶಕದಲ್ಲಿಯೂ, ಭಗವತ್ಸನ್ನಿಧಿಯಲ್ಲಿ ಎಲ್ಲ ವಿಧ ಕೈಂಕರ್ಯಪ್ರಾರ್ಥನೆ 'ಊನೇಱು ಶೆಲ್ವತ್ತು' (4.1) ದಶಕದಲ್ಲೂ, ಪರಮಾತ್ಮನ ರಕ್ಷಕತ್ವ ಅನನ್ಯರಾದ ಆಶ್ರಿತರಿಗೇ ಎಂಬುದು 'ತರುತುಯರಂ ತಡಾಯೇಲ್' (5.1) ಎಂಬ ದಶಕದಲ್ಲೂ, 'ಪುಂಡರೀಕಮಲರದನ್ ಮೇಲ್ ಪುವನಿಯೆಲ್ಲಾಂ ಪಡೈತ್ತವನೇ' (8.2) ಎಂದು ಜಗತ್ಕಾರಣತ್ವವನ್ನೂ 'ದೇವರೈಯುಂ ಅಶುರರೈಯುಂ ದಿಶೈಹಳೈಯುಂ ಪಡೈತ್ತವನೇ' (8.10) ಎಂದೂ, ಪ್ರತಿಪಾದಿಸಿ ಇಂತಹ ಸರ್ವಸ್ವಾತ್ಮನಿಗೆ ಸದಾ ದಾಸಕೃತ್ಯ ಮಾಡಿ ಉಜ್ಜೀವಿಸಿರೆಂದು 'ಏತ್ತಿ ನಾಳುಂ ಇಱೈಂಜುಮಿನೋ ಎಪ್ಪೊೞುದುಂ ತೊಂಡೀರ್ ನೀರೇ' (10.10) ಎಂದು ಹಿತವನ್ನೂ 'ನಲಂ ತಿಹೞ್ ನಾರಣನಡಿಕ್ಕೀೞ್ ನಣ್ಣುವಾರ್' (10.11) ಎಂದು ಪುರುಷಾರ್ಥ ಖ್ಯಾಪನದೊಡನೆ ನಿಗಮಿಸಿದ್ದಾರೆ.

12. ಪೆರಿಯಾೞ್ವಾರ್ರ **ಪೆರಿಯಾೞ್ವಾರ್ ತಿರುಮೊೞಿ**ಯಲ್ಲಿ ಪರಮಾತ್ಮ ಸ್ವರೂಪವನ್ನು 'ಮೂಲಮಾಹಿಯ ಒಱ್ಱೈಯೆೞುತ್ತೈ ಮೂನ್ಱು ಮಾತ್ತಿರೈ ಉಳ್ಳೆೞುವಾಂಗಿ ವೇಲೈ ವಣ್ಣನೈ ಮೇವುದಿರಾಹಿಲ್ ವಿಣ್ಣಹತ್ತಿನಿಲ್ ಮೇವಲುಮಾಮೇ' (4.5.4) ಎಂದು ಪ್ರಣವ ವಾಚ್ಯನಾದ ಶ್ರೀಮನ್ನಾರಾಯಣ ಉಭಯ ಲಿಂಗತ್ವವುಳ್ಳವನೆಂದೂ 'ನೀರೇಱು ಶೆಂಜಡೈ ನೀಲಕಂಡನುಂ ನಾನ್ಮುಹನುಂ ಮುಱೈಯಾಲ್ ಶೀರೇಱು ವಾಚಕಂ ಶೆಯ್ಯ ನಿನ್ಱ ತಿರುಮಾಲೈ' (4.1.5) ಎಂದೂ, 'ಎರುತ್ತುಕ್ಕೊಡಿಯುಡೈಯಾನುಂ ಪಿರಮನುಂ ಇಂದಿರನುಂ ಮಱ್ಱುಂ ಒರುತ್ತರುಂ ಇಪ್ಪಿರವಿ-

ಯೆನ್ನುಂನೋಯ್ಕ್ಕು ಮರುಂದಱಿವಾರುಮಿಲ್ಲೈ, ಮರುತ್ತುವನಾಯ್ ನಿನ್ಱ ಮಾಮಣಿವಣ್ಣಾ' (5.3.6), 'ಇಂದಿರ-ನೋಡು ಪಿರಮನ್ ಈಶನಿಮ್ಮೈಯವರೆಲ್ಲಾಂ ಮಂದಿರ ಮಾಮಲರ್ಕೊಂಡು' (2.8.1), ಎಂದು ಸರ್ವಸ್ವಾತಂತ್ರ್ಯತ್ವವೂ, 'ಉನ್ ಪಾದ ನಿೞಲಲ್ಲಾಲ್ ಮತ್ತೋರ್ ಉಯಿರ್ಪ್ಪಿಡಂ ನಾನೆಂಗುಂ ಕಾಣ್ಗಿನ್ಱಿಲೇನ್' (5.3.4) ಎಂದು ಜಗದೇಕ-ಶರಣ್ಯತ್ವವೂ, 'ಪವಿತ್ತಿರನೈ, ಪರಮೇಟ್ಟಿಯೈ .... ಪರಮಾತ್ಮನೈ' (1.1.12) ಎಂಬಲ್ಲಿ ಮಂಗಳ ಗುಣಾಕರತ್ವ, ಈಶ್ವರತ್ವಾದಿಗಳನ್ನೂ, 'ಉಯ್ಯವುಲಹು ಪಡೈತ್ತುಂಡ ಮಣಿವಯಿಱಾ' (1.6.1) ಎಂದು ಜಗತ್ಕಾರಣತ್ವವೂ, 'ಅನ್ನಮದಾನಾನೇ .... ಅರುಮಱೈ ತಂದಾನೇ' (1.9.10) ಮತ್ತು 'ಪೀತಕವಾಡೈಪ್ಪಿರಾನಾರ್ ಪಿರಮ ಗುರುವಾಹಿವಂದು' (5.2.8) ಎಂದು ವೇದ ಪ್ರವರ್ತನವೂ, ಗೀತಾಚಾರ್ಯತ್ವವೂ, 'ಶೆಂಜೊಲ್ಮಱೈಪ್ಪೊರುಳಾಹಿ' (4.10.7), 'ನಾನ್ಮಱೈ-ಯಿನ್ ಪೊರುಳೇ' (1.6.3), 'ವೇದಪ್ಪಿರಾನಾರ್' (5.2.1) ಎಂದು ವೇದವೇದ್ಯತ್ವ, ಸರ್ವಶಬ್ದ ವಾಚ್ಯತ್ವಗಳೂ, ಪರಮಾತ್ಮನ ವಿಶ್ವಾತ್ಮಕತ್ವವು 'ಆಮ್ಮೈಯಾಯ್ಗ್ ಗಂಗೈಯಾಯ್ ಆೞ್ಕಡಲಾಯ್, ಅವನಿಯಾಯ್ ಅರುವರೈಹಳಾಯ್, ನಾನ್ಮುಹನಾಯ್, ನಾನ್ಮಱೈಯಾಯ್ ವೇಳ್ವಿಯಾಯ್ತ್ ತಕ್ಕಣೈಯಾಯ್ತ್ ತಾನುಮಾನಾನ್' (4.9.5) ಎಂದೂ 'ಮುಱ್ಱ ಉಲಹೆಲ್ಲಾಂ ನೀಯೇಯಾಹಿ ಮೂನ್ಱೆೞುತ್ತಾಯ ಮದಲ್ವನೇಯೋ' (4.10.4) ಎಂಬಲ್ಲಿಯೂ, 'ಮಣ್ಣೊಡು ನೀರುಂ ಎರಿಯುಂ ಕಾಲುಂ ಮಱ್ಱುಂ ಆಕಾಶಮುಮಾಹಿ ನಿನ್ಱಾಯ್' (4.10.6) ಎಂದೂ, ಸರ್ವಜಗಚ್ಛೇಷಿತ್ವ 'ಏೞುಲಹುಮುಡೈಯಾಯ್' (1.6.8) ಎಂದೂ, ಬಹುಪ್ರಕಾರವಾಗಿ ವಿವರಿಸಿದ್ದಾರೆ.

ಇನ್ನು ಉಪಾಯಸ್ವರೂಪಾದಿಗಳನ್ನು ಭಗವಂತನಲ್ಲಿ ಶರಣಾಗತಿ ಮಾಡುವುದನ್ನು 'ನಿನ್ನಡೈಂದೇನ್ ಆನೈಕ್ಕು ನೀ ಅರುಳ್ ಶೆಯ್ದಮೈಯಾಲ್' (4.10.1) ಎಂಬ ದಶಕದಲ್ಲಿ ಪೂರ್ಣವಾಗಿಯೂ, 'ಆಶೈವಾಯ್ಚ್ ಚೆನ್ಱ ಶಿಂದೈಯರಾಹಿ' (4.5) ಎಂಬ ದಶಕದಲ್ಲಿ 'ವಾಯಿನಾಲ್ ನಮೋ ನಾರಣಾವೆನ್ಱು ಮತ್ತಕತ್ತಿಡೈಕೈಹಳೈಕೂಪ್ಪಿಪ್ ಪೋಯಿನಾಲ್ ಪಿನ್ನೈ ಇತ್ತಿಶೈಕ್ಕೆನ್ಱುಂ ಪಿಣೈಕ್ ಕೊಡುಕ್ಕಿಲುಂ ಪೋಹವೊಟ್ಟಾರೇ' (4.5.2), 'ಮಾರ್ವಮೆನ್ಬದೋರ್ ಕೋಯಿಲಮೈತ್ತು ಮಾದವನೆನ್ನುಂ ದೆಯ್ವತ್ತೈ ನಾಟ್ಟಿ ಆರ್ವಮೆನ್ಬದೋರ್ ಪೂವಿಡವಲ್ಲಾರ್ಕ್ಕು' (4.5.3) ಎಂದು ಶ್ರೀವಿಶಿಷ್ಟ-ನಾರಾಯಣನೇ ಉಪಾಯವೆಂದೂ, 'ಓವಾದೇ ನಮೋ ನಾರಣಾವೆನ್ಬನ್' (5.1.3), 'ಓವಾದೇ ನಮೋ ನಾರಣಾವೆನ್ಱೆಣ್ಣಾ ನಾಳುಂ ಇರುಕ್ಕೆಶುಚ್ಚಾಮವೇದ ನಾಣ್ಮಲರ್ಕೊಂಡುನ ಪಾದಂ ನಣ್ಣಾನಾಳ್ ಅವೈ ತತ್ತುಱುಮಾಹಿಲ್ ಅನ್ಱೆನಕ್ಕವೈ ಪಟ್ಟಿನಿ ನಾಳೇ' (5.1.6) ಮುಂತಾದೆಡೆಗಳಲ್ಲಿ ಭಗವದ್ಭಕ್ತಿಯೇ ಪ್ರಧಾನೋಪಾಯವೆಂದೂ, 'ಉನಕ್ಕುಪ್ಪಣಿಶೆಯ್ದಿರು-ಕ್ಕುಂ ತವಮುಡೈಯೇನ್' (5.3.3) ಎಂದು ಈ ಭಕ್ತಿಯು ಕೈಂಕರ್ಯವಾಗಿ ಪರಿಣಮಿಸುವುದು ಮಹಾಭಾಗ್ಯವೆಂದೂ, ಪುರುಷಾರ್ಥವನ್ನು ವಿವರಿಸುತ್ತ 'ಅನ್ಱು ವಯಿಱ್ಱಿಲ್ ಕಿಡನ್ದಿರುಂದೇ ಅಡಿಮೈ ಶೆಯ್ಯಲುಱ್ಱಿರುಪ್ಪನ್' (5.3.9), 'ಎನ್ ಶೆನ್ನಿತ್ತಿಡರಿಲ್ ಪಾದವಿಲಚ್ಚಿನೈ ವೈತ್ತಾರ್' (5.2.8), 'ನಣ್ಣಿ ನಾನುನ್ನೈ ನಾಳ್ತೊರುಂ ಏತ್ತುಂ ನನ್ಮೈಯೇ ಅರುಳ್ಶೆಯ್' (5.1.8), 'ವನ್ಮೈಯಾವದು ಉನ್ ಕೋಯಿಲಿಲ್ವಾಳುಂ ವೈಟ್ಟಣವನೆನ್ನುಂ ವನ್ಮೈ ಕಂಡಾಯೇ' (5.1.3), 'ನಿನ್ನೈಂದಿ-ರುಂದೇ ಶಿರಮಂ ತೀರ್ನ್ದೇನ್' (5.4.8), 'ಎನ್ನೈ ಉನಕ್ಕುರಿತ್ತಾಕ್ಕಿನೈಯೇ' (5.4.9), 'ಎನ್ನೈಯುಂ ಎನ್ನುಡೈಮೈಯೈ-ಯುಂ ಉನ್ ಶಕ್ಕರಪ್ಪೊಱಿ ಒಱ್ಱಿಕ್ಕೊಂಡು ನಿನ್ನರುಳೇ ಪುರಿಂದಿರುಂದೇನ್' (5.4.1) ಇತ್ಯಾದಿಯಾಗಿ ವರ್ಣಿಸಿದೆ.

13. ಶ್ರೀ ಗೋದಾದೇವಿಯ ಉಪನಿಷತ್ಸಾರಭೂತವಾದ **ತಿರುಪ್ಪಾವೈ**ಯಲ್ಲಿ 'ನಾರಾಯಣನೇ ನಮಕ್ಕೇ ಪಱೈ ತರುವಾನ್' (1), 'ಶೆಂಗಣ್ ತಿರುಮುಕತ್ತು ಚೆಲ್ವತ್ತಿರುಮಾಲಾಲ್ ಎಂಗುಂ ತಿರುವರುಳ್ ಪೆಱ್ಱು' (30), 'ಪಾಱ್ಕಡಲುಳ್ ಪೈಯತ್ತುಯಿನ್ಱ ಪರಮನ್' (2), 'ಓಂಗಿ ಉಲಹಳಂದ ಉತ್ತಮನ್' (3), 'ಉಂಬರ್ ಕೋಮಾನೇ' (17), 'ಮುಪ್ಪತ್ತು ಮೂವರಮರರ್ಕ್ಕು ಮುನ್ ಶೆನ್ಱು ಕಪ್ಪಂ ತವಿರ್ಕ್ಕುಂ ಕಲಿಯೇ' (20), ಎಂದೆಲ್ಲ ಪರತತ್ತ್ವ ಸ್ವರೂಪಾದಿಗಳೂ, 'ಉನಕ್ಕೆ ನಾಮಾಟ್ಶೈಯ್ವೋಂ' (29), 'ಉನ್ ಪೊಱ್ಱಾಮರೈಯಡಿಯೇ ಪೋಱ್ಱುಂ ಪೊರುಳ್' (29), 'ಪರಮನಡಿ ಪಾಡಿ' (2), 'ವಾಯಿನಾಲ್ ಪಾಡಿ ಮನತ್ತಿನಾಲ್ ಶಿಂದಿಕ್ಕಪ್ ಪೋಯ ಪಿೞೈಯುಂ ಪುಹುದರುವಾನ್ ನಿನ್ಱನವುಂ ತೀಯಿನಿಲ್ ತೂಶಾಹುಂ' (5), 'ಉನ್ ಅಡಿಪಣಿಯುಮಾಪೋಲೇ ಪೋಱ್ಱಿ ಯಾಂ ವಂದೋಂ' (21) ಇತ್ಯಾದಿಗಳಲ್ಲಿ ಭಕ್ತಿಪೂರ್ವಕ-ವಾದ ಗುಣ ಸಂಕೀರ್ತನವೇ ಉಪಾಯವಾಗಿಯೂ, 'ಇಪ್ಪೋದೇ ಎಮ್ಮೈ ನೀರಾಟ್ಟು' (20), 'ನೀ ಕುಱ್ಱೇವಲೆಂಗಳೈಕ್ ಕೊಳ್ಳಾಮಲ್ ಪೋಹಾದು .... ಉನ್ದನ್ನೋಡುಱ್ಱೋಮೇ ಯಾವೋಂ ಉನಕ್ಕೇ ನಾಮಾಟ್ಶೈಯ್ವೋಂ' (29), 'ಉನ್ದನ್ನೋಡುಱವೇಲ್ ನಮಕ್ಕಿಂಗೊೞಿಕ್ಕವೊೞಿಯಾದು' (28), 'ಶೆಲ್ವತ್ತಿರುಮಾಲಾಲ್ ಎಂಗುಂ ತಿರುವರುಳ್ ಪೆಱ್ಱಿನ್ಬುರುವರ್' (30), 'ಮಱ್ಱೈ ನಂ ಕಾಮಂಗಳ್ ಮಾಱ್ಱು' (29) ಎಂದೆಲ್ಲ ಭಗವದನುಭವರೂಪ ಮೋಕ್ಷದ ವಿವರಣೆಯೂ ಮಾಡಿದೆ. ಈ ಪ್ರಬಂಧದ ವೈಭವವೂ ವಾಚಾಮಗೋಚರವಾದುದು.

14. **ನಾಚ್ಚಿಯಾರ್ ತಿರುಮೊೞಿ**ಯಲ್ಲೂ - 'ನಾನುಮಾಯಿರಂ ಏತ್ತ ನಿನ್ಱ ನಾರಾಯಣಾ ನರನೇ' (2.1), 'ಮುಱ್ಱ ಮಣ್ಣಿಡಂ ತಾವಿ ವಿಣ್ಣುೞ ನೀಂಡಳಂದು ಕೊಂಡಾಯ್' (2.9) ಎಂದು ಸರ್ವವ್ಯಾಪಿತ್ವವೂ, 'ನಾನ್ಮಱೈಯಿನ್

ಶೂಱ್ೊವರುಳಾಯ್ ನಿನ್ಱಾರ್' (11.6), 'ಪಳಹುನಾನ್ಮಱೈಯಿನ್ ಪೊರುಳಾಯ್' (4.10) ಎಂದು ವೇದವೇದ್ಯತ್ವವೂ, 'ಮಱೈಯೇ ಮಱೈಯೇ' (10.8), 'ಕಡಲೇ ಕಡಲೇ .... ಉಡಲುಳ್ ಪುಹುಂದು ನಿನ್ಱು' (10.9) ಎಂಬಲ್ಲಿ ಜಗಚ್ಛರೀರಿತ್ವವೂ, ಸರ್ವೇಶ್ವರತ್ವವನ್ನು 'ಪೊಂಗೋದಂ ಶೂೞ್ನ್ದ ಪುವನಿಯುಂ ವಿಣ್ಣುಲಹುಂ ಅಂಗಾದುಂ ಶೋರಾಮೇ ಆಳ್ಹಿನ್ಱ ಎಂಬೆರುಮಾನ್' (11.3), 'ಕಣಂಗಳೋಡು ಮಿನ್ ಮೇಗಂ ಕಲನ್ದಾಱ್ಪೋಲ್' (14.2) ಇತ್ಯಾದಿಯಲ್ಲಿ ದಿವ್ಯಮಂಗಳ ವಿಗ್ರಹವೂ ಪರಮಾತ್ಮ ಸ್ವರೂಪ, ರೂಪ, ಗುಣಾದಿಗಳನ್ನು ತಿಳಿಸುತ್ತವೆ. ಉಪಾಯದ ವಿಷಯವಾಗಿ 'ಪಾರ್ಕ್ಕಡಲ್ ವಣ್ಣನುಕ್ಕ ಪಣಿಶೆಯ್ದು ವಾಳಪ್ಪೆಱಾವಿಡಿಲ್' (1.9) ಎಂದೂ, 'ಆರ್ವಂ ಉನಕ್ಕೆ ಉಡ್ಡೈಯೋಂ' (3.7), 'ಆವಲನ್ಬುಡೈಯಾರ್ ತಂ ಮನತ್ತನ್ಱಿ ಮೇವಲನ್' (4.8), 'ವೈಕುಂದನೆನ್ಬದೋರ್ ದೋಣಿ' (5.4) ಎಂದು ಪರಮಾತ್ಮನ ಪ್ರಾಪಕತ್ವ, ಅಂದರೆ ಸಿದ್ಧೋಪಾಯತ್ವವೂ, 'ಶೇವಡಿಕ್ಕೀೞ್ ಅಡಿವೀೞ್ಚ್ಚಿ ವಿಣ್ಣಪ್ಪಂ' (8.7), 'ಗತಿಯೆನ್ಱುಂ ತಾನಾವಾನ್' (8.9) ಎಂದು ಶರಣ್ಯತ್ವ ಪುರಸ್ಸರವಾಗಿ ಉಪಾಯತ್ವವೂ, 'ಗೋವಿಂದಱ್ಕೀರ್ ಕುಱ್ಱೇವಲ್ ಇಮ್ಮೈಪ್ಪಿರವಿ ಶೆಯ್ಯಾದೇ ಇನಿಪ್ಪೋಯ್ಚ್ ಚೆಯ್ಯುಂ ತವಂ ತಾನೆನ್? (13.9), 'ಅಡಿಕೊಟ್ಟಿಡಕ್ ಕೊಳ್ಳುಮಾಹಿಲ್' (4.1), 'ಕೇಶವನಂಬಿಯೈಕ್ಕಾಲ್ ಪಿಡಿಪ್ಪಾಳೆನ್ಱುಂ ಇಪ್ಪೇಱೆನಕ್ಕರುಳ್' (1.8), 'ವಿಲ್ಲಿಪುದುವೈ ವಿಟ್ಟುಚಿತ್ತಿರ್ ತಂಗಳ್ ದೇವರೈ ವಲ್ಲ ಪರಿಶು ವರುವಿಪ್ಪಱೇಲ್' (10.10), 'ಪೆರುಂದಾಳುಡೈಯ ಪಿರಾನಡಿಕ್ಕೀೞ್ಪ್ ಪಿರಿಯಾದೆನ್ಱುಮಿರುಪ್ಪಾರೇ' (14.10) ಎಂದೂ ಭಗವತ್ಕೈಂಕರ್ಯ ರೂಪ ಬ್ರಹ್ಮಾನುಭವವೇ ಪುರುಷಾರ್ಥವೆಂದೂ ನಿರೂಪಿತವಾಗಿದೆ.

15. ತೊಂಡರಡಿಪ್ಪೊಡಿಯಾೞ್ವಾರ್ರ **ತಿರುಮಾಲೈ**ಯಲ್ಲಿ - 'ಮೂವುಲಹುಂಡುಮಿೞ್ನ್ದ ಮುದಲ್ವ' (1) ಎಂದು ಜಗತ್ಕಾರಣತ್ವವೂ, 'ಅಮರರೇಱೇ' (2), 'ಮಱ್ಱುಮೋರ್ ದೆಯ್ವಮುಂಡೇ? .... ಅವನಲ್ಲಾಲ್ ದೆಯ್ವಮಿಲ್ಲೈ' (9), 'ಶಿಲೈಯಿನಾಲ್ ಇಲಂಗೈಶೆಱ್ಱ ದೇವನೇ ದೇವನಾವಾನ್' (7), 'ತಿರುಮಱುಮಾರ್ವ' (40) ಇತ್ಯಾದಿಯಾಗಿ ಶ್ರೀಮನ್ನಾರಾ-ಯಣನೇ ಪರತತ್ತ್ವವೆಂದೂ ತಿಳಿಸಿ, ಉಪಾಯವಾಗಿ 'ನಿನ್ ನಾಮಂ ಕಱ್ಱ' (1) ಎಂದು ಸಂಕೀರ್ತನ ರೂಪವಾದ ಭಕ್ತಿಯೂ 'ಇಚ್ಚುವೈ ತಿವಿರ .... ಅಚ್ಚುವೈ ಪೆಱಿನುಂ ವೇಂಡೇನ್' (2) ಎಂದು, 'ಪೇರಾಲ್ .... ಪರಾಂಗತಿಕಂಡು ಕೊಂಡಾನ್' (4) ಎಂದೂ, 'ಕೞಲಿಣೈ ಪಣಿಮಿನ್ ನೀರೇ' (9) ಎಂದು ಶರಣಾಗತಿಯನ್ನು ಹೇಳಿ ಮುಂದೆ ಇದನ್ನೇ 'ಮಾಯನಾರ್ ತಿರುನನ್ಮಾರ್ವುಂ ಮರಕತ ವುರುವುಂ ತೋಳುಂ ತೂಯತಾಮರೈಕ್ಕಣ್ಗಳುಂ ತುವರಿದೞಪ್ಪವಳವಾಯುಂ ಆಯಶೀರ್ಮುಡಿಯುಂ ತೇಶುಂ ಅಡಿಯರೋರ್ಕ್ಕಹಲಲಾಮೇ' (20) ಎಂದು ಪ್ರೀತಿಪೂರ್ವಕವಾದ ಧ್ಯಾನವೂ, 'ಊರಿಲೇನ್ ಕಾಣಿಯಿಲ್ಲೈ ಉಱವು ಮಱ್ಱೊರುವರಿಲ್ಲೈ ಪಾರಿಲ್ ನಿನ್ ಪಾದಮೂಲಂ ಪಱ್ಱಿಲೇನ್' (29) ಎಂದು ಆಕಿಂಚನ್ಯ-ವನ್ನೂ, 'ಆರುಳರ್ ಕಳೈಹಣ್' (29) ಎಂದು ಅನನ್ಯಗತಿಕತ್ವವನ್ನೂ, 'ಉಳ್ಳುವಾರುಳ್ಳಿಱ್ಱೆಲ್ಲಾಮುಡನಿರುಂದರಿದಿ' (34) ಎಂದು ಭಗವಂತನ ಸರ್ವಾಂತರ್ಯಾಮಿತ್ವವನ್ನೂ, 'ಶೇವಿಯೇನ್ ಉನ್ನೈಯಲ್ಲಾಲ್ ಶಿಕ್ಕೆನಚ್ ಚೆಂಗಣ್ಮಾಲೇ .... ಪಾವಿಯೇನ್ ಉನ್ನೈಯಲ್ಲಾಲ್ ಪಾವಿಯೇನ್ ಪಾವಿಯೇನೇ' (35) ಎಂದು ಪರಮೈಕಾಂತಿನಿಷ್ಠೆಯೂ, 'ಉನ್ನೈಯೆನ್ನೋ ಕಳೈಕಣಾಕ್ಕರುದುಮಾಱೇ' (44) ಎಂದು ಉಪಾಯನಿಷ್ಕರ್ಷ ಮಾಡಿ, 'ಎಂಬಿರಾಱ್ಕು ಆಟ್ಚೆಯ್ಯಾದೇ, ಎನ್ ಶೆಯ್ಯ್ವಾನ್ ತೋನ್ಱಿನೇನೇ' (28), 'ಪೋನಹಂ ಶೆಯ್ದ ಶೇಡಂ ತರುವರೇಲ್ ಪುನಿದಮನ್ಱೇ' (41), 'ಅಳಿಯ ನಂ ಪೈಯಲೆನ್ಬಾರ್' (37) ಇತ್ಯಾದಿಯಲ್ಲಿ ಭಾಗವತನ ಕೈಂಕರ್ಯವೂ, 'ತೂಂಡು ಪೂಂಡಮುದಮುಣ್ಣಾ' (5), 'ಕೞಲಿಣೈ ಪಣಿಮಿನ್' (9) ಇತ್ಯಾದಿಯಾಗಿ ಪುರುಷಾರ್ಥವನ್ನೂ ತಿಳಿಸಿದೆ.

16. **ತಿರುಪ್ಪಳ್ಳಿಯೆೞುಚ್ಚಿ**ಯಲ್ಲಿ - ಪರಮಾತ್ಮನ ಪರತ್ವ ದೇವತಾಸಾರ್ವಭೌಮತ್ವಗಳು 'ವಾನವರರಶರ್ಗಳ್ ವಂದು' (1), 'ಅಮರರ್ಗಳ್ಪುಹುಂದನರ್' (5), 'ಅಂದರತ್ತಮರರ್ಗಳ್ .... ಉನ್ಕೋಯಿಲಿನ್ ವಾಶಲ್ .... ತಿರುವಡಿ ತೊೞುವಾನ್' (7) ಎಂದೆಲ್ಲ ಪ್ರತಿಪಾದಿತವಾಗಿದೆ. ಹಿತವಾದ ಪರಮಾತ್ಮ ಭಜನವು ಎಲ್ಲ ಹಾಡುಗಳಲ್ಲೂ 'ವಂದು ವಂದೀಂಡಿ' (1), 'ಅಲಂಗಲಂತೊಡೈಯಲ್ ಕೊಂಡಡಿಯಿಣೈ ಪಣಿವಾನ್' (5), 'ತಿರುವಡಿ ತೊೞುವಾನ್' (7,9), 'ಪಡಿಮೈಕ್ಕಲಂ ಕಾಂಡಕರ್ು' (8), ಇತ್ಯಾದಿಯಾಗಿ ಹೇಳಿದೆ. ಪುರುಷಾರ್ಥವು 'ಅಡಿಯನೈ ಅಳಿಯನೆನ್ಱರುಳಿ ಉನ್ನಡಿ-ಯಾರ್ಕ್ಕಾಟ್ಪಡುತ್ತಾಯ್' (10) ಎಂದು ಭಾಗವತಕೈಂಕರ್ಯ ಪರ್ಯಂತ ಬೆಳೆಯುವ ಭಗವದನುಭವವೆಂದು ಸಾರಿದೆ.

17. ತಿರುಪ್ಪಾಣಾೞ್ವಾರ್ರ **ಅಮಲನಾದಿಪಿರಾನ್**ನಲ್ಲಿ 'ಅಮಲನ್ ಆದಿಪಿರಾನ್ .... ವಿಣ್ಣವಕೋನ್ .... ನಿಮಲನ್ ನಿನ್ಮಲನ್ ....' (1) ಇತ್ಯಾದಿಯಾಗಿ ಪರಮಾತ್ಮನ ಹೇಯ ಗುಣಗಳಿಲ್ಲದಿರುವಿಕೆ, ಪಾಪಗಳನ್ನು ಹೋಗಿಸುವಿಕೆ, ಜಗತ್ಕಾರಣತ್ವ, ದೇವಾಧಿದೇವತ್ವ ಮುಂತಾದವು ಹೇಳಲಾಗಿವೆ. 'ಅಂಡರಂಡ ಬಹಿರಂಡತ್ತೊರು ಮಾನಿಲಮೆೞು ಮಾಲ್ವರೈ ಮುಱ್ಱುಂ ಉಂಡ' (6) ಎಂದೂ ಜಗತ್ಕಾರಣತ್ವ ವಿಶದೀಕೃತ. ಉಪಾಯವು ಪರಮಾತ್ಮನ ದಯೆಯಿಂದಲೇ ಎಂಬುದು 'ಅಡಿಯಾರ್ಕ್ಕೆನ್ನೈಯಾಟ್ಪಡುತ್ತ' (1), 'ಪಾರಮಾಯ ಪೞವಿನೈ ಪಱ್ಱಱುತ್ತು ಎನ್ನೈತ್ತನ್ ವಾರಮಾಕ್ಕಿ

ವೈತ್ತಾನ್ ವೈತ್ತದನ್ನಿ ಎನ್ನುಳ್ ಪುಹುಂದಾನ್' (5) ಎಂದು ವಿಸ್ತರಿಸಿದೆ. ಪುರುಷಾರ್ಥವು 'ಅಡಿಯಾರ್ಕ್ಕೆನ್ನೈ ಆಟ್ಪಡುತ್ತ' (1) ಎಂದೂ, 'ಪೞವಿನ್ನೈ ಪಱ್ಱಱುತ್ತು ಎನ್ನೈತ್ತನ್ ವಾರಮಾಕ್ಕಿ' (5) ಎಂದೂ 'ಎನ್ನಮುದಿನೈಕ್ಕಂಡ ಕಣ್ಗಳ್ ಮಱ್ಱೊನ್ನಿನೈಕ್ಕಾಣಾವೇ' (10) ಎಂದೂ ಅನನ್ಯವಾಗಿ ಭಗವದ್ಭಾಗವತಾನುಭವವೇ ಎಂದು ನಿರ್ಧರಿಸಿದೆ.

18. ತಿರುಮಂಗೈ ಆೞ್ವಾರ್ರ **ಪೆರಿಯ ತಿರುಮೊೞಿ**ಯಲ್ಲಿ - ಸಾಕ್ಷಾತ್ತಾಗಿ ದಿವ್ಯದಂಪತಿಗಳ ಕಟಾಕ್ಷವನ್ನು ಪಡೆದು ಶ್ರೀಮನ್ನಾರಾಯಣ (ಅಷ್ಟಾಕ್ಷರ ಮಂತ್ರದ ಋಷಿ) ನಿಂದಲೇ ಶ್ರೀಮದಷ್ಟಾಕ್ಷರ ಮಂತ್ರವನ್ನು ಅರ್ಥಸಮೇತವಾಗಿ ಉಪದೇಶ ಪಡೆದು ಆ ನಾರಾಯಣ ನಾಮದ ಪ್ರಭಾವವನ್ನೇ 'ವಾಡಿನೇನ್ ವಾಡಿ' (1.1) ದಶಕದಲ್ಲಿ ವಿಸ್ತರಿಸಿದ್ದಾರೆ. 'ಕುಲಂತರುಂ ಶೇಲ್ವಂ ತಂದಿಡುಂ .... ನಲಂತರುಂ ಶೊಲ್' (1.1.9) ಎಂದೂ 'ತುಂಜುಂಪೋದು ಅೞೈಮಿನ್ .... ನಂಜುತಾನ್ ಕಂಡೀರ್ ನಮ್ಮುಡೈ ವಿನೈಕ್ಕು ನಾರಾಯಣಾ ಎನ್ನುಂ ನಾಮಂ' (1.1.10) ಇತ್ಯಾದಿ ಅನುಸಂಧೇಯ. 'ಕಿಡಂದ ನಂಬಿ' (6.10) ಎಂಬ ದಶಕದಲ್ಲೂ 'ನಮೋ ನಾರಾಯಣ'ದ ಪ್ರಭಾವವರ್ಣಿಸಿದೆ. 'ಪೊಂಗು ಪುಣರಿಕ್ಕಡಲ್ ಶೂೞ್ವಾಡೈ ನಿಲಮಾಮಹಳ್ ಮಲರ್ ಮಾ ಮಂಗೈ ಪಿರಮನ್ ಶಿವನ್ ಇಂದಿರನ್ ವಾನವರ್ ನಾಯಕರಾಯ, ಎಂಗಳಡಿಗಳ್ ಇಮೈಯೋರ್ ತಲೈವರುಡೈಮ ತಿರುನಾಮಂ ನಂಗಳ್ ವಿನೈಹಳ್ ತವಿರ ಉರೈಮಿನ್ ನಮೋ ನಾರಾಯಣಮೇ' (6.10.9) ಇತ್ಯಾದಿ ಭಾವ್ಯ. ಹೀಗೆ ನಾರಾಯಣ ನಾಮದ ವಿವರಣೆಯಿಂದಲೇ ಪರತತ್ತ್ವ ನಿಷ್ಕೃಷ್ಟವಾಗಿ ಹಿತದ ವಿಷಯದಲ್ಲೂ ಈ ಜ್ಞಾನ ಪುರಸ್ಸರವಾಗಿ ಭಗವಂತನಲ್ಲಿ ಭಕ್ತಿಯಿಂದ ಶರಣ ಹೊಂದುವುದೇ ಉಪಾಯವೆಂದು 'ಎನ್ ನಾವಿನಾಲುಯ್ಯ ನಾನ್ ಕಂಡು ಕೊಂಡೇನ್ ನಾರಾಯಣಾ ಎನ್ನುಂ ನಾಮಂ' (1.1.2), 'ನಾನುಂ ಶೊನ್ನೇನ್ ನಮರುಂ ಉರೈಮಿನ್ ನಮೋ ನಾರಾಯಣಮೇ' (6.10.6) ಎಂದೂ 'ಪಾವಿನಾರಿನ್ ಶೊಲ್ ಪಲ್ಮಲರ್ ಕೊಂಡುನ್ ಪಾದಮೇ ಪರವಿ ನಾನ್ ಪಣಿಂದು ಎನ್ ನಾವಿನಾಲ್ ವಂದುನ್ ತಿರುವಡಿ ಅಡೈಂದೇನ್' (1.6.8), 'ಉಂದನ್ ಶರಣಮೇ ಶರಣಮೆನ್ನಿರುಂದೇನ್, ತೇನುಡೈಕ್ಕಮಲತ್ ತಿರುವಿನುಕ್ಕರಶೇ .... ನಾನುಡೈತ್ತವತ್ತಾಲ್ ತಿರುವಡಿ ಅಡೈಂದೇನ್' (1.6.9), 'ನಲ್ಲೈ ನೆಂಜೇ ನಾಂ ತೊೞುದುಂ ನಮ್ಮುಡೈ ನಂಪೆರುಮಾನ್ ಅಲ್ಲಿಮಾದರ್ ಪುಲ್ಗ ನಿನ್ಱ ಆಯಿರಂ ತೋಳನ್' (1.7.9), 'ತಿರುವುಕ್ಕುಂ ತಿರುವಾಹಿಯ ಶೆಲ್ವಾ! ದೆಯ್ವತ್ತುಕ್ಕರಶೇ ಶೆಯ್ಯಕಣ್ಣಾ! ಉರುವಚ್ಚೆಂಜುಡರಾೞಿವಲ್ಲಾನೆ! ಉಲಹುಂಡ ಒರುವಾ! ತಿರುಮಾರ್ಬಾ! .... ಅಂಜಿ ನಿನ್ನಡೈಂದೇನ್' (7.7.1) ಇತ್ಯಾದಿಗಳಲ್ಲಿ ವಿಸ್ತಾರ ಮಾಡಿದೆ. ಈ ಭಜನವೂ ಅನನ್ಯವಾಗಿ ಪಾರಮ್ಯೈಕಾಂತ್ಯದೊಡಗೂಡಿರಬೇಕೆಂಬುದು 'ಅಮರರ್ಕ್ಕರಿಯೇಱ್ಱೈ ಎನ್ ಅನ್ಬನೈಯನ್ನಿ ಆದರಿಯೇನ್' (7.3.2), 'ತಣ್ತಾಮರೈಕ್ಕಣ್ಣನುಕ್ಕನ್ನಿ ಎನ್ಮನಂ ತಾೞ್ನ್ದು ನಿಲ್ಲಾದೇ' (7.3.4), 'ತೇನೈ ನನ್ಪಾಲಿನೈಯನ್ನಿ ಎನ್ಮನಂ ಶಿಂದೈ ಶೆಯ್ಯಾದೇ' (7.3.5), 'ಪಣ್ಬನೈಯನ್ನಿಪ್ ಪಾಡಲ್ ಶೆಯ್ಯೇನೇ (7.3.6), 'ಮಾಮಣಿ ವಣ್ಣನೆಮ್ಮಣ್ಣಲ್ ವಣ್ಣಮೇಯನ್ನಿ ವಾಯುರೈಯಾದೇ' (7.3.7), 'ಇಮೈಯೋರ್ ತೊೞುಂ ಪೊನ್ ಶೆಯ್ ಮಾಲ್ವರೈಯೈ ಮಣಿಕ್ಕುನ್ನಿನೈಯನ್ನಿ ಎನ್ ಮನಂ ಪೋಱ್ಱಿಯೆನ್ನಾದೇ' (7.3.9), 'ನೀಳ್ ನಾಹಂ' (11.7) ದಶಕದಲ್ಲಿ ಎಲ್ಲ ಅಂಗಗಳೂ ಭಗವತ್ಕೈಂಕರ್ಯದಲ್ಲಿ ನಿರತವಾದರೇನೇ ಸಫಲಗಳೆಂದೂ, 'ಮೈನ್ನಿನ್ಱ' (11.6) ದಶಕದಲ್ಲಿ ಎಲ್ಲ ದೇವತಾಂತರಗಳನ್ನೂ ಅವರ ದೇವತೆಗಳೆಂದರಿತು ತ್ಯಜಿಸಿ, ಶ್ರೀಮನ್ನಾರಾಯಣನೇ ಪರತತ್ತ್ವವೆಂದು ಮನಗಂಡು ಅವನನ್ನೇ ಅನನ್ಯರಾಗಿ ಭಜಿಸಿ ಉಜ್ಜೀವಿಸಿರೆಂದಿದ್ದಾರೆ 'ಎಂಬೆರುಮಾನುಂಡುಮಿೞ್ನ್ದ ಎಚ್ಚಿಲ್ ದೇವರಲ್ಲಾದಾರ್ ತಾಮ್ ಉಳರೇ?' (11.6.2), 'ತಾಯಿರುಕ್ಕುಂ ವಣ್ಣಮೇ ಉಮ್ಮೈತ್ತನ್ ವಯಿಱ್ಱಿರುತ್ತಿ ಉಯ್ಯಕೊಂಡಾನ್' (11.6.6), 'ತೊಂಡರ್ಹಾಳ್ ಅಂಡನೈಯೇ ಏತ್ತೀರ್ಹಳೇ' (11.6.1) ಎಂದೂ ಹೇಳಿ ಹೀಗಿದ್ದಾಗ ಲಕ್ಷ್ಮೀಕಟಾಕ್ಷದೊಡನೆ ಭಗವದನುಭವ ಲಾಭವುಂಟೆಂದು 'ದೇವರೈಯುಂ ಅಶುರರೈಯುಂ ತಿಶೈಹಳೈಯುಂ ಕಡಲ್ಗಳೈಯುಮ್ ಮಱ್ಱುಂ ಮುಱ್ಱುಂ ಯಾವರೈಯುಂ ಒೞಿಯಾಮೇ ಎಂಬೆರುಮಾನ್ ಉಂಡುಮಿೞ್ನ್ದದಱಿಂದು .... ಪೂವಳರುಂ ತಿರುಮಹಳಾಲ್ ಅರುಳ್ ಪೆಱ್ಱುಪ್ ಪೊನ್ನುಲಹಿಲ್ ಪೊಲಿವರ್ ತಾಮೇ' (11.6.10) ಎಂಬಲ್ಲಿ ನಿಗಮಿಸಿದ್ದಾರೆ. ಇಂತಹ ಭಾಗವತರ ಸಂಗವೇ ಅಭಿಲಷಿಸತಕ್ಕದ್ದೆಂದು 'ಮಱ್ಱುಮೋರ್ ದೆಯ್ವಮುಳದೆನ್ನಿರುಪ್ಪಾರೋಡುಱ್ಱಿಲೇನ್ ಉಱ್ಱದುಂ ಉನ್ನಡಿಯಾರ್ಕ್ಕಡಿಮೈ, ಮಱ್ಱೆಲ್ಲಾಂ ಪೇಶಿಲುಂ ನಿನ್ ತಿರುವೆಟ್ಟೆೞುತ್ತುಂ ಕಱ್ಱು ನಾನ್' (8.10.3), 'ಪೆಱ್ಱಾರುಂ ಶುಱ್ಱಮುಂ ಎನ್ನಿವೈ ಪೇಣೇನ್ ನಾನ್ ಮಱ್ಱಾರುಂ ಪಱ್ಱಿಲೇನ್ ಆದಲಾಲ್ ನಿನ್ನಡೈಂದೇನ್, ಉಱ್ಱಾನೆನ್ನುಳ್ಳತ್ತು ವೈತ್ತು ಅರುಳೈಯ್ ಕಂಡಾಯ್' (8.10.5) ಎಂದು ಪ್ರಪತ್ತ್ಯನುಸಂಧಾನ ಪ್ರಕಾರವನ್ನೂ ತಿಳಿಸಿದ್ದಾರೆ. ಹೀಗರಿತು ಅನುಷ್ಠಿಸಿದಾಗ ಸಕಲಕರ್ಮಕ್ಷಯವುಂಟೆಂದು 'ಎನ್ನುಂ ವಿನೈಯಾಯಿನ ಶಾರಹಿಲ್ಲಾವೇ' (11.8.10) ಎಂದೂ ಹೇಳಿದೆ. 'ಅರಿವು ತರುಂ ಪೆರಿಯತಿರುಮೊೞಿ' ಎನ್ನಲ್ಪಟ್ಟಿರುವ ಈ ಪ್ರಬಂಧವು ಬಹುಗಂಭೀರವಾದುದೆಂಬುದು ವಿಶದ.

19. **ತಿರುಕ್ಕುಱುಂದಾಂಡಕ**ದಲ್ಲಿ - ಪರತತ್ತ್ವ ಸ್ವರೂಪವು, ಜಗಚ್ಛರೀರಿತ್ವವುಳ್ಳದ್ದೆಂದು 'ಕಾಱ್ಱಿನೈಪ್ಪುನಲೈತ್ತೀಯೈ' (2), 'ಮೂವರಿಲ್ ಮುದಲ್ವನಾಯ ಒರುವನೈ ಉಲಹಂ ಕೊಂಡ ಕೋವಿನೈ' (6) ಎಂದು ಜಗತ್ಕಾರಣತ್ವದೊಡನೆಯೂ,

'ವಾನಿಡೈಪ್ಪುಯಲ್ಲೈ ಮಾಲ್ಶೈ' (8) ಎಂದೂ, ದೇವಾಧಿದೇವತ್ವ 'ತೆಳ್ಳಿಯೀರ್ ದೇವರ್ಕ್ಕೆಲ್ಲಾಂ ದೇವರಾಯ್ ಉಲಹಂ ಕೊಂಡ ಒಳ್ಳಿಯೀರ್' (9), 'ಅಂಡಮಾಯ್ ಎಣ್ದಿಶೈಕ್ಕುಂ ಆದಿಯಾಯ್ ನೀತಿಯಾನ ಪಂಡಮಾಂ ಪರಮಶೋದಿ' (11), 'ವಾನವರ್ ತಂಗಳ್ ಕೋನುಂ ಮಲರ್ಮಿಶೈ ಅಯನುಂ ನಾಳುಂ ತೇಮಲರ್ ತೂವಿಯೇತ್ತುಂ ಶೇವಡಿಚ್ಚೆಂಗಣ್ಮಾಲೈ' (20) ಎಂದೂ ವಿಸ್ತರಿಸಿ ಲಕ್ಷ್ಮೀವೈಶಿಷ್ಟ್ಯವನ್ನು 'ಕರುಂಬಿನ್ ಶಾಱ್ರೈತ್ತಿರುವಿನ್ನೈ ಮರುವಿವಾಳಾರ್ ....' (8) ಎಂದು ಶ್ರೀಮನ್ನಾರಾಯಣನ ಪಾರಮ್ಯವನ್ನು ಪ್ರತಿಪಾದಿಸಿದ್ದಾರೆ. ಹಿತದ ವಿಚಾರವಾಗಿ 'ವಾಕ್ಕಿನಾಲ್ ಕರುಮಂ ತನ್ನಾಲ್ ಮನತ್ತಿನಾಲ್ ಶಿರತ್ತೈ ತನ್ನಾಲ್ ವೇಟ್ಕೈ ಮೀದೂರವಾಂಗಿ ವಿಟುಂಗಿನೇಱ್ಕು ಇನಿಯವಾಱೇ' (4) ಎಂದು ತ್ರಿಕರಣ ಶುದ್ಧಿ, ಶ್ರದ್ಧೆಯಿಂದ ಭಕ್ತಿಯನ್ನು ಉಪಾಯವಾಗಿ ವಿಧಿಸಿ, ಇಂತಹ ಧ್ಯಾನದ ಭೋಗ್ಯತಮತ್ವವನ್ನು 'ಮರುವಿ ಎನ್ನನತ್ತುವೈತ್ತುಕ್ ಕರುಂಬಿನಿನ್ ಶಾರು ಪೋಲಪ್ ಪರುಹಿನೇಱ್ಕು ಇನಿಯವಾಱೇ' (5) ಎಂದು ಹೇಳಿ ಈ ಭಕ್ತಿಯ ಪ್ರಕಾರವಾದ ಕೈಂಕರ್ಯಗಳನ್ನೆಲ್ಲ ಅಪೇಕ್ಷಿಸಿ, ಈ ಉಪಾಯಪೂರ್ತಿಯನ್ನೂ ಆ ಪರಮಾತ್ಮ ಮಾಡಿಸುವನೆಂದು 'ಅಂಜಲೆನ್ನು ಕಾವಿಪ್ಪೋಲ್ವಣ್ಣರ್ವಂದು ಎನ್ ಕಣ್ಣುಳ್ಳೇ ತೋನ್ರಿನಾರೇ' (12) ಎಂದು ವಿವರಿಸಿ ಪುರುಷಾರ್ಥವು 'ಒಳಿವಿಶುಂಬಾಳ್ವರ್ ತಾಮೇ' (20), 'ಮೆಯ್ಯ್ಮೈಯೈಕ್ಕಾಕ್ಕಿಱ್ಪರೇ' (18), 'ತನ್ನೈಯ್ಯೈ ನಿನೈವಾರ್ ಎನ್ತನ್ ತಲೈ-ಮಿಶೈ ಮನ್ನುವಾರೇ' (7) ಎಂದೂ ಭಾಗವತಕೈಂಕರ್ಯ ಪರ್ಯಂತವಾಗಿದೆ ಎಂದು ತಿಳಿಸಿದ್ದಾರೆ.

20. **ತಿರುನೆಡುಂದಾಂಡಕ**ದಲ್ಲಿ ಬಹುರಮ್ಯವಾಗಿ ತತ್ತ್ವಪ್ರತಿಪಾದನೆಯಾಗಿದೆ. ಪರಮಾತ್ಮಲಕ್ಷಣಗಳನ್ನೆಲ್ಲ ಮೊದಲ ಹಾಡಿನಲ್ಲೇ 'ಮಿನ್ನುರುವಾಯ್ ಮುನ್ನುರುವಿಲ್ ವೇದಂ ನಾನ್ಗಾಯ್ ವಿಳಕ್ಕೊಳಿಯಾಯ್ ಮುಳೈತ್ತೆಟುಂದ ತಿಂಗಳ್ ತಾನಾಯ್, ಪಿನ್ನುರುವಾಯ್ ಮುನ್ನುರುವಿಲ್ ಪಿಣಿಮೂಪ್ಪಿಲ್ಲಾಪ್ಪಿಱಪ್ಪಿಲಿಯಾಯ್ ಇಱಪ್ಪದಱ್ಕೇ ಎಣ್ಣಾದು, ಎಣ್ಣುಂ ಪೊನ್ನುರುವಾಯ್ ಮಣಿಯುರುವಿಲ್ ಪೂದಮೈಂದಾಯ್ ಪುನಲುರುವಾಯ್ ಅನಲುರುವಿಲ್ ತಿಹಟುಂ ಶೋದಿ ತನ್ನುರುವಾಯ್ ಎನ್ನುರುವಿಲ್ ನಿನ್ಱ ಎಂದೈ ತಳಿರ್ಪುರೈಯುಂ ತಿರುವಡಿ ಎನ್ತಲೈ ಮೇಲವೇ' (1) ಎಂದು ವೇದ ಪ್ರವರ್ತಕತ್ವ, ಜಗತ್ಕಾರಣತ್ವ, ಗುಣಾಷ್ಟಕವತ್ತ್ವ, ಜಗಚ್ಛರೀರಿತ್ವ, ದಿವ್ಯಮಂಗಳ ವಿಗ್ರಹವತ್ತ್ವ ಇತ್ಯಾದಿಗಳೊಡನೆ ಶರಣ್ಯತ್ವವೂ ಹೇಳಿದೆ. ಮುಂದೆ ಪರತತ್ತ್ವ ಶ್ರೀಮನ್ನಾರಾಯಣನೆಂಬುದನ್ನು ಸ್ಪಷ್ಟವಾಗಿ 'ಮೂವುರುವುಂ ಕಂಡ ಪೋದು ಒನ್ರಾಂ ಶೋದಿ ಮುಹಿಲುರುವಂ ಎಮ್ಮಡಿಹಳ್ ಉರುವಂ ತಾನೇ' (2) ಎಂದು ಜಗದಾತ್ಮಕತ್ವದಿಂದ ನಿರ್ಧರಿಸಿದ್ದಾರೆ. ಮುಂದೆ ಇಂತಹ ಜ್ಞಾನದೊಡನೆ ಈ ತತ್ತ್ವವನ್ನು ಶರಣು ಹೊಂದುವ ಪ್ರಪತ್ತಿಯೇ ಉಪಾಯವೆಂದು 'ಇಂದಿರಱ್ಕುಂ ಪಿರಮಱ್ಕುಂ ಮುದಲ್ವನ್ ತನ್ನೈ ಇರುನಿಲುಂ ಕಾಲ್ತೀ ನೀರ್ ವಿಣ್ ಪೂದಮೈಂದಾಯ್ ಶೆಂದಿರತ್ತ ತಮಿಟೋಶೈ ವಡಶೊಲ್ಲಾಹಿ ತಿಶೈ ನಾನ್ಗುಮಾಯ್ ತಿಂಗಳ್ ಞಾಯಿರಾಹಿ, ಅಂದರತ್ತಿಲ್ ದೇವರ್ಕ್ಕುಂ ಅಱಿಯಲಾಹಾ ಅಂದಣನ್ನೈ ಅಂದಣರ್ ಮಾಟ್ಟಂದಿ ವೈತ್ತ ಮಂದಿರತ್ತೈ ಮಂದಿರತ್ತಾಲ್ ಮರವಾದೆನ್ನುಂ ವಾಟುದಿಯೇಲ್ ವಾಟಲಾಂ ಮಡ-ನೆಂಜಮೇ' (4) ಎಂದು ಅಷ್ಟಾಕ್ಷರದಿಂದ ಈ ಅರ್ಥ ದೊರೆಯುವುದೆಂದು ಸೂಚಿಸಿದ್ದಾರೆ. ಅದರ ಮನನವೂ ವಿಧಿಸಿದೆ. ಈ ಉಪಾಯವೇ ಮುಂದೆಯೂ 'ಮಲರ್ ಪುರೈಯುಂ ತಿರುವಡಿಯೇ ವಣಂಗಿನೇನೇ' (5), 'ಪೇರಾದು ಎನ್ನೆಂಜಿನುಳ್ಳಾಯ್! ಪೆರುಮಾನ್ ಉನ್ತಿರುವಡಿಯೇ ಪೇಣಿನೇನೇ' (8), 'ಪಾರಿಡಂದು ಪಾರೈಯುಂಡು ಪಾರುಮಿಟ್ರು ಪಾರಳಂದು ಪಾರೈ-ಯಾಂಡ ಪೇರಾಳನ್ ಪೇರೋದುಂ ಪೆಣ್ಣೈ ಮಣ್ಮೇಲ್ ಪೆರುಂದವತ್ತಳೆನ್ನಲ್ಲಾಲ್ ಪೇಶಲಾಮೇ' (20), 'ಓರ್ಮಾದು ನಿನ್ ನಯಂದಾಳ್' (26), 'ಎನ್ನಿಲ್ ಅಂಗಮೆಲ್ಲಾಂ ವಂದು ಇನ್ಬಮೆಯ್ದ ಎಪ್ಪೊಟುದುಂ ನಿನ್ನೈಂದುರಹಿಯಿರುಪ್ಪನ್ ನಾನೇ' (28), 'ನೆಡಿಯಾನ್ನೈ ಅಡಿನಾಯೇನ್ ನಿನ್ನೈಂದಿಟ್ಟೇನೇ' (29) ಎಂದೂ ವಿವರಿಸಲ್ಪಟ್ಟಿದೆ. ಇಂತಹ ಉಪಾಯಾನುಷ್ಠಾನ ಮಾಡುವವರಿಗೆ ಸರ್ವಕರ್ಮಕ್ಷಯ ವೇರ್ಪಟ್ಟು ಪರಮಾತ್ಮ ಸಾಯುಜ್ಯಾವಾಪ್ತಿಯು 'ಅನ್ನಮಾಯ್ ಮುನಿವರೋಡ-ಮರರ್ ಏತ್ತ ಅರುಮಾಱೈಯ್ಯೈ ವೆಳಿಪ್ಪಡುತ್ತ ಅಮ್ಮಾನ್ ತನ್ನೈ .... ತೊಲ್ಲೈಪ್ಪಟಿವಿನ್ನೈಯ್ಯೈ ಮುದಲರಿಯ ವಲ್ಲಾರ್ ತಾಮೇ' (30) ಎಂದು ಹೇಳಲಾಗಿದೆ.

21. **ತಿರುವೆಟುಕೂಱ್ಱಿರುಕ್ಕೈ** ಎಂಬ ಒಂದೇ ಹಾಡಿನ (48 ಸಾಲಿನ) ಗ್ರಂಥವು ಚೊಕ್ಕವಾಗಿ ತತ್ತ್ವ ನಿರೂಪಣೆ ಮಾಡಿದೆ. ತತ್ತ್ವವು ಶ್ರೀಮನ್ನಾರಾಯಣನೆಂಬುದನ್ನು 'ಆಡರಮಳಿಯಿಲ್ ಅಱಿತುಯಿಲ್ ಅಮರ್ನ್ದಪರಮ' ಎಂದೂ 'ಒರುಮುಱೈ ಅಯನ್ನೈ ಈನ್ರನ್ನೈ' ಎಂದು ಜಗತ್ಕಾರಣತ್ವವನ್ನೂ, 'ಆಂಗು ಇರುಪಿಱಪ್ಪಱುಪ್ಪೋರ್ ಅಱಿಯುಂ ತನ್ನೈಯ್ಯೈ' ಎಂದು ಯೋಗಿ ಹೃದ್ಧ್ಯಾನಗಮ್ಯನೆಂದೂ, 'ಏಟುಲಹು ಎಯಿಱ್ಱಿನಿಲ್ ಕೊಂಡನ್ನೈ' ಎಂದು ಕಾರಣತ್ವವನ್ನೂ, 'ಮೇದಹುಂ ಐಂಪೆರುಂ ಪೂದಮುಂ ನೀಯೇ' ಎಂದು ಸರ್ವಶರೀರಿತ್ವವೂ ತಿಳಿಸುತ್ತವೆ ಎಂದಿದೆ. ಮುಂದೆ ಉಪಾಯವು 'ಅಂದಣರ್ ಮಂದಿರ ಮೊಟಿಯುಡನ್ ವಣಂಗ .... ನಿನ್ನಡಿಯಿಣೈ ಪಣಿವನ್' ಎಂದೂ ಹೇಳಲ್ಪಟ್ಟು ಪುರುಷಾರ್ಥವು 'ವರುಮಿಡರಹಲ ಮಾಱ್ಱೋ ವಿನ್ನೈಯೇ' ಎಂದು ಹೇಳಲ್ಪಟ್ಟಿದೆ.

22. **ಶಿಱಿಯ ತಿರುಮಡಲ್ನಲ್ಲಿ** - 'ಕಾರಾರ್ಪುರವಿಯೇಟ್ ಪೂಂಡತನಿಯಾಟಿತ್ ತೇರಾರ್ ನಿಱೈಕದಿರೋನ್ ಮಂಡ-

ಲತ್ತೈಕ್ ಕೀಂಡು ಪುಕ್ಕು ಆರಾವಮುದಂ ಅಂಗೆಯ್ದಿ' (4) ಎಂದು ಅಪ್ರಾಕೃತದೇಶವರ್ತಿಯಾದ ಶ್ರೀಮನ್ನಾರಾಯಣನನ್ನು ಪರತತ್ತ್ವವೆಂದು 'ಆರಾಲ್ ಇವ್ವೈಯಂ ಅಡಿಯಳಪ್ಪುಂಡದು ತಾನ್?' (16) ಎಂಬ ಜಗದ್ವ್ಯಾಪಿತ್ವದಿಂದ ಸ್ಥಾಪಿಸಿ, ಅವನ ಪ್ರಾಪ್ತಿಗೆ ಉಪಾಯವನ್ನು ಭಕ್ತಿಪೂರ್ವಕವಾದ ಕೀರ್ತನಾದಿಗಳೆಂದು 'ಕಡಲ್ವಣ್ಣನ್ ಪಿನ್ ಪೋನ ನೆಂಜಮುಂ' (31) ಎಂದೂ, 'ಪೇರಾಪ್ಪಿದಱ್ಱಾತ್ ತಿರಿತರುವನ್' (28), 'ಉತ್ತಮನ್ ತನ್ ಪೇರಾಯಿನವೇ ಪಿದಱ್ಱುವನ್' (34), 'ಎಣ್ಣರುಂಶೀರ್ಪ್ ಪೇರಾಯಿರಮುಂ ಪಿದಱ್ಱಿ' (39) ಇತ್ಯಾದಿಗಳಿಂದ ಅರಿತರೆ ಪುರುಷಾರ್ಥವಾದ ಭಗವದನುಭವ ಲಭಿಸುವುದು ಎಂದು 'ಮಣಿವಣ್ಣನ್ ಶೀರಾರ್ ತಿರುತ್ತುೞಾಯ್ ಮಾಲ್ಯೈ ನಮಕ್ಕರುಳಿ .... ತರುಂ' (31) ಎಂಬಲ್ಲಿ ನಿರೂಪಿಸಿದೆ.

23. **ಪೆರಿಯ ತಿರುಮಡ**ಲ್ನಲ್ಲಿ ತತ್ತ್ವವು 'ಮನ್ನಿಯ ತಾಮರೈ ಮಾಮಲರ್ ಪೂತ್ತು ಅಮ್ಮಲರ್ ಮೇಲ್ ಮುನ್ನಂ ತಿಶೈಮುಹನೈತ್ತಾನ್ ಪಡೈಕ್ಕ' (4) ಎಂದು ಕಾರಣತ್ವವೂ, 'ತಾಮರೈ ಮೇಲ್ ಮಿನ್ನಿಡೈಯಾಳ್ ನಾಯಕನೈ' (53) ಎಂದು ಶ್ರಿಯಃಪತಿತ್ವವೂ, 'ವಾನವರ್ ತಂ ಶೆನ್ನಿ ಮಣಿಚ್ಚುಡರೈ' (59) ಎಂದು ದೇವಾಧಿದೇವತ್ವವೂ, 'ಅರುಮಱೈಯೈ ಮುನ್ನಿವ್ವುಲಹುಂಡ ಮೂರ್ತ್ತಿಯೈ' (59) ಎಂದು ವೇದಪ್ರವರ್ತಕತ್ವ, ವಾಚ್ಯತ್ವಗಳೂ, ಜಗತ್ಕಾರಣತ್ವವೂ ಕೂಡಿರುವ ಶ್ರೀಮನ್ನಾರಾಯಣನೇ ಎಂದೂ, 'ಎನ್ಮನತ್ತು ಮಾಲ್ಯೈ' (58), 'ಎನ್ನೈ ಮನಂ ಕವರ್ನ್ದ ಈಶನೈ' (64), 'ಎನ್ನುಡೈಯ ನೆಂಜುಂ ಅಱಿವುಂ ಇನವಳೈಯುಂ .... ಮನ್ನು ಮಱಿಕಡಲುಂ ಆರ್ಕ್ಕುಂ' (39) ಎಂದೆಲ್ಲ ಪ್ರೀತಿಪೂರ್ವಕವಾದ ಅನುಧ್ಯಾನವೇ ಉಪಾಯವಾಗಿಯೂ, ಇದು ದುಷ್ಕರವಾದ ಭಕ್ತಿಯೋಗಾದ್ಯುಪಾಯಗಳಿಂದ ಲಭಿಸುವ ಫಲವನ್ನು ಕೊಡುವುದೆಂದು 'ಓರ್ ತೊನ್ನೆಱಿಯೈ ವೇಂಡುವಾರ್ ವೀೞ್ ಕನಿಯುಂ ಊೞಿಲ್ಯೈಯುಂ .... ಈಂಗುಡಲಂ ವಿಟ್ಟೈೞುಂದು ತೊನ್ನೆಱಿಕ್ಕಣ್ಣೈನ್ನಾರ್ .... ' (7) ಎಂಬಲ್ಲಿ ತಿಳಿಸಿ, ಇಂತಹ ಉಪಾಯ(ಪ್ರಪತ್ತಿ)ನಿಷ್ಠರು ಪರಮಾತ್ಮ ಅನುಭವವನ್ನು ಪಡೆಯುವರೆಂದು ಅನೇಕ ದಿವ್ಯದೇಶಗಳಲ್ಲಿ ಬಿಜಯ ಮಾಡಿರುವ ಅರ್ಚಾಮೂರ್ತಿಗಳನ್ನು ಸೇವಿಸಿ 'ಕಂಡಾಂಗುಕ್ಕೈತೊೞುದು ಎನ್ನಿಲೈಮೈಯೆಲ್ಲಾಂ ಅಱಿವಿತ್ತಾಲ್ ಎಂಬೆರುಮಾನ್ ತನ್ ಅರುಳುಂ ಆಹಮುಂ' (68) ತರುಂ ಎಂದು ನಿರೂಪಿತವಾಗಿದೆ. ಹೀಗೆ ಕರುಣಿಸದಿದ್ದಲ್ಲಿ ಅವನನ್ನು ದೂರಿ ವೈದಿಕ, ಭಾಗವತ ಸಮಕ್ಷದಲ್ಲಿ ಆತನ ಅನುಭವವನ್ನು ಪಡೆಯಬಹುದೆಂದೂ 'ಮಡಲಾ' ಎಂಬ ಕ್ರಮದಲ್ಲಿ ತಿಳಿಸಿದೆ.

24. **ರಾಮಾನುಶನೂಱ್ಱಂದಾದಿ**ಯೂ ಕಣ್ಣಿನುಣ್ ಶಿರುತ್ತಾಂಬಿನಂತೆ ಆಚಾರ್ಯಸ್ತೋತ್ರವಾಗಿದ್ದು ಭಗವಂತನಂತೆ ಆಚಾರ್ಯನೂ ಉಪಾಸ್ಯನೆಂದು ತಿಳಿಸುತ್ತದೆ. ಇಲ್ಲಿ ಭಗವದ್ರಾಮಾನುಜರು ಸ್ತುತಿಸಲ್ಪಟ್ಟಿದ್ದಾರೆ, ತಿರುವರಂಗತ್ತಮುದನಾರ್ ಎಂಬ ಭಕ್ತರಿಂದ. ಇಲ್ಲಿ ನಮ್ಮಾೞ್ವಾರ್ ಮುಂತಾದ ಆಚಾರ್ಯರುಗಳನ್ನೂ ಆೞ್ವಾರ್ಗಳನ್ನೂ ಅನವರತ ಧ್ಯಾನಿಸುತ್ತ ಅವರ ಅನುಗ್ರಹದಿಂದಲೂ, ದಿವ್ಯಪ್ರಬಂಧಗಳಿಂದಲೂ ಸಿದ್ಧಾಂತಸ್ಥಾಪನವನ್ನೂ, ಕೂರತ್ತಾೞ್ವಾನ್ ಮುಂತಾದ ಸಚ್ಛಿಷ್ಯರನ್ನು ಉಪದೇಶಾದಿಗಳಿಂದ ಉಜ್ಜೀವಿಸುವಂತೆ ಮಾಡುವ ಭಾಷ್ಯಕಾರರ ಪ್ರಭಾವ ವಿಸ್ತಾರವಾಗಿ ವಿಶದಪಡಿಸಿದೆ.

ಹೀಗೆ ದ್ರಾವಿಡ ದಿವ್ಯ ಪ್ರಬಂಧಗಳಿಂದ ವಿಶಿಷ್ಟಾದ್ವೈತ ತತ್ತ್ವಗಳು ವಿಶದವಾಗುವುದನ್ನು ದಿಙ್ಮಾತ್ರ ತೋರಿಸಿದೆವು. ಇಂತಹ ಪ್ರಮಾಣಗಳ ಅಡಿಗಲ್ಲಿನ ಮೇಲೆ ನೆಲೆಸಿರುವುದರಿಂದಲೇ ಈ ಸಿದ್ಧಾಂತವು ವೈದಿಕರ, ಭಾಗವತರ ಜ್ಞಾನಾನುಷ್ಠಾನಗಳಲ್ಲಿ ಶೋಭಿಸುತ್ತಿದೆ.

ಇದರಲ್ಲಿನ ಯಾವುದೇ ಒಳ್ಳೆಯ ಅಂಶವೂ ಸದಾಚಾರ್ಯರ ಅನುಗ್ರಹಲಬ್ಧವೆಂದೂ, ದೋಷೋಕ್ತಿಗಳಿದ್ದಲ್ಲಿ ಅವು ದಾಸನ ಮತಿಮಾಂದ್ಯದಿಂದುಂಟಾದವೆಂದು ವಿಜ್ಞಾಪಿಸಿ ಈ ಕೃತಿಯಿಂದ ಪರಮಪುರುಷನು ಪ್ರೀತನಾಗಲೆಂದೂ ತದೀಯರು ಸಂತುಷ್ಟರಾಗಲೆಂದೂ ಪ್ರಾರ್ಥಿಸುತ್ತೇನೆ.

ಶುಭಮಸ್ತು

# ಅನುಬಂಧ

**ಪದಾರ್ಥಗಳು**

- **ಪ್ರಮಾಣ (ಜ್ಞಾನ ಸಾಧನ)**
  - **ಪ್ರತ್ಯಕ್ಷ** (ಇಂದ್ರಿಯ ಜನ್ಯ)
    - ಸಾಮಾನ್ಯ
    - ಸ್ಮೃತಿ
    - ಯೋಗಜ
  - **ಅನುಮಾನ** (ವ್ಯಾಪ್ತಿ ಜನ್ಯ)
    - ವ್ಯಾಪ್ತಿ
    - ಪಕ್ಷಧರ್ಮತಾ
    - ಉಪಮಾನ
    - ಅರ್ಥಾಪತ್ತಿ
    - ಐತಿಹ್ಯ
    - ಅನುಪಲಬ್ಧಿ
  - **ಶಬ್ದ(ಆಪ್ತ ವಾಕ್ಯಾದಿ ಜನ್ಯ)**
    - <u>ಅಪೌರುಷೇಯ</u>
      - ವೇದಗಳು (4)
      - ವಿಧಿ
      - ಮಂತ್ರ
      - ಬ್ರಾಹ್ಮಣ
      - ಅರ್ಥವಾದ
      - ಸಂಹಿತಾ
      - ಉಪನಿಷತ್
    - <u>ಪೌರುಷೇಯ</u>
      - ಸ್ಮೃತಿಗಳು
      - ವೇದಾಂಗಗಳು
      - ಇತಿಹಾಸಗಳು
      - ಪುರಾಣಗಳು
      - ಆಗಮಗಳು
      - ಧರ್ಮಶಾಸ್ತ್ರಗಳು
      - ದ್ರಾವಿಡ ಪ್ರಬಂಧಗಳು
      - ಪೂರ್ವಾಚಾರ್ಯರ ಕೃತಿಗಳು
      - ಲೌಕಿಕ
- **ಪ್ರಮೇಯ (ಜ್ಞಾನ ವಿಷಯ)**
  - **ದ್ರವ್ಯ (ಅವಸ್ಥಾಶ್ರಯ)**
    - <u>ಜಡ</u>
      - ಪ್ರಕೃತಿ (ತ್ರಿಗುಣ)
      - ಕಾಲ
    - <u>ಅಜಡ (ಸ್ವಯಂ ಪ್ರಕಾಶ)</u>
      - <u>ಪ್ರತ್ಯಕ್ (ಆತ್ಮ)</u>
        - ಜೀವಾತ್ಮ
        - ಪರಮಾತ್ಮ
      - <u>ಪರಾಕ್ (ಅನಾತ್ಮ)</u>
        - ಧರ್ಮಭೂತಜ್ಞಾನ
        - ನಿತ್ಯವಿಭೂತಿ
  - **ಅದ್ರವ್ಯ (ಗುಣ, ಕರ್ಮ,..)**
    - ಸತ್ವ
    - ರಜಸ್
    - ತಮಸ್
    - ಶಬ್ದ
    - ಸ್ಪರ್ಶ
    - ರೂಪ
    - ರಸ
    - ಗಂಧ
    - ಸಂಯೋಗ
    - ಶಕ್ತಿ

(ಅಥವಾ)

<u>ಪ್ರಮೇಯ</u>

- <u>ಚೇತನ (ಜೀವಾತ್ಮ)</u>
  - ಬದ್ಧ
  - ಮುಕ್ತ
  - ನಿತ್ಯ
- <u>ಅಚೇತನ</u>
  - ಪ್ರಕೃತಿ
  - ಕಾಲ
  - ನಿತ್ಯವಿಭೂತಿ (ಶುದ್ಧಸತ್ವ)
  - ಧರ್ಮಭೂತಜ್ಞಾನ
- <u>ಈಶ್ವರ</u>
  - ಪರ
  - ವ್ಯೂಹ
  - ವಿಭವ
  - ಅರ್ಚಾ
  - ಅಂತರ್ಯಾಮೀ

- ವೇದಗಳು - 4 - ಋಕ್, ಯಜುಸ್, ಸಾಮ, ಅಥರ್ವಣ
- ಸ್ಮೃತಿಗಳು - ಮನುಸ್ಮೃತಿ, ಯಾಜ್ಞವಲ್ಕ್ಯಸ್ಮೃತಿ, ಪರಾಶರಸ್ಮೃತಿ ಮುಂತಾದವು, ಭಗವದ್ಗೀತೆ
- ಇತಿಹಾಸಗಳು - 2 - ರಾಮಾಯಣ ಮತ್ತು ಮಹಾಭಾರತ
- ಪುರಾಣಗಳು - ಶ್ರೀವಿಷ್ಣುಪುರಾಣ, ಶ್ರೀಮದ್ಭಾಗವತ, ಸಾತ್ವಿಕ ಪುರಾಣಗಳು
- ಆಗಮಗಳು - ಶ್ರೀಪಾಂಚರಾತ್ರ ಆಗಮ, ವೈಖಾನಸ ಆಗಮ
- ಧರ್ಮಶಾಸ್ತ್ರಗಳು - ಆಪಸ್ತಂಬ, ಬೋಧಾಯನಾದಿ ಪ್ರಣೀತ ಸೂತ್ರ ಮುಂತಾದವು
- ದ್ರಾವಿಡ ಪ್ರಬಂಧಗಳು - ಆಳ್ವಾರ್‌ಗಳ ಕೃತಿಗಳು ಮುಂತಾದವು 13 ಆಳ್ವಾರ್‌ಗಳು, 4000 ಹಾಡುಗಳು
- ಪೂರ್ವಾಚಾರ್ಯಕೃತಿಗಳು- ನಾಥಮುನಿಗಳು, ಯಾಮುನಾಚಾರ್ಯರು, ಭಾಷ್ಯಕಾರರು, ವೇದಾಂತದೇಶಿಕರು ಮುಂತಾದ ಆಚಾರ್ಯರ ಗ್ರಂಥಗಳು

ತಿರು

Date: 3.1.92.

Dear Sri. Ramanujam,

Trust this finds you and your family in good health and cheer. How is your work?

Enclosed herewith the extracts of an article published in VIPRANUDI - a periodical from Akhila Karnataka Brahmana Maha Sabha. The writer has made an attempt to establish "Sandhyavandam to be performed twice daily". We thought you are the right person to answer him quoting from Scriptures and Dharmashasthras.

You may please send your reply to us and we shall forward the same to VIPRANUDI.

When are you visiting Bangalore?

With regards,
Yours sincerely,

Tiru Iyengar
(Tiru Iyengar).

rg/gnr.

अहर्निशं सेवामहे